



## ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ.
## ಹಾಸನ ಜಿಲ್ಲೆ









# ಎಸ್.ಎಸ್.ಎಲ್.ಸಿ
# ವಿದ್ಯಾರ್ಥಿ ಜ್ಞಾನ ದೀವಿಗೆ



## ಪ್ರಥಮ ಭಾಷೆ ಕನ್ನಡ

**ಹಾಸನ ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘ (ರಿ)**

# : ಸಾಮಾನ್ಯ ಸೂಚನೆಗಳು :

- ❖ **ಈ** ಕೈಪಿಡಿಯನ್ನು ನೂತನ ಪಠ್ಯಪುಸ್ತಕ ಹಾಗೂ ನೂತನ ಮೌಲ್ಯಮಾಪನ ವಿಧಾನಕ್ಕನುಗುಣವಾಗಿ ಸಿದ್ಧಪಡಿಸಲಾಗಿದೆ. ನೂತನ ಮೌಲ್ಯಮಾಪನವು ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಎರಡು ವಿಧಾನಗಳನ್ನೊಳಗೊಂಡಿದ್ದು, ಈ ಕೈಪಿಡಿಯು ಸಂಕಲನಾತ್ಮಕ ಮೌಲ್ಯಮಾಪನಕ್ಕೆ ಮಾರ್ಗಸೂಚಿಯಾಗಿದೆ.

- ❖ ನೂತನ ಸಂಕಲನಾತ್ಮಕ ಮೌಲ್ಯಮಾಪನವು ಪ್ರಥಮ ಭಾಷಾ ವಿಷಯಕ್ಕೆ 100 ಅಂಕಗಳಿಗೆ ನಡೆಯಲಿದ್ದು, ಪ್ರಶ್ನೆಪತ್ರಿಕೆಯು ಎ, ಬಿ, ಸಿ, ಎಂದು ಮೂರು ಭಾಗಗಳನ್ನು ಒಳಗೊಂಡಿರುತ್ತದೆ. 'ಎ' ವಿಭಾಗವು **ಗದ್ಯ, ಪದ್ಯ, ಪೋಷಕಅಧ್ಯಯನ**ಗಳನ್ನೊಳಗೊಂಡಿರುತ್ತದೆ. 'ಬಿ' ವಿಭಾಗವು **ವ್ಯಾಕರಣ, ಛಂದಸ್ಸು, ಅಲಂಕಾರ**ಗಳನ್ನು ಒಳಗೊಂಡಿರುತ್ತದೆ. 'ಸಿ' ವಿಭಾಗವು **ಗಾದೆವಿಸ್ತರಿಸಿಬರೆಯುವುದು, ಪತ್ರಲೇಖನ ಮತ್ತು ಪ್ರಬಂಧವನ್ನು** ಒಳಗೊಂಡಿರುತ್ತದೆ.

- ❖ 'ಎ' ವಿಭಾಗವು ಗದ್ಯ– 30 ಅಂಕಗಳಿಗೆ, ಪದ್ಯ – 30 ಅಂಕಗಳು ಹಾಗೂ ಪೋಷಕ ಅಧ್ಯಯನ – 07 ಅಂಕಗಳಿಗೆ ಒಟ್ಟು 67 ಅಂಕಗಳದ್ದಾಗಿರುತ್ತದೆ. 'ಬಿ' ವ್ಯಾಕರಣ – 14 ಅಂಕಗಳು, ಛಂದಸ್ಸು – 3 ಅಂಕಗಳು, ಅಲಂಕಾರ – 3 ಅಂಕಗಳು ಒಟ್ಟು – 20 ಅಂಕಗಳದ್ದಾಗಿರುತ್ತದೆ. 'ಸಿ' ವಿಭಾಗವು ಗಾದೆವಿಸ್ತರಿಸಿಬರೆಯುವುದು – 3 ಅಂಕಗಳು, ಪತ್ರಲೇಖನ – 5 ಅಂಕಗಳು ಮತ್ತು ಪ್ರಬಂಧ ಬರವಣಿಗೆ – 5 ಅಂಕಗಳನ್ನು ಒಟ್ಟು 13 ಅಂಕಗಳನ್ನು ಒಳಗೊಂಡಿರುತ್ತದೆ.

- ❖ ಈ ಕೈಪಿಡಿಯಲ್ಲಿ ಮುದ್ರಣ ದೋಷಗಳಿದ್ದಲ್ಲಿ ಶಿಕ್ಷಕರು ಸರಿಪಡಿಸಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ಕೋರಿದೆ.

- ❖ ಈ ಕೈಪಿಡಿಯು ಕೇವಲ ನೂತನ ಪರಿಕ್ಷಾ ವಿಧಾನಕ್ಕೆ ಮಾರ್ಗಸೂಚಿಯೇ ವರತೂ ಇದೇ ಪರಿಪೂರ್ಣವೆನಿ – ಸದು. ಹೆಚ್ಚಿನ ಜ್ಞಾನಾರ್ಜನೆಗೆ ಪಠ್ಯಪುಸ್ತಕದ ಅಭ್ಯಾಸ ಸೂಕ್ತವಾಗಿದೆ.

- ❖ ಈ ಕೈಪಿಡಿಯಲ್ಲಿ ಇನ್ನೇನಾದರೂ ಸೇರ್ಪಡೆಯ ಅಗತ್ಯವಿದ್ದಲ್ಲಿ ಸೂಕ್ತ ಮಾಹಿತಿಗಳನ್ನು ಉಪನಿರ್ದೇಶಕರ ಕಛೇರಿಯ ಕನ್ನಡ ಭಾಷಾ ವಿಷಯ ಪರಿವೀಕ್ಷಕರಿಗೆ ಸಿದ್ಧಪಡಿಸಿದ ಮಾಹಿತಿಯನ್ನು ನೀಡುವಂತೆ ಕೋರಿದೆ.

- ❖ ಈ ಕೈಪಿಡಿಯ ಬಗ್ಗೆ ಸಲಹೆ ಅಥವಾ ಹೆಚ್ಚಿನಮಾಹಿತಿಗಾಗಿ ಈ ಕೆಳಕಂಡ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.


1. ಶ್ರೀ ಹೆಚ್.ಸಿ. ಚನ್ನಯ್ಯ ವಿಷಯ ಪರಿವೀಕ್ಷಕರು – 9449461052
2. ಶ್ರೀ ಹೆಚ್.ಸಿ.ತಮ್ಮಣ್ಣಗೌಡ ಕನ್ನಡ ಭಾಷಾ ಶಿಕ್ಷಕರು – 9448338480

## : ಪ್ರಧಾನ ಸಲಹಗಾರರು :

ಶ್ರೀ ಸಿ.ಎಸ್.ಕಾಂತರಾಜು , ಉಪನಿರ್ದೇಶಕರು ( ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಹಾಸನ.

## : ಮಾರ್ಗದರ್ಶನ :

ಶ್ರೀ ಡಿ.ಟಿ.ಪುಟ್ಟರಾಜು, ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಸನ.
ಶ್ರೀ ಎಸ್.ರುದ್ರೇಶ್, ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ.

## : ವಿಷಯ ಸಂಪಾದಕರು :

ಶ್ರೀ ಹೆಚ್.ಸಿ. ಚನ್ನಯ್ಯ, ವಿಷಯ ಪರಿವೀಕ್ಷಕರು, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಸನ.

## : ಸಹ ಸಂಪಾದಕರು :

ಶ್ರೀ ಹೆಚ್.ಸಿ.ತಮ್ಮಣ್ಣಗೌಡ, ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು.

## : ವಿಷಯ ಸಿದ್ಧ ಪಡಿಸಿದವರು :

| | | | | |
|---|---|---|---|---|
| 1 | ಅರಕಲಗೂಡು | 1 | ಎ.ವಿ.ಯೋಗೀಶ್ | ಸರ್ಕಾರಿ ಪ್ರೌಢಶಾಲೆ, ಬೆಳವಾಡಿ |
| | | 2 | ವೀರಣ್ಣ ದುದ್ದಗಿ | ಸರ್ಕಾರಿ ಪ್ರೌಢಶಾಲೆ, ಕತ್ತಿಮಲ್ಲೇನಹಳ್ಳಿ |
| 2 | ಅರಸೀಕೆರೆ | 3 | ಕೆ. ರಮೇಶ | ಸರ್ಕಾರಿ ಪ್ರೌಢಶಾಲೆ, ಕುರುವಂಕ |
| | | 4 | ಕೆ.ಸಿ.ನಟರಾಜ | ಸರ್ಕಾರಿ ಪ್ರೌಢಶಾಲೆ, ಚಿಕ್ಕೂರು |
| 3 | ಆಲೂರು | 5 | ಲಕ್ಷ್ಮಣ ಯಲ್ಲಪ್ಪ ಉಳ್ಳೇಗೇರಿ | ಸರ್ಕಾರಿ ಪ್ರೌಢಶಾಲೆ, ದೊಡ್ಡಕಣಗಾಲ್ |
| | | 6 | ಶಶಿಕಾಂತ ಅಗಸರ | ಸರ್ಕಾರಿ ಪ್ರೌಢಶಾಲೆ, ಹೊನ್ನೇನಹಳ್ಳಿ ಕೂಡಿಗೆ |
| 4 | ಚನ್ನರಾಯಪಟ್ಟಣ | 7 | ಉಮೇಶ | ನವೋದಯ ಪ್ರೌಢಶಾಲೆ ಚನ್ನರಾಯಪಟ್ಟಣ |
| | | 8 | ಹೆಚ್.ಲೋಕೇಶ | ದರ್ಶಿನಿ ಪ್ರೌಢಶಾಲೆ ( ಬಾಲಿಕಾ ) ನುಗ್ಗೇಹಳ್ಳಿ |
| 5 | ಬೇಲೂರು | 9 | ಕೆ.ಎಂ.ಪಾಪೇಗೌಡ | ಸರ್ಕಾರಿ ಪ್ರೌಢಶಾಲೆ, ಹಗರೆ |
| | | 10 | ಕೆ.ವಿ.ಆನಂದ | ಸರ್ಕಾರಿ ಪ್ರೌಢಶಾಲೆ, ಮಲ್ಲಾಪುರ |
| 6 | ಸಕಲೇಶಪುರ | 11 | ಎಂ.ಜಿ. ವಾಣಿಗಟ್ಟಿ | ಸರ್ಕಾರಿ ಪದವಿ ಪೂರ್ವಕಾಲೇಜು ಸಕಲೇಶಪುರ |
| | | 12 | ಸಂತೋಷ ಹೆಗ್ಗಡೆ | ಸಂತ ಜೋಸೆಫರ ಪ್ರೌಢಶಾಲೆ ಸಕಲೇಶಪುರ |
| 7 | ಹಾಸನ | 13 | ದೇವರಾಜೇಗೌಡ | ಶ್ರೀ ವೆಂಕಟೇಶ್ವರ ಪ್ರೌಢಶಾಲೆ ಹಾಸನ ನಗರ |
| | | 14 | ಷಡಕ್ಷರಿ | ಸರ್ಕಾರಿ ಪ್ರೌಢಶಾಲೆ, ವಿದ್ಯಾನಗರ, ಹಾಸನ |
| 8 | ಹೊಳೆನರಸೀಪುರ | 15 | ಎಸ್.ಸಿ.ಗಣೇಶ | ಸರ್ಕಾರಿ ಪ್ರೌಢಶಾಲೆ, ಹಿರೇಹಳ್ಳಿಕೊಪ್ಪಲು |
| | | 16 | ಎಸ್.ಮಹೇಶ | ಸರ್ಕಾರಿ ಪ್ರೌಢಶಾಲೆ, ನಿಡುವಣಿ |

## ಗದ್ಯ ಪಾಠ – 1. ಶಬರಿ

–ಪು.ತಿ.ನ

**ಲೇಖಕರ ಪರಿಚಯ:** – ಪುರೋಹಿತ ತಿರುನಾರಾಯಣಯ್ಯಂಗಾರ್. ನರಸಿಂಹಾಚಾರ್ಯರು ಕನ್ನಡ ಸಾಹಿತ್ಯದಲ್ಲಿ ಪು.ತಿ.ನ ರೆಂದೇ ಪ್ರಸಿದ್ಧರಾಗಿದ್ದಾರೆ. ಇವರು ಕ್ರಿ.ಶ.1905ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು ಗದ್ಯ ನಾಟಕ, ಕವಿತೆ, ಸಣ್ಣ ಕತೆ, ಪ್ರಬಂಧ ಮುಂತಾದ ಸಾಹಿತ್ಯ ರಚಿಸಿದ್ದಾರೆ. ಅಹಲ್ಯ, ಶಬರಿ, ವಿಕಟಕ ವಿಜಯ, ಹಂಸ ದಮಯಂತಿ ಇವರ ರೂಪಕಗಳು. ಹಣತೆ, ರಸ ಸರಸ್ವತಿ, ಶ್ರೀಹರಿ ಚರಿತೆ, ರಥಸಪ್ತಮಿ ಇವರ ಪ್ರಮುಖ ಕೃತಿಗಳು. ಹಂಸ ದಮಯಂತಿ ಮತ್ತು ಇವರ ರೂಪಕ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಶ್ರೀಹರಿ ಚರಿತೆಗೆ ಪಂಪ ಪ್ರಶಸ್ತಿ ಲಭಿಸಿದೆ.

### ಭಾಗ– ಎ

**ಒಂದು ಅಂಕದ ಪ್ರಶ್ನೆಗಳು**

1. ರಾಮನ ತಂದೆಯ ಹೆಸರೇನು?
2. ಶಬರಿಯಿದ್ದ ಆಶ್ರಮದ ಹೆಸರೇನು?
3. ಸೀತೆ ದೊರೆವಳೆ ಎಂದು ರಾಮ ಯಾರಲ್ಲಿ ಕೇಳಿದನು?
4. ರಾಮ ಲಕ್ಷ್ಮಣರಿಗೆ ಶಬರಿ ಆಶ್ರಮಕ್ಕೆ ಹೋಗಲು ತಿಳಿಸಿದವರು ಯಾರು?
5. ಸೌಮಿತ್ರಿ ಎಂದರೆ ಯಾರು?
6. ಉದರ ಮುಖ ಎಂದು ಯಾರನ್ನು ಕರೆಯುತ್ತಾರೆ?
7. ಶಬರಿಯು ರಾಮ ಲಕ್ಷ್ಮಣರಲ್ಲಿ ಏನೆಂದು ಪ್ರಾರ್ಥಿಸಿದಳು?
8. ಶಬರಿಯನ್ನು 'ಜಟಿಲ ಕಬರಿ' ಎಂದು ಏಕೆ ಕರೆಯುತ್ತಾರೆ?
9. ಲಕ್ಷ್ಮಣ ಸೀತೆಯನ್ನು ಯಾರ ಮಗಳೆಂದು ಹೇಳುತ್ತಾನೆ?
10. ರಾಮ ಸೀತೆಗೆ ಯಾರ ರಕ್ಷೆ ಇರಲಿ ಎಂದು ಬಯಸುತ್ತಾನೆ?
11. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
12. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
13. ರಾಮಾಯಣ ಮಹಾಕಾವ್ಯ ರಚಿಸಿದವರು ಯಾರು?
14. ಶಬರಿ ಗೀತನಾಟಕದ ಕರ್ತೃ ಯಾರು?
15. ಪು.ತಿ.ನ ರವರಿಗೆ ಯಾವ ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದೆ?

**ಎರಡು ಅಂಕದ ಪ್ರಶ್ನೆಗಳು**

1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
3. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?
4. ಶಬರಿಯು ರಾಮ ಲಕ್ಷ್ಮಣರನ್ನು ಹೇಗೆ ಉಪಚರಿಸಿದಳು?
5. ಆತಿಥ್ಯ ಸ್ವೀಕರಿಸಿದ ರಾಮ ಲಕ್ಷ್ಮಣರು ಶಬರಿಗೆ ಏನು ಹೇಳಿದರು?

**ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.**

1. " ಆವುದೀ ಮರುಳು? ನಮ್ಮೆಡೆಗೆ ಬರುತಿಹುದು "
2. " ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ "
3. " ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"
4. " ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ "
5. " ಬೆಳಕಿಗೊಲಿವವರ್ ಉರಿವ ಬತ್ತಿಯ ಕರುಕ ಕಾಣರು "

## ಭಾಗ – ಬಿ

I. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಕನ್ನಡ ವರ್ಣಮಾಲೆಯಲ್ಲಿರುವ ಯೋಗವಾಹಗಗಳು :
   ಅ) ಐ. ಔ   ಆ) ಅ, ಆ   ಇ) ಎ. ಏ   ಈ) ಅಂ, ಅಃ
2. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ :
   ಅ) 13   ಆ) 25   ಇ) 9   ಈ) 34
3. 'ಮತಂಗಾಶ್ರಮ' ಇಲ್ಲಿರುವ ಸಂಧಿ :
   ಅ) ಆಗಮಸಂಧಿ   ಆ) ಸವರ್ಣದೀರ್ಘಸಂಧಿ   ಇ) ಗುಣಸಂಧಿ   ಈ) ಲೋಪಸಂಧಿ
4. 'ಅಹುದಹುದು' ಇದು ಈ ವ್ಯಾಕರಣಾಂಶವಾಗಿದೆ :
   ಅ) ಜೋಡುನುಡಿ   ಆ) ದ್ವಿರುಕ್ತಿ   ಇ) ಅನುಕರಣಾವ್ಯಯ   ಈ) ವಿದ್ಯರ್ಥಕ
5. 'ಪೆರೆ' ಪದದ ಅರ್ಥ
   ಅ) ಚಂದ್ರ   ಆ) ಸೂರ್ಯ   ಇ)ನಕ್ಷತ್ರ   ಈ) ಆಕಾಶ
6. 'ದನುಪೇಳ್ದದಾರಿಯೊಳೆ ನಾವು ಬಂದಿಹೆವೆ' ಈ ವಾಕ್ಯದಲ್ಲಿರಬೇಕಾದ ಕೊನೆಯಲ್ಲಿ ಇರಬೇಕಾದ ಲೇಖನ ಚಿಹ್ನೆ :
   ಅ) ಅರ್ಧವಿರಾಮ   ಆ) ಪ್ರಶ್ನಾರ್ಥಕ   ಇ) ಆವರಣ   ಈ) ಭಾವಸೂಚಕ
7. 'ಶೋಕದುಲ್ಕೆ' ಇಲ್ಲಿರುವ ಅಲಂಕಾರ
   ಅ) ಉಪಮ   ಆ) ರೂಪಕ   ಇ) ದೃಷ್ಟಾಂತ   ಈ) ಅರ್ಥಾಂತರನ್ಯಾಸ
8. ಸ್ವಲ್ಪ ಉಸಿರಿನಿಂದ ಉಚ್ಚರಿಸಲ್ಪಡುವ ವ್ಯಂಜನಗಳನ್ನು ಹೀಗೆನ್ನುವರು :
   ಅ) ಅಲ್ಪ ಪ್ರಾಣಗಳು   ಆ) ಮಹಾ ಪ್ರಾಣಗಳು   ಇ) ಅನುನಾಸಿಕಗಳು   ಈ) ಸಂಧ್ಯಾಕ್ಷರಗಳು
9. ಕನ್ನಡ ವರ್ಣಮಾಲೆಯಲ್ಲಿರುವ ಸಂಧ್ಯಾಕ್ಷರಗಳು
   ಅ) ಅಂ, ಅಃ   ಆ) ಐ, ಔ   ಇ) ಎ, ಏ   ಈ) ಉ, ಊ
10. ವರ್ಗದ ಪಂಚಮಾಕ್ಷರಗಳನ್ನು ಅಕ್ಷರಗಳನ್ನು ಹೀಗೆನ್ನುವರು
    ಅ) ಅಲ್ಪ ಪ್ರಾಣಗಳು   ಆ) ಮಹಾ ಪ್ರಾಣಗಳು   ಇ)ವ್ಯಂಜನಾಕ್ಷರ   ಈ) ಅನುನಾಸಿಕಗಳು
11. 'ವನಮಾಲೆ' ಇದು ಈ ಸಮಾಸಕ್ಕೆ ಉದಾಹರಣೆ
    ಅ) ಕರ್ಮಧಾರಯಸಮಾಸ   ಆ) ಅಂಶಿಸಮಾಸ   ಇ) ತತ್ಪುರುಷಸಮಾಸ   ಈ) ಕ್ರಿಯಾಸಮಾಸ
12. ವರ್ಗದ ದ್ವಿತೀಯಾಕ್ಷರಗಳು ಹಾಗೂ ಚತುರ್ಥಾಕ್ಷರಗಳನ್ನು ಹೀಗೆನ್ನುತ್ತಾರೆ :
    ಅ) ಅಲ್ಪಪ್ರಾಣಗಳು   ಆ) ಮಹಾಪ್ರಾಣಗಳು   ಇ) ಅನುನಾಸಿಕಗಳು   ಈ) ಸಂಧ್ಯಾಕ್ಷರಗಳು

II. ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೇಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

1. ಅಕ್ಕ : ಸಜಾತೀಯ ಸಂಯುಕ್ತಾಕ್ಷರ : : ಲಕ್ಷ್ಮಣ : __________
2. ಕ್, ಗ್ : ಅಲ್ಪಪ್ರಾಣಾಕ್ಷರಗಳು : : ಞ್, ಙ : __________
3. ದಿಟ್ಟಿ : ದೃಷ್ಟಿ : : ತವಸಿ : __________
4. ಮಧುಪರ್ಕ : ಮೊಸರು : : ಸುರಭಿ : __________
5. ಅರ್ತಿ : ಪ್ರೀತಿ : : ಹಳು : __________
6. ಶ್ರೀರಾಮ : ಅಂಕಿತನಾಮ : : ಉದರಮುಖ : __________
7. ಸನಿಹ : ದೂರ : : ಉಪಕಾರ : __________
8. ರಾಮಲಕ್ಷ್ಮಣ : ದ್ವಂದ್ವಸಮಾಸ : : ಚೆಂದಳಿರು : __________

**ಉತ್ತರಗಳು :** 1) ಅಂ,ಅಃ 2) 9. 3) ಸವರ್ಣದೀರ್ಘಸಂಧಿ 4). ದ್ವಿರುಕ್ತಿ 5) ಚಂದ್ರ 6) ಪ್ರಶ್ನಾರ್ಥಕ 7) ರೂಪಕ 8) ಅಲ್ಪಪ್ರಾಣಗಳು 9) ಐ,ಔ 10) ಅನುನಾಸಿಕಗಳು 11) ತತ್ಪುರುಷಸಮಾಸ 12)ಮಹಾಪ್ರಾಣಗಳು

**ಉತ್ತರಗಳು :** 1) ವಿಜಾತಿ ಸಂಯುಕ್ತಾಕ್ಷರ 2) ಅನುನಾಸಿಕ 3) ತಪಸ್ವಿ 4) ಕಾಮಧೇನು 5) ಅನ್ವರ್ಥನಾಮ 6) ಕಾಡು 7) ಅಪಕಾರ 8) ಕರ್ಮಧಾರಯಸಮಾಸ

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು**

1. ರಾಮನ ತಂದೆಯ ಹೆಸರು ದಶರಥ.
2. ಶಬರಿಯಿದ್ದ ಆಶ್ರಮದ ಹೆಸರು ಮತಂಗಾಶ್ರಮ.
3. ಸೀತೆ ದೊರೆವಳೇ ಎಂದು ರಾಮನು ಗಿರಿವನಗಳಲ್ಲಿ ಕೇಳಿದನು.
4. ರಾಮ ಲಕ್ಷ್ಮಣರಿಗೆ ಶಬರಿ ಆಶ್ರಮಕ್ಕೆ ಹೋಗಲು ತಿಳಿಸಿದವರು ದನು ಮಹರ್ಷಿಗಳು.
5. ಸೌಮಿತ್ರಿ ಎಂದರೆ ಲಕ್ಷ್ಮಣ.
6. ಉದರ ಮುಖ ಎಂದು ದನು ಮಹರ್ಷಿಗಳನ್ನು ಕರೆಯತ್ತಾರೆ.
7. ಶಬರಿಯು ರಾಮ ಲಕ್ಷ್ಮಣರಲ್ಲಿ ಮುಕ್ತಿಯನ್ನು ಕೊಡು ಎಂದು ಪ್ರಾರ್ಥಿಸಿದಳು.
8. ಶಬರಿಯು ಜಡೆಯಾಕಾರದ ತುರುಬನ್ನು ಹೊಂದಿರುವುದರಿಂದ ಜಟಿಲ ಕಬರಿ ಎಂದು ಕರೆಯುತ್ತಾರೆ.
9. ಲಕ್ಷ್ಮಣ ಸೀತೆಯನ್ನು ಭೂಮಿಯ ಮಗಳೆಂದು ಕರೆಯುತ್ತಾನೆ.
10. ರಾಮನು ಸೀತೆಗೆ ಶಬರಿಯ ರಕ್ಷೆಯಿರಲಿ ಎಂದು ಬಯಸುತ್ತಾನೆ.
11. ಶ್ರೀರಾಮನಿಗೆ ಸಮರ್ಪಿಸಲು ಶಬರಿಯು ಸವಿ ಸವಿಯಾದ ಹಣ್ಣುಗಳನ್ನು ಪರಿಮಳಯುಕ್ತ ಹೂವುಗಳನ್ನು ಸಂಗ್ರಹಿಸಿದ್ದಳು.
12. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ .
13. ರಾಮಾಯಣ ಮಹಾಕಾವ್ಯವನ್ನು ರಚಿಸಿದವರು ವಾಲ್ಮೀಕಿ ಮಹರ್ಷಿಗಳು.
14. ಶಬರಿ ಗೀತನಾಟಕದ ಕರ್ತೃ ಪು.ತಿ.ನ.
15. ಪು.ತಿ.ನ ರವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಿ.ಲಿಟ್ ಪದವಿ ನೀಡಿದೆ.

**ಎರಡು ಮೂರು ವಾಕ್ಯದ ಪ್ರಶ್ನೆಗಳಿಗೆ ಉತ್ತರಗಳು**

1. ರಾಮನು ಗಿರಿವನವನ್ನು – ಹೇ ಗಿರಿವನಗಳೇ ಸೀತೆಯು ಎನಗೆ ದೊರೆವಳೇ? ಎಲ್ಲಿರುವಳೆಂದು ಹೇಳಿ, ಆಕೆ ತನಗೆ ದೊರೆವಳೇ ಅಥವಾ ದೊರೆಯಳೇ? ನಿಮ್ಮಲ್ಲಿ ಬೇಡಿಕೊಳ್ಳುವೆನೆಂದು ಹೇಳುವನು.
2. ಲಕ್ಷ್ಮಣನು ತನ್ನ ಅಣ್ಣ ರಾಮನನ್ನು ಸಮಾಧಾನ ಪಡಿಸುತ್ತ " ತಾಳಿಕೋ ಅಣ್ಣಾ, ಸೂರ್ಯನೇ ಕಾಂತಿಹೀನನಾದರೆ ಆ ಕಾಂತಿಗೆ ಸ್ಥಳವೆಲ್ಲಿ? ಹಾಗೆಯೇ ಶ್ರೀರಾಮನೇ ಧೈರ್ಯ ಕಳೆದು ಕೊಂಡರೆ ಧೈರ್ಯ ತುಂಬುವವರಾರು? ಎನ್ನುತ್ತಾನೆ. ಹೀಗೆ ಲಕ್ಷ್ಮಣನು ಅಣ್ಣನನ್ನು ಸಂತೈಸುತ್ತಾನೆ.
3. ರಾಮನ ಬರುವಿಕೆಗಾಗಿ ಕಾಯುತ್ತಿದ್ದ ಶಬರಿ, ರಾಮ ಇಂದಲ್ಲ ನಾಳೆ ಬರುವನೆಂದು ಪ್ರತಿದಿನವೂ ಗಿರಿವನಗಳನ್ನು ಸುತ್ತಿ ಸವಿ ಸವಿಯಾದ ಹಣ್ಣುಗಳನ್ನು ಪರಿಮಳಯುಕ್ತವಾದ ಹೂವುಗಳನ್ನು ತಂದಿರಿಸಿ ರಾಮನ ಬರುವಿಕೆಗಾಗಿ ಕಾಯುತ್ತಿದ್ದಳು.
4. ಶಬರಿಯು ಶ್ರೀರಾಮನನ್ನು ಕಂಡು ಅವನ ಮೈಯನ್ನು ಮುಟ್ಟಿ ಪಾದಗಳಿಗೆ ನಮಸ್ಕರಿಸಿ ಕೈಗಳನ್ನು ಕಣ್ಣಿಗೊತ್ತಿಕೊಂಡು ಆನಂದ ಭಾಷ್ಪವನ್ನು ಸುರಿಸಿದಳು. ನಂತರ ತಾನು ಪ್ರೀತಿಯಿಂದ ಕಟ್ಟಿದ್ದಂತಹ ಹೂವಿನ ಮಾಲೆಯನ್ನು ಅವರ ಕೊರಳಿಗೆ ಹಾಕಿ ಸಂಭ್ರಮಿಸುವಳು. ತಾನು ಸಂಗ್ರಹಿಸಿದಂತಹ ಹಣ್ಣುಗಳನ್ನು ನೀಡುತ್ತ 'ಇದರಷ್ಟು ರುಚಿಯಾದ ಹಣ್ಣು ಜಗತ್ತಿನಲ್ಲಿ ಯಾವುದೂ ಇಲ್ಲ' ಎಂದು ಹೇಳುತ್ತ ಸವಿಯಲು ನೀಡುವಳು.
5. ಶ್ರೀರಾಮನು ಶಬರಿಗೆ 'ನೀನು ನೀಡಿದ ಆತಿಥ್ಯದಿಂದ ನಾವು ಸುಖ ಸಂತೋಷದಿಂದ ಇದ್ದೇವೆ. ಸವಿಯಾದ ಹಣ್ಣುಗಳನ್ನು ನೀಡಿರುವ ನಿನಗೆ ಋಣಿಯಾಗಿದ್ದೇವೆ. ನಮಗೆ ನೀಡಿದ ಸತ್ಕಾರಗಳು ಅಯೋಧ್ಯೆಯ ಅರಮನೆಯನ್ನು ಮರೆಸುವಂತಿತ್ತು. ಇದು ಕಾಡಲ್ಲ, ನಮ್ಮ ಮನೆ ಎಂಬ ಭಾವನೆ ನಮಗೆ ಬಂದಿದೆ. ನಿನ್ನನ್ನು ನಮ್ಮ ತಾಯಿಯೆಂದು ಭಾವಿಸಿದ್ದೇವೆ' ಎಂದರು.

**ಸಂದರ್ಭ ಸ್ವಾರಸ್ಯ (ಸೂಚನೆ:– ಒಂದು ಸಂದರ್ಭಕ್ಕೆ ಮಾತ್ರ ಮಾದರಿ ಉತ್ತರ ನೀಡಿದ್ದು ಉಳಿದವುಗಳಿಗೆ ಮಾದರಿಯಂತೆ ಉತ್ತರಿಸುವುದು.)**

1. ಈ ವಾಕ್ಯವನ್ನು ಪು.ತಿ.ನ. ರವರು ಬರೆದಿರುವ 'ಶಬರಿ' ಎಂಬ ಗೀತ ನಾಟಕದಿಂದ ಆರಿಸಲಾಗಿದೆ. ಈ ಮಾತನ್ನು ರಾಮನು ಲಕ್ಷ್ಮಣನಿಗೆ ಹೇಳಿದನು.
   **ಸಂದರ್ಭ:** ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತಾ ಕಾಡಿನಲ್ಲಿ ಮತಂಗ ಋಷಿಗಳ ಆಶ್ರಮದೆಡೆಗೆ ಬರುತ್ತಾರೆ. ಆಶ್ರಮದಲ್ಲಿ ವಾಸವಾಗಿದ್ದ ಶಬರಿ ಹೂವು ಹಣ್ಣುಗಳನ್ನು ತೆಗೆದುಕೊಂಡು ಪುನಃ ಆಶ್ರಮದೆಡೆಗೆ ಬರುವುದನ್ನು ಕಂಡ ರಾಮನು ಮೇಲಿನ ಮಾತನ್ನು ಹೇಳುತ್ತಾನೆ.
   **ಸ್ವಾರಸ್ಯ:** ಇಲ್ಲಿ ಶಬರಿಯ ವ್ಯಕ್ತಿತ್ವದ ಬಗ್ಗೆ ತಿಳಿಸಲಾಗಿದೆ.

## ' ಶಬರಿ' ಗದ್ಯಭಾಗದ ವ್ಯಾಕರಣಾಂಶಗಳು

➢ **ಪದಗಳ ಅರ್ಥ**

1. **ಶ್ರಮಣಿ** – ತಪಸ್ವಿನಿ 2. **ಮಧುಪರ್ಕ**– ಹಾಲು, ಮೊಸರು, ಜೇನು ತುಪ್ಪ,ಸಕ್ಕರೆ 3. **ಪೆರೆ** – ಚಂದ್ರ 4. **ನೆಚ್ಚು** – ನಂಬು

**ಅರ್ತಿ** – ಪ್ರೀತಿ 6. **ಸುರಭಿ** – ಕಾಮಧೇನು 7. **ಪೂಣ್ಕೆ** – ಪ್ರತಿಜ್ಞೆ 8. **ತೃಷೆ** – ಬಾಯಾರಿಕೆ 9. **ಆನನ** – ಮುಖ

➢ **ತತ್ಸಮ – ತದ್ಭವಗಳು**

1. **ದೃಷ್ಟಿ** – ದಿಟ್ಟಿ 2. **ಲೋಕ** – ಲೋಗ 3. **ನಲ್ಮೆ** – ನಲುಮೆ 4. **ತಪಸ್ವಿ** – ತವಸಿ 5. **ಆಶ್ಚರ್ಯ**– ಅಚ್ಚರಿ 6. **ನಿತ್ಯ** – ನಿಚ್ಚ 7. **ಮಾಲಾ** – ಮಾಲೆ 8. **ಭೂಮಿ** – ಬುವಿ 9. **ಮುಕ್ತಿ** – ಮುಕುತಿ 10. **ಪ್ರಯಾಣ** – ಪಯಣ 11. **ಹಕ್ಕಿ** – ಪಕ್ಷಿ 12. **ವನ** – ಬನ 13. **ಸುಖ** – ಸೊಗ 14. **ರಾಜ** – ರಾಯ

➢ **ಸಂಧಿಗಳು :**

1. **ನಾನರಿಯೆ** = ನಾನು + ಅರಿಯೆ = ಲೋಪಸಂಧಿ
2. **ಇನಿತಾದರ** = ಇನಿತು + ಆದರ = ಲೋಪ ಸಂಧಿ
3. **ನನ್ನಾಸೆ** = ನನ್ನ + ಆಸೆ = ಲೋಪ ಸಂಧಿ
4. **ನಿನ್ನಾದರ** = ನಿನ್ನ + ಆದರ = ಲೋಪ ಸಂಧಿ
5. **ಮಾಸಲಾಗುವ** = ಮಾಸಲು + ಆಗುವ = ಲೋಪ ಸಂಧಿ
6. **ಧೈರ್ಯಗೆಡು** = ಧೈರ್ಯ + ಕೆಡು = ಆದೇಶ ಸಂಧಿ
7. **ಸವಿಯಾಗದ** = ಸವಿ + ಆಗದ = ಆಗಮ ಸಂಧಿ
8. **ಮತಂಗಾಶ್ರಮ** = ಮತಂಗ + ಆಶ್ರಮ = ಸವರ್ಣ ದೀರ್ಘ ಸಂಧಿ
9. **ಪ್ರಾಣಾಹುತಿ** = ಪ್ರಾಣ + ಆಹುತಿ = ಸವರ್ಣ ದೀರ್ಘ ಸಂಧಿ
10. **ಸನ್ಮಂಗಳ** = ಸತ್ + ಮಂಗಳ = ಅನುನಾಸಿಕ ಸಂಧಿ

➢ **ಸಮಾಸಗಳು :–**

1. **ರಾಮ ಲಕ್ಷಣ** – ರಾಮನೂ + ಲಕ್ಷ್ಮಣನೂ = ದ್ವಂದ್ವ ಸಮಾಸ
2. **ಹೂಹಣ್ಣುತಳಿರು** – ಹೂವೂ + ಹಣ್ಣೂ + ತಳಿರೂ = ದ್ವಂದ್ವ ಸಮಾಸ
3. **ಗಿರಿವನ** – ಗಿರಿಯೂ + ವನವೂ = ದ್ವಂದ್ವ ಸಮಾಸ
4. **ಪಂಚಭೂತ** – ಪಂಚಗಳಾದ + ಭೂತ = ದ್ವಿಗು ಸಮಾಸ
5. **ಕೈಯೊಳಿತ್ತು** – ಕೈಯೊಳು + ಇಟ್ಟು = ಕ್ರಿಯಾ ಸಮಾಸ
6. **ಕಂಪನೀಡುವ** – ಕಂಪನ್ನು + ನೀಡುವ = ಕ್ರಿಯಾ ಸಮಾಸ
7. **ವನಮಾಲೆ** – ವನದ + ಮಾಲೆ = ತತ್ಪುರುಷ ಸಮಾಸ
8. **ಶೋಕದುಲ್ಕೆ** – ಶೋಕದ ಉಲ್ಕೆ = ತತ್ಪುರುಷ ಸಮಾಸ
9. **ಕೃಷ್ಣಜಿನಾಂಬರೆ** - ಕೃಷ್ಣ ಜಿನವನ್ನು ಅಂಬರವಾಗಿ(ವಸ್ತ್ರವನ್ನಾಗಿ)ಹೊಂದಿರುವವಳು (ಶಬರಿ) = ಬಹುವ್ರೀಹಿಸಮಾಸ
10. **ಭೂಮಿಜಾತೆ** – ಭೂಮಿಯ ಜಾತೆಯಾದವಳು (ಸೀತೆ) = ಬಹುವ್ರೀಹಿಸಮಾಸ
11. **ಉದರಮುಖ** – ಉದರದಲ್ಲಿ ಮುಖವುಳ್ಳವನು ( ಕಬಂಧ ರಾಕ್ಷಸ / ದನು) = ಬಹುವ್ರೀಹಿ ಸಮಾಸ

➢ **ಅಲಂಕಾರಗಳು** : 1. ಶೋಕದುಲ್ಕೆ – ರೂಪಕಾಲಂಕಾರ 2. ಅಂಜಿಸುವವರಂಜುವಂತೆ – ಲುಪ್ತೋಪಮಾಲಂಕಾರ

➢ **ದ್ವಿರುಕ್ತಿ** : ಹಿಗ್ಗಿ ಹಿಗ್ಗಿ, ಮರಮರಳಿ, ಅಹುದಹುದು, ಅಸ್ತು ಅಸ್ತು.

➢ **ಜೋಡುನುಡಿ** : ರಾಮಲಕ್ಷ್ಮಣ, ಗಿರಿವನ

➢ **ವಿಜಾತಿ ಸಂಯುಕ್ತಾಕ್ಷರದ ಪದಗಳು :** ಸೂರ್ಯ, ಶ್ರಮಣಿ, ಲಕ್ಷ್ಮಣ, ಪುತ್ರ, ಪ್ರವೇಶ, ಹೊಗಳ್ವೆ , ಸದ್ಗುಣ, ಅಗ್ನಿ.

➢ **ಸಜಾತಿ ಸಂಯುಕ್ತಾಕ್ಷರದ ಪದಗಳು :** ತಮ್ಮ , ಎನ್ನ, ಹಣ್ಣು, ಮೆಚ್ಚು,

**ಗದ್ಯಪಾಠ : 2. ಅಮೇರಿಕದಲ್ಲಿ ಗೊರೂರು. ( ಪ್ರವಾಸ ಕಥನ )**

**– ಗೊರೂರು ರಾಮಸ್ವಾಮಿ ಅಯ್ಯಂಗಾರ್.**

**ಕವಿಕಾವ್ಯ ಪರಿಚಯ :** ನವೋದಯ ಗದ್ಯಪ್ರಕಾರದ ಪ್ರಮುಖ ಲೇಖಕರು ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು. ಜನಿಸಿದ್ದು ಹಾಸನ ಜಿಲ್ಲೆಯ ಗೊರೂರಿನಲ್ಲಿ. ಕಾಲ ಕ್ರಿ.ಶ. ೧೯೦೪ (1904). ಇವರು ಗರುಡುಗಂಭದದಾಸಯ್ಯ, ಮೆರವಣಿಗೆ ಹೇಮಾವತಿ, ಪುನರ್ಜನ್ಮ, ಅಮೇರಿಕದಲ್ಲಿ ಗೊರೂರು – ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಅಮೇರಿಕದಲ್ಲಿ ಗೊರೂರು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

**ಭಾಗ – ಎ**

**ಒಂದು ಅಂಕದ ಪ್ರಶ್ನೆಗಳು**

1. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದು ಕೊಂಡಿರುವ ಅಂಶಗಳು ಯಾವುವು ?
2. ಅಮೇರಿಕ, ಕೆನಡಾ, ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ ?
3. ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಸ್ಕೂಲಿನತ್ತ ಹೆಜ್ಜೆಹಾಕಲು ಕಾರಣವೇನು ?
4. ದುರ್ಯೋಧನ ಕಟ್ಟಿಸಿದ ಮನೆ ಯಾವುದು ?
5. ಗೊರೂರರು ಸ್ಕೂಲಿನತ್ತ ಹೋದಾಗ ಅವರನ್ನು ವಿದ್ಯಾರ್ಥಿಗಳು ಹೇಗೆ ನೋಡಿದರು ?
6. ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೂರರಿಗೆ ಯಾವಾಗ ಜ್ಞಾನೋದಯವಾಯಿತು ?
7. ಗೊರೂರರ ಮಗಳ ಮನೆಯಲ್ಲಿ ಗಲಾಟೆಗೆ ಕಾರಣವಾದ ವಸ್ತು ಯಾವುದು ?
8. ಅಮೇರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡಸಾಹಿತ್ಯದ ಭಾಗಗಳಾವುವು ?
9. ಗೊರೂರರನ್ನು ನೋಡಿದ ಶಾಲಾ ವಿದ್ಯಾರ್ಥಿಗಳು ಏನೆಂದು ಕೂಗಿದರು ?
10. ಉಪಾಧ್ಯಾಯರ ವಿಶ್ರಾಂತಿ ಕೊಠಡಿ ಎಲ್ಲಿತ್ತು ?
11. ಶಾಲೆಯಲ್ಲಿ ಉಪಾಧ್ಯಾಯಿನಿ ಗೊರೂರರನ್ನು ಕೇಳಿದ್ದೇನು ?
12. ನಮ್ಮ ಶಾಲೆಯ ಪಠ್ಯಪುಸ್ತಕದಲ್ಲಿ ಯಾರ ಬಗ್ಗೆ ಪಾಠವಿದೆ ಎಂದು ವಿದ್ಯಾರ್ಥಿ ಹೇಳಿದನು ?
13. ಗೊರೂರರು ಖಾದಿ ಬಟ್ಟೆಯನ್ನು ಕೈಯಿಂದ ಮಾಡುವುದು ಹೇಗೆಂದು ತಿಳಿಸಿದರು ?
14. ಗೊರೂರರು ಮೂರುನಾಲ್ಕು ಬಾರಿ ಶಾಲೆಗೆ ಹೋಗಲು ಕಾರಣವೇನು ?

**ಎರಡು ಅಂಕದ ಪ್ರಶ್ನೆಗಳು**

1. ವಿದ್ಯಾರ್ಥಿಗಳು ಗೊರೂರರನ್ನು ಕಂಡು ಭಯಗೊಳ್ಳಲು ಕಾರಣವೇನು ?
2. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ ?
3. ಗೊರೂರರಿದ್ದ ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂದು ಆತಂಕ ಪಟ್ಟಿದ್ದು ಏಕೆ ?
4. ತಾವು ತೊಟ್ಟಿದ್ದ ಖಾದಿಬಟ್ಟೆಯ ಬಗ್ಗೆ ಗೊರೂರರ ಅನಿಸಿಕೆ ಏನು ?

**ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ.**

1. " ನನಗೆ ಇಂಗ್ಲೀಷ್ ಬಂದಿದ್ದರೆ ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೆ ಕರೆಸಿ ಬಿಡುತ್ತಿದ್ದೆ "
2. " ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ "
3. " ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ "
4. " ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ "
5. " ಕೈಯಿಂದ ಇದನ್ನು ಮಾಡುವುದು ಹೇಗೋ "
6. " ಚೆನ್ನಾಯ್ತು ಬಂದ ಕೆಲಸವನ್ನೇ ಬಿಟ್ಟು ಮಾತಾಡ್ತಾ ಕೂತು ಬಿಟ್ರಿ "

## ಭಾಗ – ಬಿ

**ಕೊಟ್ಟಿರುವ ನಾಲ್ಕು ಪದಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

**1 ' ಸಂಸ್ಕೃತ ' ಇದರ ತದ್ಭವರೂಪ :**
ಎ) ಸೊಕ್ಕು ಬಿ) ಸಕ್ಕದ ಸಿ) ಸುರ ಡಿ) ಸಂಸ್ಕಾರ

**2. 'ಬಳೆಗಾರ' ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :**
ಎ) ತದ್ಧಿತಾಂತಾವ್ಯಯ ಬಿ) ತದ್ಧಿತಾಂತಭಾವನಾಮ ಸಿ) ತದ್ಧಿತಾಂತನಾಮ ಡಿ) ಕೃದಾಂತನಾಮ.

**3. ' ಕನ್ನಡಿಗ ' ಪದದಲ್ಲಿನ ವ್ಯಾಕರಣಾಂಶ ಇದಾಗಿದೆ :**
ಎ) ಕೃದಂತಭಾವನಾಮ. ಬಿ) ತದ್ಧಿತಾಂತನಾಮ ಸಿ) ತದ್ಧಿತಾಂತಭಾವನಾಮ ಡಿ) ತದ್ಧಿತಾಂತಾವ್ಯಯ

**4. ' ಜಾಣತನ ' ಪದವು ಈ ವ್ಯಾಕರಣಾಂಶಕ್ಕೆ ಉದಾರಣೆಯಾಗಿದೆ :**
ಎ) ಅವ್ಯಯಪದ ಬಿ) ತದ್ಧಿತಾಂತಭಾವನಾಮ ಸಿ) ಕೃದಂತಭಾವನಾಮ. ಡಿ) ತದ್ಧಿತಾಂತನಾಮ

**5. ' ಚಂದ್ರನಂತೆ ' ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆ :**
ಎ) ಅವ್ಯಯಪದ ಬಿ) ತದ್ಧಿತಾಂತ ಅವ್ಯಯ ಸಿ) ಕೃದಂತ ಅವ್ಯಯ. ಡಿ) ತದ್ಧಿತಾಂತಭಾವನಾಮ

**6. ' ಸಚ್ಚಿಂತನೆ ' – ಪದವು ಈ ಸಂಧಿಯಾಗಿದೆ :**
ಎ) ಗುಣಸಂಧಿ ಬಿ) ವೃದ್ಧಿಸಂಧಿ ಸಿ) ಶ್ಚುತ್ವಸಂಧಿ ಡಿ) ಅನುನಾಸಿಕ ಸಂಧಿ

**7. ಒಂದು ವಿಶೇಷಾರ್ಥವನ್ನು ವ್ಯಕ್ತ ಪಡಿಸುವುದಕ್ಕಾಗಿ ಒಂದು ಪದವನ್ನು ಎರಡೆರಡು ಬಾರಿ ಪ್ರಯೋಗವಾದರೆ ಇದಕ್ಕೆ :**
ಎ) ಜೋಡಿಪದ ಬಿ) ದ್ವಿರುಕ್ತಿ ಸಿ) ಅನುಕರಣಾವ್ಯಯ ಡಿ) ಸಾಮಾನ್ಯಅವ್ಯಯ

**8. ' ದೊಡ್ಡಹುಡುಗ ' ಪದವು ಸಮಾಸವಾಗಿದೆ :**
ಎ) ತತ್ಪುರುಷಸಮಾಸ ಬಿ) ಕ್ರಿಯಾಸಮಾಸ ಸಿ) ಕರ್ಮಧಾರಯಸಮಾಸ ಡಿ) ಅಂಶಿಸಮಾಸ

**9. ' ಜರ್ಬು ' ಪದದ ಅರ್ಥ :**
ಎ) ಬರ ಬಿ) ಭರ್ಜರಿ ಸಿ) ಬದಿ ಡಿ) ವಶ

**10. ' ವಿದ್ಯಾರ್ಥಿ ' ಪದವು ಈ ನಾಮಪದವಾಗಿದೆ :**
ಎ) ಅಂಕಿತನಾಮ ಬಿ) ರೂಢನಾಮ ಸಿ) ಅನ್ವರ್ಥನಾಮ ಡಿ) ಪರನಾಮ

**11. ' ತುತ್ತತುದಿ ' ಪದದಲ್ಲಿರುವ ವ್ಯಾಕರಣಾಂಶ :**
ಎ) ಜೋಡಿಪದ ಬಿ) ದ್ವಿರುಕ್ತಿ ಸಿ) ಅನುಕರಣಾವ್ಯಯ ಡಿ) ಸಾಮಾನ್ಯಅವ್ಯಯ

**12. ' ಹಣ್ಣು ಹಂಪಲು' ಪದದ ಈ ವ್ಯಾಕರಣಾಂಶ ಇದಾಗಿದೆ :**
ಎ) ಸಂಧಿಪದ ಬಿ) ದ್ವಿರುಕ್ತಿ ಸಿ) ಅನುಕರಣಾವ್ಯಯ ಡಿ) ಜೋಡಿಪದ

**13. 'ಜಗಜ್ಜ್ಯೋತಿ ' ಪದವು ಈ ಸಂಧಿಗೆ ಉದಾಹರಣೆ :**
ಎ) ಗುಣಸಂಧಿ ಬಿ) ಶ್ಚುತ್ವಸಂಧಿ ಸಿ) ಜಶ್ತ್ವಸಂಧಿ ಡಿ) ಅನುನಾಸಿಕ ಸಂಧಿ

**14. ಈ ಕೆಳಗಿನ ಪದಗಳಲ್ಲಿ ಮೊದಲಪದಕ್ಕೆ ಅರ್ಥವಿದ್ದು ಎರಡನೆ ಪದಕ್ಕೆ ಅರ್ಥವಿಲ್ಲದೆ ಜೋಡಿಪದವಾಗಿರು ಪದ :**
ಎ) ಅಬ್ಬಬ್ಬಾ ಬಿ) ಸತಿಪತಿ ಸಿ) ಹುಳಹುಪ್ಪಡಿ ಡಿ) ಮನೆಮನೆ

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂದಿಸಿದ ಪದ ಬರೆಯಿರಿ :**

1. ಒಂದು : ಸಂಖ್ಯಾವಾಚಕ : : ಒಂದನೆಯ : ____________
2. ನೋಡುವ : ವರ್ತಮಾನಕೃದಂತ : : ನೋಡಿದ : ____________
3. ಕೇಳಿದ : ಭೂತಕಾಲಕೃದಂತ : : ಕೇಳದ : ____________
4. ಹೊತ್ತಿಗೆ : ಪುಸ್ತಕ : : ಬೀದಿ : ____________
5. ನಾನು : ಉತ್ತಮಪುರುಷ : : ಅವನು : ____________
6. ಮರ : ರೂಢನಾಮ : : ವಿಜ್ಞಾನಿ : ____________
7. ಮತ್ತೊಬ್ಬ : ಲೋಪಸಂಧಿ : : ಮಗುವಿಗೆ : ____________
8. ಕಾಫಿಗೀಪಿ : ಜೋಡಿಪದ : : ಕಟ್ಟಕಡೆ : ____________
9. ಪಟಪಟ : ಅನುಕರಣಶಬ್ದ : : ಹುಳಹುಪ್ಪಡಿ : ____________
10. ಅಜಂತ : ಜಶ್ತ್ವಸಂಧಿ : : ತನ್ಮಯ : ____________

**ಉತ್ತರಗಳು : – 1.** ಬಿ. ಸಕ್ಕದ 2. ಸಿ. ತದ್ಧಿತಾಂತನಾಮ 3. ಬಿ. ತದ್ಧಿತಾಂತನಾಮ 4. ಬಿ. ತದ್ಧಿತಾಂತಭಾವನಾಮ 5.ಬಿ. ತದ್ಧಿತಾಂತಅವ್ಯಯ 6.ಸಿ. ಶ್ಚುತ್ವಸಂಧಿ 7.ಬಿ. ದ್ವಿರುಕ್ತಿ 8. ಸಿ. ಕರ್ಮಧಾರಯಸಮಾಸ 9. ಬಿ.ಭರ್ಜರಿ 10. ಸಿ. ಅನ್ವರ್ಥನಾಮ 11. ಬಿ. ದ್ವಿರುಕ್ತಿ 12. ಡಿ. ಜೋಡಿಪದ 13. ಬಿ. ಶ್ಚುತ್ವಸಂಧಿ 14. ಸಿ. ಹುಳುಹುಪ್ಪಡಿ

**ಉತ್ತರಗಳು : –** 1. ಸಂಖ್ಯೇಯವಾಚಕ 2. ಭೂತಕಾಲಕೃದಂತ 3. ನಿಷೇಧಕೃದಂತ 4. ವೀಧಿ 5. ಪ್ರಥಮಪುರುಷ 6.ಅನ್ವರ್ಥನಾಮ 7. ಆಗಮಸಂಧಿ 8. ದ್ವಿರುಕ್ತಿ 9. ಜೋಡಿಪದ 10. ಅನುನಾಸಿಕಸಂಧಿ.

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಪಾಶ್ಚಾತ್ಯ ದೇಶಗಳಲ್ಲಿ ಯಾಂತ್ರೀಕರಣ, ವಿದ್ಯುದ್ದೀಕರಣ, ಔದ್ಯೋಗೀಕರಣ ಅಣುಶಕ್ತಿ ಮೊದಲಾವು ಅಭಿವೃದ್ಧಿ ಹೊಂದಿರುವುದ ರಿಂದ ಇವುಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ವಿಜ್ಞಾನ ತಂತ್ರಜ್ಞಾನದ ಅರಿವು ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದಿರಬೇಕು.
2. ಅಮೇರಿಕಾ, ಕೆನಡಾಗಳಲ್ಲಿ ಮನೆಗಳನ್ನು ಸಾಮಾನ್ಯವಾಗಿ ಮರದಿಂದಲೇ ಕಟ್ಟುವುದರಿಂದ ಬೆಂಕಿ ಅಪಾಯ ಹೆಚ್ಚು.
3. ವಿದ್ಯುತ್ ಒಲೆಯಿಂದ ಬರುತ್ತಿದ್ದ ಶಬ್ದವನ್ನು ಸರಿಪಡಿಸಲು ನೆರವನ್ನು ಬಯಸಿ ಶಾಲೆಯತ್ತ ಹೆಜ್ಜೆ ಹಾಕಿದರು.
4. ದುರ್ಯೋಧನನು 'ಅರಗಿನ' ಮನೆಯನ್ನು ಕಟ್ಟಿಸಿದ್ದನು.
5. ಗೊರೂರರು ಶಾಲೆಯತ್ತ ಹೋದಾಗ ಅಲ್ಲಿನ ವಿದ್ಯಾರ್ಥಿಗಳು ದುರದುರನೆ ನೋಡಿದರು.
6. ಗೊರೂರರನ್ನು ಹುಡುಕಿಕೊಂಡು ಶಾಲೆಗೆ ಪತ್ನಿ ನೆಟ್ಟಗೆ ಬಂದ ಅವರ ಪತ್ನಿ ಮುಂದೆ ನಿಂತು ' ಚೆನ್ನಾಯ್ತು ಬಂದ ಕೆಲಸವೇ ಬಿಟ್ಟು ಮಾತಾಡ್ತಾ ಕೂತುಬಿಟ್ಟಿರಿ' ಎಂದು ಕೇಳಿದಾಗ ತಾವು ಬಂದ ಕೆಲಸ ಬಗ್ಗೆ ಅವರಿಗೆ ಜ್ಞಾನೋದಯವಾಯಿತು.
7. ಗೊರೂರರ ಮಗಳ ಮನೆಯಲ್ಲಿ ಗಲಾಟೆಗೆ ಕಾರಣವಾದ ವಸ್ತು ಅಡುಗೆ ಮನೆಯಲ್ಲಿನ 'ವಿದ್ಯುತ್ ಒಲೆ '
8. ಕನ್ನಡನಾಡಿನ ಅನೇಕ ಜಾನಪದ ಹಾಸ್ಯಕಥೆಗಳು, ಗಾದೆಗಳು ಮತ್ತು ಪಂಚತಂತ್ರದ ಕಥೆಗಳು ಮೊದಲಾದ ಕನ್ನಡ ಸಾಹಿತ್ಯದ ಭಾಗಗಳು ಅಮೇರಿಕದ ವಿದ್ಯಾರ್ಥಿಗಳನ್ನು ರಂಜಿಸಿದವು.
9. ಗೊರೂರರನ್ನು ನೋಡಿದ ವಿದ್ಯಾರ್ಥಿಗಳು ' ಪೈಡ್ ಪೈಪರ್' ಸಾಂತಾಕ್ಲಾಸ್ ' ಎಂದು ಕೂಗಿದರು.
10. ಉಪಾಧ್ಯಾಯರ ವಿಶ್ರಾಂತಿ ಕೊಠಡಿಯು ಟೆನ್ನಿಸ್ ಹಾಲ್‌ನ ಇನ್ನೊಂದು ಕೊನೆಯಲ್ಲಿತ್ತು.
11. ಶಾಲೆಯಲ್ಲಿ ಉಪಾಧ್ಯಾಯಿನಿ " ನಿಮಗೆ ಚಳಿಯಾಗುವುದಿಲ್ಲವೇ ? ನೀವು ಎಲ್ಲಿಂದ ಬಂದಿರಿ ? " ಎಂದು ಕೇಳಿದಳು.
12. ನಮ್ಮ ಶಾಲೆಯ ಪಠ್ಯದಲ್ಲಿ ಗಾಂಧಿಜೀಯವರ ಬಗ್ಗೆ ಪಾಠವಿದೆಯಲ್ಲ ಎಂದು ವಿದ್ಯಾರ್ಥಿ ಹೇಳಿದನು.
13. ಖಾದಿ ಬಟ್ಟೆಯನ್ನು ರಾಟೆ(ಚರಕ)ಯಿಂದ ನೂಲುವುದು ಹಾಗೂ ಮಗ್ಗದಿಂದ ನೇಯುವುದು ಎಂದು ಗೊರೂರರು ಹೇಳಿದರು.
14. ಗೊರೂರರು ಅಮೇರಿಕದವರ ಜೀವನ ಕ್ರಮವನ್ನು ಹತ್ತಿರದಿಂದ ನೋಡುವ ಉದ್ದೇಶದಿಂದ ಮೂರು ನಾಲ್ಕು ಬಾರಿ ಶಾಲೆಗೆ ಹೋದರು.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಪ್ರಾಥಮಿಕ ಶಾಲೆಯ ಕಡೆ ಬಂದ ಗೊರೂರರ ವೇಷಭೂಷಣವು ವಿಚಿತ್ರವಾದದ್ದಾಗಿತ್ತು. ಈ ರೀತಿಯ ವೇಷಭೂಷಣವನ್ನು ಎಂದೂ ನೋಡಿರದ ಅಮೇರಿಕದ ವಿದ್ಯಾರ್ಥಿಗಳು ಯಾವುದೋ ವಿಚಿತ್ರಪ್ರಾಣಿಯೋ, ಪ್ರಮುಖನೋ, ಅಪರಾಧಿಯೋ, ಇರಬೇಕೆಂದು ಭಾವಿಸಿ ಇವರನ್ನು ನೋಡಿ ಭಯಗೊಂಡರು.
2. ಗೊರೂರರು ನೆರವನ್ನು ಬಯಸಿ ಶಾಲೆಗೆ ಹೋದಾಗ ಹುಡುಗರು- ಶಿಕ್ಷಕರು ಇವರ ವೇಷಭೂಷಣವನ್ನು ನೋಡಿ ಹೆದರಿದಂತೆ ವಿಚಿತ್ರ ಪ್ರಾಣಿಯನ್ನು ನೋಡಿದಂತೆ ನೋಡತೊಡಗಿದರು. ಆಗ ಅವರಲೊಬ್ಬ ಶಿಕ್ಷಕರು ಅವರ ಉಡುಪಿನ ಬಗ್ಗೆ ಕೇಳಿ ಅವರನ್ನು ಕುಳ್ಳಿರಿಸಿ ಮಾತನಾಡತೊಡಗಿದರು. ಗೊರೂರರು ತಮ್ಮ ಉಡುಪು, ಗಾಂಧೀಜಿಯವರ ಬಗ್ಗೆ ಹಾಗೂ ಅವರ ತತ್ವಗಳ ಬಗ್ಗೆ ಮಾತನಾಡುತ್ತಾ ತಾವು ಬಂದ ಉದ್ದೇಶವನ್ನೇ ಮರೆತರು.
3. ಗೊರೂರರ ಮಗಳು-ಅಳಿಯ ಕೆಲಸಕ್ಕೆ ಹೋದನಂತರ, ಗೊರೂರರು ಹಾಗೂ ಅವರ ಪತ್ನಿ ಇಬ್ಬರೇ ಮನೆಯಲ್ಲಿ ಇದ್ದಾಗ ಅಡುಗೆಮನೆಯ ವಿದ್ಯುತ್ ಒಲೆಯ ಕಡೆಯಿಂದ "ಕೊಯ್" ಎಂಬ ಶಬ್ದ ಬರುತ್ತಿತ್ತು. ಅದು ದೊಡ್ಡ ಶೃತಿಯಂತೆಯೇ ಮೊಳಗುತ್ತಿದ್ದುದರಿಂದ ಅದರ ಸ್ವಿಚ್ ಆಫ್ ಮಾಡಲರಿಯದ ಕಾರಣದಿಂದ ಹಾಗೂ ಅಲ್ಲಿ ಮನೆಗಳನ್ನು ಬಹುತೇಕ ಮರಗಳಿಂದಲೇ ಕಟ್ಟಿರುತ್ತಾರಾದ್ದರಿಂದ ಬೆಂಕಿ ಹೊತ್ತಿಕೊಂಡೀತು ಎಂದು ಆತಂಕಪಟ್ಟರು.
4. ಗೊರೂರರು ತಾವು ತೊಟ್ಟಿದ್ದ ಬಟ್ಟೆಯನ್ನು ಕುರಿತು – 'ಇದು ಗಾಂಧೀಜಿಯವರು ಪ್ರಚಾರಕ್ಕೆ ತಂದ ಬಟ್ಟೆ, ಇದಕ್ಕೆ ಯಾವುದೇ ಯಂತ್ರದ ಸೋಂಕಿಲ್ಲದೆ ಪೂರ್ಣವಾಗಿ ಕೈಯಿಂದಲೇ ತಯಾರಿಸಲಾಗಿದೆ '. ಎಂದು ಹೇಳಿದರು.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ.**

1. ಈ ವಾಕ್ಯವನ್ನು ' ಗೊರೂರು ರಾಮಸ್ವಾಮಿ ಅಯ್ಯಂಗಾರ್ ' ರವರು ಬರೆದಿರುವ " ಅಮೇರಿಕದಲ್ಲಿ ಗೊರೂರು" ಎಂಬ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಗೊರೂರರ ಹೆಂಡತಿ ಗೊರೂರರಿಗೆ ಹೇಳುತ್ತಾರೆ. ಗೊರೂರರ ಮಗಳು ಅಳಿಯ ಕೆಲಸಕ್ಕೆ ಹೋದಾಗ ಮನೆಯಲ್ಲಿನ ವಿದ್ಯುತ್ ಒಲೆಯ ಕಡೆಯಿಂದ "ಕೊಯ್" ಎಂಬ ಶಬ್ದ ಜೋರಾಗಿ ಬರುತ್ತಿರುವುದನ್ನು ಕಂಡು ಎಲ್ಲಿ ವಿದ್ಯುತ್ ಸರ್ಕ್ಯೂಟ್ ಆಗಿ ಮನೆಗೆ ಬೆಂಕಿ ಹತ್ತಿಕೊಳ್ಳಬಹುದೆಂದು ಹೆದರಿ ನೆರವಿಗೆ ಯಾರನ್ನಾದರು ಕರೆತರುವಂತೆ ಗೊರೂರರ ಹೆಂಡತಿ ಹೇಳಿದರು ಹಾಗೂ ಅಮೇರಿಕಾದಲ್ಲಿ ಮಕ್ಕಳಾದಿಯಾಗಿ ಇವೆಲ್ಲವನ್ನು ಕಲಿತಿರುವಾಗ ಇವರೇಕೆ ಇದನ್ನೆಲ್ಲ ಕಲಿಯಲಿಲ್ಲವೆಂಬ ಕೋಪ ಅವರಲ್ಲಿತ್ತು. 'ನನಗೆ ಇಂಗ್ಲೀಷ್ ಬಂದಿದ್ದರೆ ಇಷ್ಟು ವೇಳೆಗೆ ಬೆಂಕಿ ನಂದಿಸುವವನ್ನೇ ಕರೆಸುತ್ತಿದ್ದೆ' ಎಂದು ಅವರ ಹೆಂಡತಿ ಹೇಳುವ ಸಂದರ್ಭದ ಸ್ವಾರಸ್ಯವಿದು.

## : ಅಮೇರಿಕದಲ್ಲಿ ಗೊರೂರರು ಪಾಠದಲ್ಲಿ ಬರುವ ಮುಖ್ಯ ವ್ಯಾಕರಣಾಂಶಗಳು :

- **ತತ್ಸಮ – ತದ್ಭವ**

  **1. ರಾಜ** – ರಾಯ 2. **ಜ್ಞಾನ** – ಜಾನ 3. **ಧ್ವನಿ** – ದನಿ 4. **ತಕ್ಷಣ** – ತಚ್ಚಣ 5. **ವರ್ಣ** – ಬಣ್ಣ
  **7. ಬೀದಿ** – ವೀಥಿ 8. **ಗ್ರಹ** – ಗರ 9. **ಯಂತ್ರ** – ಜಂತ್ರ 10. **ದೃಷ್ಟಿ** – ದಿಟ್ಟಿ 11. **ಪುಸ್ತಕ** – ಹೊತ್ತಿಗೆ
  **12 ಕಾರ್ಯ** – ಕಜ್ಜ 13. **ಯುಗ** – ಜುಗ 14. **ವಿಜ್ಞಾನ** – ಬಿನ್ನಣ 15. **ಶಾಲಾ** – ಶಾಲೆ.

- **ಸಂಧಿಪದಗಳು**
  1. ವಿದ್ಯುಚ್ಛಕ್ತಿ = ವಿದ್ಯುತ್ + ಶಕ್ತಿ = ಶ್ಚುತ್ವಸಂಧಿ.
  2. ದಿಗ್ಭ್ರಮೆ = ದಿಕ್ + ಭ್ರಮೆ = ಜಶ್ತ್ವಸಂಧಿ.
  3. ಇನ್ನೊಂದು = ಇನ್ನು + ಒಂದು = ಲೋಪಸಂಧಿ.
  4. ಅಗಲವಾದ = ಅಗಲ + ಆದ = ಆಗಮಸಂಧಿ
  5. ಅತ್ಯಂತ = ಅತಿ + ಅಂತ = ಯಣ್‌ಸಂಧಿ
  6. ಪ್ರಶ್ನೋತ್ತರ = ಪ್ರಶ್ನೆ + ಉತ್ತರ = ಗುಣಸಂಧಿ.

- **ಸಮಾಸಪದಗಳು**
  1. ಆ ಓಲೆ = ಅದು + ಒಲೆ = ಗಮಕಸಮಾಸ.
  2. ಆ ಹುಡುಗ = ಅವನು + ಹುಡಗ = ಗಮಕಸಮಾಸ.
  3. ದೊಡ್ಡಬಾಲಕ = ದೊಡ್ಡವನು + ಬಾಲಕ = ಕರ್ಮಧಾರಯಸಮಾಸ.
  4. ಬಿಳಿಕೂದಲು = ಬಿಳಿಯದು + ಕೂದಲು = ಕರ್ಮಧಾರಯಸಮಾಸ
  5. ರಕ್ಷಣೆಕೋರಿ = ರಕ್ಷಣೆಯನ್ನು + ಕೋರಿ = ಕ್ರಿಯಾಸಮಾಸ.

- **ಭೂತಕಾಲ ಕೃದಂತಪದಗಳು :** ಕೇಳಿದ, ನೋಡಿದ.

- **ಕೃದಂತಭಾವನಾಮ ಪದಗಳು :** ಹೊಳಪು, ಅಡುಗೆ

- **ವಿಧ್ಯರ್ಥಕ ಕ್ರಿಯಾಪದ :** ಹೋಗೋಣ.

- **ಅನುಕರಣಾವ್ಯಯ ಪದಗಳು :** ಕೊಯ್, ದುರುದುರು, ಗುಜುಗುಜು,

# ಗದ್ಯಪಾಠ : 3. ಜೀವನ ದೃಷ್ಟಿ

## - ವಿ.ಕೃಗೋಕಾಕ

**ಕವಿ ಕೃತಿ ಪರಿಚಯ:** ನವ್ಯ ಸಾಹಿತ್ಯದ ಪ್ರಮುಖ ಸಾಹಿತಿಗಳಲ್ಲಿ ಒಬ್ಬರು ವಿ.ಕೃ.ಗೋಕಾಕರವರು. ಇವರು **ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಕ್ರಿ.ಶ.1909ರಲ್ಲಿ** ಜನಿಸಿದರು. ಇವರ ಕಾವ್ಯನಾಮ **ವಿನಾಯಕ.** ಗೋಕಾಕರು- **ಸಮುದ್ರಗೀತೆಗಳು, ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ** - ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ 'ಭಾರತ ಸಿಂಧುರಶ್ಮಿ' ಕೃತಿಗೆ ಜ್ಞಾನಪೀಠ ಪ್ರಶಸ್ತಿಯೂ, 'ದ್ಯಾವಾಪೃಥವೀ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ. ಇವರಿಗೆ ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರ ಪ್ರಶಸ್ತಿ ನೀಡಿ ಗೌರವಿಸಿದೆ.

### ಭಾಗ - ಎ

**ಒಂದು ಅಂಕದ ಪ್ರಶ್ನೆಗಳು**

1. ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ ?
2. ಅಂತರ್ ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ ?
3. ಅಂತರ್ ಜೀವಿಯ ಶಕ್ತಿ ಹೇಗೆ ವೆಚ್ಚವಾಗುತ್ತಿರುತ್ತದೆ ?
4. ಧರ್ಮಗಳು ಹಾಕಿಕೊಟ್ಟ ರತ್ನಪಾಠ ಏನು ?
5. ಜೀವನ ದೃಷ್ಟಿ ಗದ್ಯದಲ್ಲಿ ಸರ್ವಜ್ಞ ಹೇಳಿದ ಯಾವ ವಚನವನ್ನು ವಿ.ಕೃಗೋಕಾಕರು ಉಲ್ಲೇಖಿಸಿದ್ದಾರೆ ?
7. ಚತುರಾಶ್ರಮಗಳು ಯಾವುವು ?
8. ಗೃಹಸ್ಥಾಶ್ರಮ ಧನ್ಯವೆಂದು ಕಾಳಿದಾಸ ಯಾರ ಮೂಲಕ ಹೇಳಿಸಿದ್ದಾನೆ ?
9. ಅಂತರ್ ಜೀವಿಗೆ ಯಾವ ಎರಡು ಮಾರ್ಗಗಳು ತೆರೆದಿರುತ್ತವೆ ?
10. ಜೀವನ ರಥಕ್ಕೆ ಒಗ್ಗಾಲಿಯ ಭೀತಿ ಯಾವಾಗ ಎದುರಾಗುತ್ತದೆ ?
11. ಅಂತರ್ ಜೀವಿಯು ಕೆಲಸಕ್ಕೆ ಏಕೆ ಅಂಟಿಕೊಂಡು ನಿಂತಿರುತ್ತಾನೆ ?

**ಎರಡು ಅಂಕದ ಪ್ರಶ್ನೆಗಳು :**

1. ಅಂತರ್ ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿ ಯಾವುದು ?
2. ಕಲೋಪಾಸಕನ ಕರ್ತವ್ಯವೇನು ?
3. ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು ?
4. ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳಾವುವು ?
5. ಇಂದಿನ ಆಂತರಿಕ ಜೀವಿಗೆ ಗೃಹಸ್ಥಾಶ್ರಮ ಧನ್ಯ. ಏಕೆ?
6. ಆಂತರಿಕ ಜೀವಿಯು ಸಮಾಜದ ಮಧ್ಯದಲ್ಲಿ ಬಾಳಲು ಕಾರಣವೇನು ?

**ಸಂದರ್ಭದೊಡನೆ ವಿವರಿಸಿ:**

1. "ಆತ್ಮಾನಾಂ ಸರ್ವಭೂತೇಷು ಸರ್ವಭೂತಾನಿಚಾತ್ಮನೀ"
2. "ತನ್ನ ಗುಂಗಿನಲ್ಲಿದ್ದ ಈ ಅಂತರ್ ಜೀವಿಗೆ ಪರರ ಹಂಗೆಲ್ಲಿ"
3. "ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು"
4. " ಜೀವನ ರಥಕ್ಕೆ ಒಗ್ಗಾಲಿಯ ಭೀತಿಯಿದೆ."

## ಭಾಗ- ಬಿ

**ಬಹು ಅಂಶ ಆಯ್ಕೆ ಪ್ರಶ್ನೆಗಳು :**

1. 'ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ' – ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿದಾಗ ಆಗುವ ರೂಪ
   ಎ) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು  ಬಿ) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆದಿದೆ.
   ಸಿ) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯದು  ಡಿ) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದಿಲ್ಲ.
2. ಕಲ್ಯಾಣವನ್ನು ಪೋಷಿಸುವ ಒಂದು ಶಕ್ತಿಯು ಅವನಲ್ಲಿರುವುದು- ಗೆರೆ ಎಳೆದಿರುವ ಪದವನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿದಾಗ :
   ಎ) ಅವನಲ್ಲಿರದು  ಬಿ) ಅವನಲ್ಲಿರುತ್ತದೆ  ಸಿ) ಅವನಲ್ಲಿರಲಿ  ಡಿ) ಅವನಲ್ಲಿತ್ತು.
3. ವರ್ತಮಾನ ಕಾಲಸೂಚಕ ಪ್ರತ್ಯಯ :
   ಎ) ಉತ್ತ  ಬಿ) ದ  ಸಿ) ವ  ಡಿ) ಅಲಿ
4. ವರ್ತಮಾನ ಕಾಲದ ಉತ್ತಮ ಪುರುಷಕ್ಕೆ ಇದು ಉದಾಹರಣೆಯಾಗಿದೆ.
   ಎ) ತಿನ್ನುತ್ತಿ  ಬಿ) ತಿನ್ನುತ್ತಾನೆ  ಸಿ) ತಿನ್ನುವನು  ಡಿ) ತಿನ್ನುತ್ತೇನೆ.
5. ಭೂತಕಾಲದ ಮಧ್ಯಮ ಪುರುಷಕ್ಕೆ ಇದು ಉದಾಹರಣೆಯಾಗಿದೆ.
   ಎ) ಬರುತ್ತಾನೆ  ಬಿ) ಬರುವನು  ಸಿ) ಬಂದೆನು  ಡಿ) ಬಂದೆ
6. ಭವಿಷ್ಯತ್ ಕಾಲದ ಅನ್ಯಪುರುಷ(ಪ್ರಥಮ)ಕ್ಕೆ ಇದು ಉದಾಹರಣೆಯಾಗಿದೆ.
   ಎ) ತಿನ್ನುವೆನು  ಬಿ) ತಿಂದೆ  ಸಿ) ತಿಂದೆನು  ಡಿ) ತಿನ್ನುವನು
7. ಒಂದು ಕಾಲದ ಕ್ರಿಯೆಯು, ಇನ್ನೊಂದು ಕಾಲದ ಕ್ರಿಯಾರೂಪದಿಂದ ಹೇಳಲ್ಪಟ್ಟರೆ ಅದನ್ನು ಹೀಗೆನ್ನುವರು.
   ಎ) ಕಾಲಪಲ್ಲಟ  ಬಿ) ವಚನ ಪಲ್ಲಟ  ಸಿ) ನಾಮಪಲ್ಲಟ  ಡಿ) ಕ್ರಿಯಾಪಲ್ಲಟ
8. ಧಾತುಗಳಿಗೆ ಕಾಲಸೂಚಕ ಪ್ರತ್ಯಯ ಸೇರುವುದರ ಜೊತೆಗೆ ಈ ಕೆಳಗಿನ ಪ್ರತ್ಯಯ ಸೇರುತ್ತದೆ.
   ಎ) ವಿಭಕ್ತಿ ಪ್ರತ್ಯಯ  ಬಿ) ಆಖ್ಯಾತ ಪ್ರತ್ಯಯ  ಸಿ) ವಚನ ಪ್ರತ್ಯಯ  ಡಿ) ಅವ್ಯಯ ಪ್ರತ್ಯಯ
9. ಉಪಾಸನೆ- ಪದದ ಅರ್ಥ
   ಎ) ವ್ರತ  ಬಿ) ನಿಯಮ  ಸಿ) ಪೂಜೆ  ಡಿ) ಉಪವಾಸ
10. 'ತನ್ನಂತೆ ಪರರ ಬಗೆದೊಡೆ ಕೈಲಾಸ ' ಬಿನ್ನಾಣ ಮಕ್ಕು' ಗೆರೆ ಎಳೆದ ಪದದ ತದ್ಭವ ರೂಪ
    ಎ) ವಡ್ಯಾಣ  ಬಿ) ಬಿನ್ನಹ  ಸಿ) ವಿಜ್ಞಾನ  ಡಿ) ಬಿಂಕ
11. ಆತ್ಮಾನಾಂ ಸರ್ವಭೂತೇಷು, ಸರ್ವಭೂತಾನಿಚಾತ್ಮನಿ ಎಂದು ಗೀತೆಯು ಹೇಳಿದೆ- ಇಲ್ಲಿರಬೇಕಾದ ಲೇಖನ ಚಿಹ್ನೆ
    ಎ) ವಾಕ್ಯವೇಷ್ಟನ  ಬಿ) ಉದ್ಧರಣ  ಸಿ) ಪ್ರಶ್ನಾರ್ಥಕ  ಡಿ) ಭಾವಸೂಚಕ
12. ತನ್ನ ಹಂಗಿನಲ್ಲಿದ್ದ ಈ ಅಂತರ್ ಜೀವಿಗೆ ಪರರ ಹಂಗೆಲ್ಲಿ- ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ
    ಎ) ಪೂರ್ಣ ವಿರಾಮ  ಬಿ) ಅಲ್ಪವಿರಾಮ  ಸಿ) ಪ್ರಶ್ನಾರ್ಥಕ  ಡಿ) ಆವರಣ
13. ಕಲೋಪಾಸಕನೂ ಒಬ್ಬ ವ್ಯಕ್ತಿ ಸಮಾಜದ ಮನುಕುಲದ ಒಂದು ಘಟಕ- ಈ ವಾಕ್ಯದ ನಡುವೆ ಬಳಸಬೇಕಾದ ಲೇಖನ ಚಿಹ್ನೆ
    ಎ) ಅರ್ಧವಿರಾಮ  ಬಿ) ಅಲ್ಪ ವಿರಾಮ  ಸಿ) ವಿವರಣಾತ್ಮಕ  ಡಿ) ಪ್ರಶ್ನಾರ್ಥಕ
14. ' ದೂರದ ಗುಡ್ಡ ಕಣ್ಣಿಗೆ ನುಣ್ಣಗೆ' ಈ ವಾಕ್ಯದಲ್ಲಿನ ವ್ಯಾಕರಣಾಂಶ :
    ಎ) ನೀತಿಮಾತು  ಬಿ) ಗಾದೆಮಾತು  ಸಿ) ನುಡಿಗಟ್ಟು  ಡಿ) ಅಲಂಕಾರ
15. ' ಧರ್ಮಶಾಲೆ ' ಈ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :
    ಎ) ತತ್ಪುರುಷಸಮಾಸ  ಬಿ) ದ್ವಂದ್ವಸಮಾಸ  ಸಿ) ದ್ವಿಗುಸಮಾಸ  ಡಿ) ಕ್ರಿಯಾಸಮಾಸ
16. ' ಅಂತರಂಗ ' ಈ ಪದದ ವಿರುದ್ಧ ಪದ :
    ಎ) ಹೊರನೋಟ  ಬಿ) ಮನಸ್ಸು  ಸಿ) ಬಹಿರಂಗ  ಡಿ) ದೈಹಿಕ

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ:**

1. ಗೃಹಸ್ಥಾಶ್ರಮ : ಸವರ್ಣದೀರ್ಘ ಸಂಧಿ : : ಕಲೋಪಾಸಕ: ___________
2. ವಿಜ್ಞಾನ : ಬಿನ್ನಾಣ : : ದಾತೃ : ___________
3. ವರ್ತಮಾನ ಕಾಲ : ಉತ್ತ : : ಭೂತಕಾಲ : ___________
5. ವರ್ತಮಾನ ಕಾಲ : ಹೋಗುತ್ತೇನೆ : : ಬಹುವತ್ಕಾಲ : ___________
6. ತಿನ್ನುವನು : ಭವಿಷ್ಯತ್ ಕಾಲ : : ತಿನ್ನುತ್ತಾನೆ : ___________
7. ಒಮ್ಮೊಮ್ಮೆ : ದ್ವಿರುಕ್ತಿ : : ನೆರೆಹೊರೆ : ___________
8. ಭಾರಹಾಕು : ಕ್ರಿಯಾ ಸಮಾಸ : : ಒಗ್ಗಾಲಿ : ___________

**ಬಹು ಅಂಶ ಆಯ್ಕೆ ಪ್ರಶ್ನೆಗಳಿಗೆ ಉತ್ತರಗಳು:**

**ಉತ್ತರಗಳು : 1.** ಎ) ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು **2.** ಬಿ) ಅವನಲ್ಲಿರುತ್ತದೆ **3.** ಎ) ಉತ್ತ **4.** ಡಿ) ತಿನ್ನುತ್ತೇನೆ. **5.** ಡಿ) ಬಂದೆ **6.** ಡಿ) ತಿನ್ನುವನು **7.** ಎ) ಕಾಲಪಲ್ಲಟ **8.** ಬಿ) ಆಖ್ಯಾತ ಪ್ರತ್ಯಯ **9.** ಸಿ) ಪೂಜೆ **10.** ಸಿ) ವಿಜ್ಞಾನ **11.** ಎ) ವಾಕ್ಯವೇಷ್ಟನ **12.** ಸಿ) ಪ್ರಶ್ನಾರ್ಥಕ **13.** ಎ) ಅರ್ಧವಿರಾಮ **14.** ಬಿ) ಗಾದೆಮಾತು **15.** ಎ) ತತ್ಪುರುಷಸಮಾಸ **16.** ಸಿ) ಬಹಿರಂಗ

**ಉತ್ತರಗಳು: 1.** ಗುಣ ಸಂಧಿ **2.** ದಾತಾರ **3.** ದ **4.** ಉತ್ತಮ ಪುರುಷ **5.** ಹೋಗುವನು **6.** ವರ್ತಮಾನ ಕಾಲ **7.** ಜೋಡು ನುಡಿ **8.** ದ್ವಿಗು ಸಮಾಸ

- **ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ:**

**1.** **"ಕೇಳಿ ದೊರಕಿಸಿಕೊಂಡ ಸಾಮಗ್ರಿ-ಸೌಕರ್ಯಗಳ ಮೇಲೆ ನಿಂತ ಸಾಧನೆ-ತಪಸ್ಸು, ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ, ಅದಕ್ಕೆ ಸ್ವಯಂಪೂರ್ಣತೆ ಇಲ್ಲ"**

**ಅಲಂಕಾರ :** ಉಪಮಾಲಂಕಾರ

**ಉಪಮೇಯ :** ಕೇಳಿ ದೊರಕಿಸಿಕೊಂಡ ಸಾಮಗ್ರಿ-ಸೌಕರ್ಯಗಳ ಮೇಲೆ ನಿಂತ ಸಾಧನೆ

**ಉಪಮಾನ :** ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿ

**ಉಪಮಾವಾಚಕ ಶಬ್ದ :** ಅಂತೆ

**ಸಾಧಾರಣ ಧರ್ಮ :** ಸ್ವಯಂಪೂರ್ಣತೆ ಇಲ್ಲದಿರುವುದು

**ಸಮನ್ವಯ:** ಕೇಳಿ ದೊರಕಿಸಿಕೊಂಡ ಸಾಮಗ್ರಿ ಸೌಕರ್ಯಗಳ ಮೇಲೆ ನಿಂತ ಸಾಧನೆ ತಪಸ್ಸು ಎಂಬ ಉಪಮೇಯವನ್ನು ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿ ಎಂಬ ಉಪಮಾನಕ್ಕೆ ಹೋಲಿಸಿರುವುದರಿಂದ ಇದು ಉಪಮಾಲಂಕಾರ

- **ಕಾಲ**

ಧಾತುಗಳಿಗೆ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಸೇರಿದಾಗ **ವರ್ತಮಾನ ಕಾಲ**ರೂಪವೂ 'ದ' ಎಂಬ ಪ್ರತ್ಯಯ ಸೇರಿದಾಗ **ಭೂತಕಾಲ** ರೂಪವೂ, 'ವ' ಪ್ರತ್ಯಯ ಸೇರಿದಾಗ **ಭವಿಷ್ಯತ್ ಕಾಲ**ರೂಪವೂ ಉಂಟಾಗುತ್ತದೆ. ಧಾತುಗಳಿಗೆ **ಕಾಲಸೂಚಕ**ದ ಜೊತೆಗೆ **ಆಖ್ಯಾತ ಪ್ರತ್ಯಯ**ಗಳು ಸೇರಿದಾಗ **ಪುರುಷವಾಚಕ**ಗಳಿಗೆ ಅನುಗುಣವಾಗಿ ಬೇರೆ ಬೇರೆ ರೂಪಗಳನ್ನು ಹೊಂದುತ್ತದೆ.

**ಉದಾ:**

| **ಕಾಲ** | **ಉತ್ತಮ ಪುರುಷ** | **ಮಧ್ಯಮ ಪುರುಷ** | **ಅನ್ಯ ಪುರುಷ (ಪ್ರಥಮ ಪುರುಷ)** |
|---|---|---|---|
| ವರ್ತಮಾನ ಕಾಲ | ತಿನ್ನುತ್ತೇನೆ | ತಿನ್ನುತ್ತಿ | ತಿನ್ನುತ್ತಾನೆ |
| ಭೂತಕಾಲ | ತಿಂದೆನು | ತಿಂದೆ | ತಿಂದನು |
| ಭವಿಷ್ಯತ್ ಕಾಲ | ತಿನ್ನುವೆನು | ತಿನ್ನುವೆ | ತಿನ್ನುವನು |

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ, ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ.
2. ಅಂತರ್ ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ದೊಡ್ಡ ಸಮಸ್ಯೆಯಾಗುತ್ತದೆ.
3. ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅಂತರ್ ಜೀವಿಯ ಎಲ್ಲ ಶಕ್ತಿಯೂ ವೆಚ್ಚವಾಗುತ್ತಿರುತ್ತದೆ.
4. ಸಾಧಕನಿಗೆ, ಅಂತರ್ ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಎಲ್ಲ ಧರ್ಮಗಳೂ ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಎಲ್ಲಾ ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠವಾಗಿದೆ.
5. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು" ಎಂಬ ವಚನವನ್ನು ವಿ.ಕೃಗೋಕಾಕರು ಜೀವನ ದೃಷ್ಟಿ ಗದ್ಯದಲ್ಲಿ ಉಲ್ಲೇಖಿಸಿದ್ದಾರೆ.
6. ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ ಹಾಗೂ ಸನ್ಯಾಸಾಶ್ರಮಗಳು ಚತುರಾಶ್ರಮಗಳಾಗಿವೆ.
7. ಗೃಹಸ್ಥಾಶ್ರಮ ಧನ್ಯವೆಂದು ಕಾಳಿದಾಸ ಆರಣ್ಯಕ ಋಷಿಯ ಮೂಲಕ ಹೇಳಿಸಿದ್ದಾನೆ.
8. ಅಂತರ್ ಜೀವಿಗೆ ರಾಜಯೋಗ ಹಾಗೂ ಕರ್ಮಯೋಗಗಳೆಂಬ ಎರಡು ಮಾರ್ಗಗಳು ತೆರೆದಿರುತ್ತವೆ.
9. ಕೇವಲ ಸಹಾನುಭೂತಿಯಿಂದ ಜೀವನವನ್ನು ಸಾಗಿಸುವಾಗ ಒಗ್ಗಾಲಿಯ ಭೀತಿಯಿದೆ.
10. ಅಂತರ್ ಜೀವಿಯು ಎಲ್ಲರಂತೆ ಸಮಾಜದಲ್ಲಿ ತನ್ನ ಹೊಟ್ಟೆ ಹೊರೆಯಲು ಒಂದು ಕೆಲಸಕ್ಕೆ ಅಂಟಿಕೊಂಡು ನಿಂತಿರುತ್ತಾನೆ.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು**

**1.** ಅಂತರ್ ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಕಲ್ಪನೆಯ ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು; ಸುಲಭವಾಗಿ ರಕ್ತಗತವಾಗುವುದಿಲ್ಲ.ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತಿರುತ್ತದೆ. ತನ್ನ ಅಂತರಂಗದ ಭವ್ಯತೆಯು ಅವನನ್ನು ಕರೆಯುತ್ತಿರುತ್ತದೆ. ಆದ್ದರಿಂದ ಅಂತರ್ ಜೀವಿಗೆ ಪರರ ಹಂಗು ಇರುವುದಿಲ್ಲ.

**2.** ಯಾವ ವ್ಯಕ್ತಿಯೊಡನೆ ಅವನ ಸಂಬಂಧವಿರುವುದೋ ಅವರ ಅಂತಃಕರಣವನ್ನು ನೋಯಿಸದಂತೆ, ತನ್ನನ್ನು ಅಲಕ್ಷಿಸಿಯಾದೂ ಉಳಿದವರ ಹಿತಚಿಂತನೆ ಹಾಗೂ ಹಿತ ಸಾಧನೆಯಲ್ಲಿ ತೊಡಗುವುದು ಹಾಗೂ ವ್ಯಕ್ತಿತ್ವ-ವಿಕಾಸವನ್ನು ಕಾಲನಿಯತಿಗನುಸಾರವಾಗಿ ಬೆಳೆಸುವುದು ಕಲೋಪಾಸಕನ ಕರ್ತವ್ಯವಾಗಿದೆ.

**3.** ಸಾಧಕನಿಗೆ, ಅಂತರ್ ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಎಲ್ಲ ಧರ್ಮಗಳೂ ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಹೇಳಿವೆ. ಧರ್ಮಶಾಲೆಗಳು, ವಿಹಾರಗಳು, ಅನ್ನಛತ್ರಗಳು ಏರ್ಪಟ್ಟಿವೆ. ಅನೇಕ ದೇವಸ್ಥಾನಗಳಲ್ಲಿಯೂ, ಮಠಗಳಲ್ಲಿಯೂ ಇಂಥ ಏರ್ಪಾಟಿದೆ. ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಯೋಗಕ್ಷೇಮವನ್ನು ನೋಡಿಕೊಳ್ಳುವುದೂ ಉಂಟು.

**4.** ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳೆಂದರೆ- ಒಂದು, ತನ್ನಿಂದ ಬೇರೆಯವರಿಗೆ ಯಾವ ತೊಂದರೆಯೂ, ಮಾನಸಿಕ ವ್ಯಥೆಯೂ ಆಗದಂತೆ ಎಚ್ಚರ ವಹಿಸುವ ಕಣ್ಣು. ಮತ್ತೊಂದು ತನ್ನ ಅಳುವಿನಲ್ಲಿ ಇತರರ ಐಹಿಕ, ಮಾನಸಿಕ ಇಲ್ಲವೇ, ಆತ್ಮೀಯ ಹಿತಚಿಂತನೆ ಎಲ್ಲೆಲ್ಲಿ ಸಾಧ್ಯ ಎಂದು ಸದಾ ಅಭ್ಯಸಿಸುವ ಕಣ್ಣು.

**5.** ಇಂದಿನ ಆಂತರಿಕ ಜೀವಿಗೆ ಗೃಹಸ್ಥಾಶ್ರಮವು ಧನ್ಯವೆಂದೇ ಹೇಳಬೇಕು. ಏಕೆಂದರೆ ಆಶ್ರಯಿಸಿದ ಅಂತರ್ ಜೀವಿಗೆ ರಾಜಯೋಗ ಹಾಗೂ ಕರ್ಮಯೋಗದ ಮಾರ್ಗಗಳೆರಡೂ ತೆರೆದಿರುತ್ತವೆ. ಅವನು ತನ್ನ ಅಂತಃ ಸಾಗರದಲ್ಲಿ ಮುಳುಗಿ ತಂದ ರತ್ನಗಳನ್ನು ಪರೀಕ್ಷಿಸುವ ರತ್ನರಸಿಕರು ಅವನ ಸುತ್ತಣ ಸಮಾಜದಲ್ಲಿಯೇ ಇರುತ್ತಾರೆ. ಹೆಜ್ಜೆಹೆಜ್ಜೆಗೆ ಅವನ ಪರೀಕ್ಷೆಯಾಗುತ್ತದೆ. ತಪ್ಪು ಅಡಿಯಿಟ್ಟೊಡನೆ ಅವನ ತಲೆಗೆ ದಂಡ ಕಟ್ಟಲಾಗುತ್ತದೆ. ಒಮ್ಮೊಮ್ಮೆ ತಪ್ಪಿಲ್ಲದೆಯೂ ಅವನು ದಂಡವನ್ನು ತೆರಬೇಕಾಗಬಹುದು. ಹೀಗೆ ಸಮ್ಯಕ್ ದರ್ಶನದ ಸಮತೂಕದಿಂದ ಜೀವನ ಸಾಗಿಸಬಹುದು.

**6.** ಇಂದಿನ ಆಂತರಿಕ ಜೀವಿಯು ಹೆಚ್ಚಾಗಿ ಸಮಾಜದ ಮಧ್ಯದಲ್ಲಿಯೇ ಬಾಳುತ್ತಾನೆ. ಎಲ್ಲರಂತೆ ಸಮಾಜದಲ್ಲಿ ಉದರ ನಿರ್ವಾಹಕ್ಕಾಗಿ ಒಂದು ಕೆಲಸಕ್ಕೆ ಅಂಟಿಕೊಂಡು ನಿಂತಿರುತ್ತಾನೆ. ಹಾಗಾಗಿ ಅವನು ತನ್ನ ಆಂತರಿಕ ಜೀವನವನ್ನು ಬೆಳೆಸುವ ಹೊತ್ತಿನಲ್ಲಿಯೇ ಸಮಾಜದಲ್ಲಿ ತೂಕ ತಪ್ಪದಂತೆ ನಡೆಯಬೇಕಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಅವನು ಯೋಗಸ್ಥನೂ, ಗೃಹಸ್ಥನೂ ಆಗಿ ಬಾಳಬೇಕಾಗಿದೆ.

**ಸಂದರ್ಭದೊಡನೆ ವಿವರಿಸಿ: ಉತ್ತರಗಳು:**

**1.** ಈ ವಾಕ್ಯವನ್ನು ವಿ.ಕೃ.ಗೋಕಾಕರ 'ಜೀವನ ಪಾಠಗಳು' ಕೃತಿಯಿಂದ ಆರಿಸಿರುವ 'ಜೀವನ ದೃಷ್ಟಿ' ಎಂಬ ಗದ್ಯದಿಂದ ತೆಗೆದುಕೊಂಡಿದೆ.

ಈ ಮಾತನ್ನು ಭಗವದ್ಗೀತೆಯಿಂದ ಲೇಖಕರು ಉಲ್ಲೇಖಿಸಿದ್ದಾರೆ. ಮನುಷ್ಯ ಸಂಘ ಜೀವಿ ಹಾಗೂ ಸಮಾಜ ಜೀವಿ. ಹೀಗಿರುವಾಗ ಅವನು ತನ್ನದೇ ಹಿತ ಚಿಂತನೆಯಲ್ಲಿ ಇರದೆ ಬೇರೆಯವರಿಗೋಸ್ಕರ ಬದುಕಬೇಕು. ಅಂದರೆ ಆತ್ಮ ಎನ್ನುವುದು ಎಲ್ಲಾ ಜೀವಿಗಳಲ್ಲಿ ಇದೆ. ಹಾಗಾಗಿ ಎಲ್ಲಾ ಜೀವಿಗಳ ಆತ್ಮಕ್ಕೆ ಹಿತವಾಗುವಂತೆ ಬದುಕಬೇಕೆಂದು ಗೀತೆಯ ಈ ಶ್ಲೋಕ ತಿಳಿಸುತ್ತದೆ.

## ಗದ್ಯಭಾಗ – 4 ಧರ್ಮಸಮದೃಷ್ಟಿ ( ಶಾಸನ)

**ಶಾಸನ ಸಂಬಂಧ ಮಾಹಿತಿ :** ಧರ್ಮಸಮದೃಷ್ಟಿ ಶಾಸನವು 1368 ರ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯದ ಅರಸ ವೀರ ಬುಕ್ಕರಾಯನಿಗೆ ಸಂಬಂಧಿಸಿದ್ದಾಗಿದೆ. ಮತಧರ್ಮ ಸಂಘರ್ಷದಲ್ಲಿ ಜೈನರು ಹಾಗೂ ವೈಷ್ಣವರು ಸಾಮರಸ್ಯದಿಂದ ಬಾಳಬೇಕೆಂದು ಬುಕ್ಕರಾಯನು ವಿಧಿಸಿದ ಕಟ್ಟಳೆಯಿದು. ಈ ಶಾಸನವು ಬುಕ್ಕರಾಯನ ಧರ್ಮಸಮನ್ವಯತೆಯನ್ನು ಬಿಂಬಿಸುತ್ತದೆ. ಈ ಶಾಸನವನ್ನು ಬಿ.ಎಂ. ಶ್ರೀಕಂಠಯ್ಯನವರು ಸಂಪಾದಿಸಿದ ' ಕನ್ನಡಬಾವುಟ ' ಕೃತಿಯಿಂದ ಆರಿಸಿ ಕೊಳ್ಳಲಾಗಿದೆ.

**ಒಂದು ಅಂಕದ ಪ್ರಶ್ನೆಗಳು :**

1. ಬುಕ್ಕರಾಯ ಯಾವ ಸಾಮ್ರಾಜ್ಯದ ಅರಸನಾಗಿದ್ದನು?
2. ಬುಕ್ಕರಾಯನಿಗೆ ಬಿನ್ನಹ ಮಾಡಿಕೊಂಡವರಾರು?
3. ಯಾವುದರಲ್ಲಿ ಭೇದವಿಲ್ಲ ಎಂದು ಬುಕ್ಕರಾಯ ಹೇಳಿದನು?
4. ಬುಕ್ಕರಾಯನು ಈ ಶಾಸನವನ್ನು ಬರೆಸಿದ ವರ್ಷ ಯಾವುದು ?
5. ಧರ್ಮಸಮದೃಷ್ಟಿ ಗದ್ಯಭಾಗವನ್ನು ಯಾವ ಕೃತಿಯಿಂದ ಆಯ್ದುಕೊಂಡಿದೆ?
6. ಯಾರ ಧರ್ಮಸಮನ್ವಯ ದೃಷ್ಟಿಯನ್ನು ಈ ಶಾಸನ ಬಿಂಬಿಸುತ್ತದೆ?
7. ರಾಯರ ಗಂಡ ನೆಂದು ಬಿರುದಾಂಕಿತನಾದವರಾರು?
8. ಯಾರ ಸ್ತುತಿಯೊಂದಿಗೆ ಈ ಶಾಸನ ಪ್ರಾರಂಭವಾಗುವುದು?
9. ಬುಕ್ಕರಾಯನ ರಾಜ್ಯಭಾರದ ಕಾಲದಲ್ಲಿ ಯಾರೊಂದಿಗೆ ಸಂವಾದ ನಡೆಯಿತು?
10. ನಾಡ ಭವ್ಯಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹಮಾಡಿದರು?
11. ಶ್ರೀವೈಷ್ಣವರೊಡನೆ ಮಹಾರಾಜನು ಏನು ಹೇಳಿದನು?
12. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು?
13. ಬುಕ್ಕರಾಯನ ಹಿರಿಮೆ ಏನು?
14. ಭಾರತೀಯರ ಪ್ರಕಾರ ಒಟ್ಟು ಸಂವತ್ಸರಗಳೆಷ್ಟು?

**ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ವರ್ಣಿಸಿ.
2. ಬುಕ್ಕರಾಯ ನಡೆಸಿದ ಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?
3. ಜೈನ ಧರ್ಮದ ಸುಧಾರಣೆಗೆ ಬುಕ್ಕರಾಯನು ಕೈಗೊಂಡ ಕ್ರಮಗಳೇನು?

**ಸಂದರ್ಭ ಸಹಿತ ವಿವರಿಸಿ.**

1. " ಪಾಷಂಡ ಸಾಗರ ಮಹಾಬಡವಾಮುಖಾಗ್ನಿಃ "
2. "ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವನಟ್ಟು ಪಾಲಿಸುವರು".
3. " ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು".
4. "ಈ ಮಾಡಿದ ಕಟ್ಟಳೆಯನು ಆವನೊಬ್ಬನು ಮೀರಿದವನು ರಾಜದ್ರೋಹಿಯಪ್ಪನು"

## ಭಾಗ – ಬಿ

### ವಸ್ತುನಿಷ್ಠ ಪ್ರಶ್ನೆಗಳು:–

1. ‘ ಕೈವಿಡಿದು’ ಪದವು ಈ ಸಂಧಿಗೆ ಉದಾಹರಣೆಯಾಗಿದೆ :
ಅ) ಆಗಮಸಂಧಿ ಆ) ಆದೇಶಸಂಧಿ ಇ) ಲೋಪಸಂಧಿ ಈ) ಗುಣಸಂಧಿ
2. ‘ಮಂಡಳೇಶ್ವರ’ ಈ ಪದವು ಆಗುವ ಸಂಧಿ :
ಅ) ಗುಣಸಂಧಿ ಆ) ಆಗಮಸಂಧಿ ಇ) ಆದೇಶಸಂಧಿ ಈ) ಯಣ್‌ಸಂಧಿ
3. ‘ಶ್ರೀಮನ್ಮಹಾ’ ಈ ಪದವನ್ನು ಬಿಡಿಸಿ ಬರೆದಾಗ ಆಗುವ ರೂಪ :
ಅ) ಶ್ರೀಮತ್+ಮಹಾ ಆ) ಶ್ರೀಮನ್+ಮಹಾ ಇ) ಶ್ರೀಮ+ಅನ್ಮಹಾ ಈ) ಶ್ರೀ+ಮನ್ಮಹಾ
4. ‘ಚರಣಾಂಬುಜ’ ಈ ಪದವು ಈ ಕೆಳಗಿನ ಅಲಂಕಾರವಾಗಿದೆ :
ಅ) ಉಪಮ ಆ) ರೂಪಕ ಇ) ಶ್ಲೇಷ ಈ) ಅರ್ಥಾಂತರನ್ಯಾಸ
5. ‘ಬಿನ್ನಹ’ ಪದದ ತತ್ಸಮ ರೂಪ
ಅ) ಬಿನ್ನಾಹ ಆ)ವಿಜ್ಞಾನ ಇ) ವಿಜ್ಞಾಪನೆ ಈ) ಬಿನ್ನಪ
6. ‘ಸೊದೆ’ ಪದದ ತತ್ಸಮ ರೂಪ :
ಅ) ಸುಧೆ ಆ) ಸೋದೆ ಇ) ಸುಧಾ ಈ) ಸುದೆ
7. ಒಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ :
ಅ) ವಾಕ್ಯವೇಷ್ಟನ ಆ) ಉದ್ಧರಣ ಇ) ಆವರಣ ಈ) ವಿವರಣ.
8. ಪಾರಿಭಾಷಿಕ ಪದಗಳನ್ನು ಬಳಸುವಾಗ ಬಳಸುವ ಲೇಖನ ಚಿಹ್ನೆ :
ಅ) ವಾಕ್ಯವೇಷ್ಟನ ಆ) ವಿವರಣ ಇ) ಉದ್ಧರಣ ಈ) ಅರ್ಧವಿರಾಮ.
9. ಭೀಮನು ದುಷ್ಟನಾದ ಬಕನನ್ನು ಕೊಂದನು.– ಈ ವಾಕ್ಯದಲ್ಲಿ ಬರುವ ಕರ್ಮಪದ :
ಅ) ಭೀಮ ಆ) ದುಷ್ಟ ಇ) ಬಕನನ್ನು ಈ) ಕೊಂದನು.
10. ಒಂದು ಪದ ಅಥವಾ ವಾಕ್ಯಕ್ಕೆ ಸಮನಾರ್ಥಕ ಪದ ಹೇಳಲು ಬಳಸುವ ಚಿಹ್ನೆ :
ಅ) ಆವರಣ ಆ) ವಿವರಣ ಇ) ಉದ್ಧರಣ ಈ) ಅಲ್ಪವಿರಾಮ.
11. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತಿಳಿಸುವ ಚಿಹ್ನೆ :
ಅ) ವಿವರಣಾತ್ಮಕ ಆ) ಆವರಣ ಇ) ಉದ್ಧರಣ ಈ) ಅರ್ಧವಿರಾಮ.
12. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು. ಇದು ಈ ಕೆಳಗಿನ ವಾಕ್ಯಕ್ಕೆ ಉದಾಹರಣೆಯಾಗಿದೆ :
ಅ) ಸಾಮಾನ್ಯ ಆ) ಸಂಯೋಜಿತ ಇ) ಮಿಶ್ರ ಈ) ಅಸಮಾನ್ಯವಾಕ್ಯ
13. ‘ಒಂದು ಪೂರ್ಣ ಕ್ರಿಯಾಪದವನ್ನು ಹೊಂದಿರುವ ಸ್ವತಂತ್ರ ವಾಕ್ಯ’ವೇ :
ಅ) ಅಕರ್ಮಕ ಆ)ಕರ್ಮಣಿ ಇ) ಸಾಮಾನ್ಯ ಈ) ಮಿಶ್ರ.
14. ‘ಪ್ರಧಾನ ವಾಕ್ಯವೊಂದರಲ್ಲಿ ಅನೇಕ ಉಪವಾಕ್ಯಗಳು ಅಧೀನವಾಗಿರುವ ವಾಕ್ಯಕ್ಕೆ ಹೀಗೆನ್ನುವರು:
ಅ) ಸಾಮಾನ್ಯ ಆ) ಮಿಶ್ರ ಇ) ಸಂಯೋಜಿತ ಈ) ಸಕರ್ಮಕ.

### ಸಂಬಂಧೀಕರಿಸಿದಂತೆ ಬರೆಯಿರಿ:–

1. ಅನುಮತ : ಸಮ್ಮತಿ : : ಉಪಾರ್ಜಿಸು : ___________
2. ಬಹೆವು : ಬರುತ್ತೇವೆ : : ಹೋಹರು : ___________
3. ಜಿನಾಲಯ : ಸವರ್ಣದೀರ್ಘ : : ಚಂದ್ರಾರ್ಕ : ___________
4. ಪಂಚಮಹಾವಾದ್ಯ : ದ್ವಿಗುಸಮಾಸ : : ಹಣಕೊಟ್ಟು : ___________
5. ಗುಡಿಗೋಪುರ : ಜೋಡುನುಡಿ : : ಮನೆಮನೆಗೆ : ___________
6. ಬೆಟ್ಟಗುಡ್ಡ : ಜೋಡುನುಡಿ : : ವರ್ಷವರ್ಷ : ___________
7. ಪೆರೆ : ಚಂದ್ರ : : ಅರ್ಕ : ___________
8. ಬೃಹಸ್ಪತಿವಾರ : ಗುರುವಾರ : : ಭೃಗುವಾರ : ___________
9. ತೀರ್ಥರೂಪ : ತಂದೆ : : ಮಾತೃಶ್ರೀ : ___________
10. ಸಾವಂತ : ಸಾಮಂತ : : ಬಡವಾ : ___________

ಉತ್ತರಗಳು;– 1. ಆ) ಆದೇಶಸಂಧಿ 2. ಅ) ಗುಣಸಂಧಿ 3. ಅ) ಶ್ರೀಮತ್+ಮಹಾ 4. ಆ) ರೂಪಕ 5. ಇ) ವಿಜ್ಞಾಪನೆ 6. ಅ) ಸುಧೆ 8. ಆ) ಉದ್ಧರಣಚಿಹ್ನೆ 9. ಅ) ವಾಕ್ಯವೇಷ್ಟನಾಚಿಹ್ನೆ 15. ಇ) ಬಕನನ್ನು 10. ಅ) ಆವರಣಚಿಹ್ನೆ 11. ಅ) ವಿವರಣಾತ್ಮಕ 12. ಅ) ಸಾಮಾನ್ಯ 13. ಇ) ಸಾಮಾನ್ಯವಾಕ್ಯ 14. ಆ) ಮಿಶ್ರವಾಕ್ಯ

ಉತ್ತರಗಳು:– 1.ಸಂಪಾದಿಸು 2. ಹೋಗುತ್ತಾರೆ 3. ಸವರ್ಣದೀರ್ಘ 4.ಕ್ರಿಯಾಸಮಾಸ 5.ದ್ವಿರುಕ್ತಿ 6.ದ್ವಿರುಕ್ತಿ 7.ಸೂರ್ಯ 8.ಶುಕ್ರವಾರ 9.ತಾಯಿ 10.ಹೆಣ್ಣುಕುದುರೆ

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಬುಕ್ಕರಾಯನು ವಿಜಯನಗರ ಸಾಮ್ರಾಜ್ಯದ ಅರಸನಾಗಿದ್ದನು.
2. ಬುಕ್ಕರಾಯನಿಗೆ ಬಿನ್ನಹ ಮಾಡಿಕೊಂಡವರು ಪೆನುಗೊಂಡೆಯ ಜೈನರು.
3. ವೈಷ್ಣವ ಧರ್ಮಕ್ಕೂ, ಜೈನಧರ್ಮಕ್ಕೂ ಭೇದವಿಲ್ಲ ಎಂದು ಬುಕ್ಕರಾಯ ಹೇಳಿದನು.
4. ಬುಕ್ಕರಾಯನು ಶಾಸನವನ್ನು ಬರೆಸಿದ ವರ್ಷ ಕ್ರಿ.ಶ.1368.
5. ಬಿ.ಎಂ.ಶ್ರೀಯವರ 'ಕನ್ನಡ ಬಾವುಟ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.
6. ವೀರ ಬುಕ್ಕರಾಯನ ಧರ್ಮಸಮನ್ವಯ ದೃಷ್ಟಿಯನ್ನು ಬಿಂಬಿಸುತ್ತದೆ.
7. ರಾಯರಗಂಡನೆಂದು ಬಿರುದಾಂಕಿತನಾದವನು ವಿಜಯನಗರದ ಅರಸ ವೀರಬುಕ್ಕರಾಯ.
8. ಶ್ರೀ ರಾಮಾನುಜ ಯತಿರಾಜರ ಸ್ತುತಿಯಿಂದ ಪ್ರಾರಂಭವಾಗುವುದು.
9. ಜೈನರಿಗೂ– ಭಕ್ತರಿಗೂ (ವೈಷ್ಣವರು ) ಸಂವಾದ ನಡೆಯಿತು.
10. ನಾಡ ಭವ್ಯ ಜನರು ಬುಕ್ಕರಾಯನ ಬಳಿ ನಾಡ ಭಕ್ತಜನರು (ವೈಷ್ಣವರು) ಮಾಡುವ ಅನ್ಯಾಯಗಳನ್ನು ಕುರಿತು ಬಿನ್ನಹ ಮಾಡಿದರು.
11. ಶ್ರೀವೈಷ್ಣವರೊಡನೆ ಮಹಾರಾಜನು ಶ್ರೀವೈಷ್ಣವ ದರ್ಶನಕ್ಕೂ ಮತ್ತು ಜೈನ ದರ್ಶನಕ್ಕೂ ಭೇದವಿಲ್ಲವೆಂದು ಹೇಳಿದನು.
12. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದವನು ರಾಜದ್ರೋಹಿಯಾಗಿ ಶಿಕ್ಷೆಗೆ ಗುರಿಯಾಗುವನು.
13. ಅರಿರಾಯ ವಿಭಾಡ ಹಾಗೂ ಭಾಷಗೆ ತಪ್ಪುವ ರಾಯರಗಂಡ ಎಂಬುದು ಬುಕ್ಕರಾಯನ ಹಿರಿಮೆ.
14. ಸಂವತ್ಸರಗಳು 60.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು**

1. ಸಂಪ್ರದಾಯ ವಿರೋಧಿಗಳಿಗೆ (ನಾಸ್ತಿಕ) ಸಮುದ್ರದೊಳಗಿನ ಹೆಣ್ಣುಕುದುರೆಯ ಮುಖದಿಂದ ಹೊರಟ ಬೆಂಕಿಯಂತೆ, ವಿಷ್ಣುವಿನ ಪಾದಕಮಲಗಳಿಗೆ ಮುಖ್ಯದಾಸನಾಗಿ, ವೈಕುಂಠಕ್ಕೆ ದಾರಿಯನ್ನು ತೋರಿಸುವ ಮಾರ್ಗದರ್ಶಕರಾದ ಯತಿಗಳಿಗೆ ರಾಜರೆನಿಸಿದ ರಾಮಾನುಜಾಚಾರ್ಯರಿಗೆ ಜಯವಾಗಲಿ ಎಂದು ವರ್ಣಿಸಿದ್ದಾರೆ.
2. ತಿರುಪತಿ, ಶ್ರೀರಂಗಂ ಮತ್ತು ಮೇಲುಕೋಟೆಯ ಮುಖ್ಯ ಆಚಾರ್ಯರುಗಳು, ಸಮಯಿಗಳು, ಸಕಲ ಸಾತ್ವಿಕರು, ಮೋಷ್ಟಿಕರು, ಜಲಗಾರರು, ಸಾಮಂತರು, ಮಲೆನಾಡ ಪ್ರದೇಶದವರು, ಅಲೆಮಾರಿಗಳು, ಜಾಂಬವಕುಲದವರು ಮುಂತಾದ ನಲವತ್ತೆಂಟು ರೀತಿಯ ಜನರನ್ನು, ಹದಿನೆಂಟು ನಾಡಿನ ವೈಷ್ಣವ ಜನರನ್ನು ಆಹ್ವಾನಿಸಿದನು.
3. ವೈಷ್ಣವಧರ್ಮಕ್ಕೂ ಜೈನಧರ್ಮಕ್ಕೂ ಯಾವುದೇ ಭೇದವಿಲ್ಲವೆಂದು, ಜೈನ ಧರ್ಮಕ್ಕೆ ಪೂರ್ವದಲ್ಲಿ ಸಿಗುತ್ತಿದ್ದ ಪಂಚಮಹಾವಾದ್ಯಗಳು ಮತ್ತು ಕಲಶವು ಸಲ್ಲಬೇಕು.ಜೈನ ಧರ್ಮಕ್ಕೆ ವೈಷ್ಣವರಿಂದ ಹಾನಿಯಾದರೆ ವೈಷ್ಣವ ಧರ್ಮಕ್ಕೆ ಹಾನಿಯಾದಂತೆ ಹಾಗೂ ಜೈನರಿಂದ ಬಾಗಿಲುಗಟ್ಟಲೆಯಾಗಿ ಸಂಗ್ರಹಿಸಿದ ಹಣದಿಂದ ಜಿನಾಲಯಗಳ ಜೀರ್ಣೋದ್ಧಾರಕ್ಕೆ ಬಳಸುವುದು.

**ಸಂದರ್ಭದ ಉತ್ತರಗಳು : ( ಸೂಚನೆ : ಒಂದಕ್ಕೆ ಮಾದರಿಯಾಗಿ ಉತ್ತರವನ್ನು ನೀಡಿದ್ದು ಉಳಿದವಕ್ಕೆ ಇದರಂತೆಯೇ ಉತ್ತರಿಸಿ)**

1. ಈ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ 'ಕನ್ನಡ ಬಾವುಟ' ಕೃತಿಯಿಂದ ಆಯ್ದ 'ಧರ್ಮಸಮದೃಷ್ಟಿ' ಶಾಸನದಿಂದ ಆರಿಸಿಕೊಳ್ಳಲಾಗಿದೆ.
   ಈ ಮೇಲಿನ ಮಾತು ಶಾಸನದ ಆರಂಭದಲ್ಲಿ ರಾಮಾನುಜಾಚಾರ್ಯರ ಗುಣ ವಿಶೇಷತೆಯನ್ನು ಕುರಿತು ಹೇಳುವಾಗ ಬಂದಿದೆ. ನಾಸ್ತಿಕರ ಪಾಲಿಗೆ ಸಮುದ್ರದೊಳಗಿನ ಕುದುರೆಯ ಮುಖದಿಂದ ಹೊರಟ ಬೆಂಕಿಯಂತೆ ರಾಮಾನುಜಾಚಾರ್ಯರು ನಡೆದುಕೊಳ್ಳುತ್ತಿದ್ದರು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ವಾಕ್ಯ ಬಂದಿದೆ.

**ಹಿಂದೂ ಪಂಚಾಗದ ಪ್ರಕಾರ ವಾರಗಳಿಗೆ ಇರುವ ಇತರೆ ಹೆಸರುಗಳು :**

- **ಸೋಮವಾರ** – ಇಂದುವಾರ, ಚಂದ್ರವಾರ
- **ಮಂಗಳವಾರ** – ಕುಜವಾರ, ಭೌಮವಾರ.
- **ಬುಧವಾರ** – ಸೌಮ್ಯವಾರ.
- **ಗುರುವಾರ** – ಬೃಹಸ್ಪತಿವಾರ
- **ಶುಕ್ರವಾರ** – ಭೃಗುವಾರ, ಭಾರ್ಗವವಾರ,
- **ಶನಿವಾರ** – ಸ್ಥಿರವಾರ, ಮಂದಾರವಾರ
- **ಭಾನುವಾರ** – ರವಿವಾರ, ಆಯುತವಾರ ( ಆದಿತ್ಯವಾರ )

## ಧರ್ಮ ಸಮದೃಷ್ಠಿ ಗದ್ಯಭಾಗದಲ್ಲಿ ಬರುವ ವ್ಯಾಕರಣಾಂಶಗಳು :

### ➢ ಸಮಾನಾರ್ಥಕಗಳು;-

**1. ಸಮಯಿ** – ಒಂದು ನಿರ್ದಿಷ್ಟ ಸಿದ್ಧಾಂತವನ್ನುಅನುಸರಿಸುವವನು, 2. **ಬಡವಾ** –ಹೆಣ್ಣುಕುದುರೆ **3. ತಡಿ** – ತಟ
4. **ಈಶ್ವರ** – ಒಡೆಯ **5. ಅಂಬುಜ** – ತಾವರೆ **6. ಚಂದ್ರಾರ್ಕಸ್ಥಾಯಿ** –ಸೂರ್ಯ ಚಂದ್ರರಿರುವವರೆಗು
7. **ಬಸ್ತಿ** – ಜೈನದೇವಾಲಯ(ಬಸದಿ) **8. ಕಟ್ಟಳೆ** – ನಿಯಮ **9. ಹೋಹರು** – ಹೋಗುತ್ತಾರೆ
**10. ಉಪಾರ್ಜಿಸು** – ಸಂಪಾದಿಸು

### ➢ ತತ್ಸಮ – ತದ್ಭವಗಳು

1. **ವರ್ಷ** – ವರುಷ 2. **ಶ್ರೀ** – ಸಿರಿ 3. **ಲೋಕ** – ಲೋಗ 4. **ಕೀರ್ತಿ** – ಕೀರುತಿ 5. **ಮಂಟಪ** – ಮಂಡಪ
6. **ವಸತಿ** – ಬಸದಿ 7. **ವೀರ** – ಬೀರ 8. **ರಾಯ** – ರಾಜ 9. **ಭಕ್ತ** – ಬಕುತ 10. **ಸಾಮಂತ** – ಸಾವಂತ
11. **ತಟ** – ದಡ 12 **ಚಂದ್ರ** – ಚಂದಿರ 13. **ದಿಶಾ** – ದೆಸೆ 14. **ಮುಖ** – ಮೊಗ 15. **ವಿಜ್ಞಾಪನೆ** – ಬಿನ್ನಹ
16. **ಧರ್ಮ** – ದಮ್ಮ 17. **ಸುಧೆ** – ಸೊದೆ 18. **ದೃಷ್ಟಿ** – ದಿಟ್ಟಿ 19. **ಪುಣ್ಯ** – ಪುನ್ನೆ 20. **ಕಳಶ** – ಕಲಸ

### ➢ ಪಠ್ಯಪುಸ್ತಕದಲ್ಲಿ ಇರುವ (ಭಾಷಾಭ್ಯಾಸಗಳು) ಕೆಲವು 'ಸಂಧಿಯ'ಉದಾಹರಣೆಗಳು(ಗದ್ಯ);-.

1. **ಮಂಡಳೇಶ್ವರ** – ಮಂಡಳ + ಈಶ್ವರ = ಗುಣಸಂಧಿ
2. **ಸಕಳಾಚಾರ್ಯ** – ಸಕಳ + ಆಚಾರ್ಯ = ಸರ್ವಣದೀರ್ಘಸಂಧಿ
3. **ಕೈವಿಡಿದು** – ಕೈ + ಪಿಡಿದು = ಆದೇಶಸಂಧಿ
4. **ಭೇದವಿಲ್ಲ** – ಭೇದ + ಇಲ್ಲ = ಆಗಮಸಂಧಿ
5. **ವೃದ್ಧಿಯಾಗಿ** – ವೃದ್ಧಿ + ಆಗಿ = ಆಗಮ(ಯಕರಾಗಮ)ಸಂಧಿ
6. **ಭೇದವಾಗಿ** – ಭೇದ + ಆಗಿ = ಆಗಮ(ವಕರಾಗಮ)ಸಂಧಿ
7. **ಕಾಣಲಾಗದು** – ಕಾಣಲು+ಆಗದು = ಲೋಪಸಂಧಿ
8. **ಜಿನಾಲಯ** – ಜಿನ + ಆಲಯ = ಸವರ್ಣದೀರ್ಘಸಂಧಿ
9. **ತಪ್ಪಲೀಯದೆ** – ತಪ್ಪಲು + ಈಯದೆ = ಲೋಪ ಸಂಧಿ
10. **ಚಂದ್ರಾರ್ಕ** – ಚಂದ್ರ + ಅರ್ಕ = ಸವರ್ಣದೀರ್ಘಸಂಧಿ.
11. **ಶ್ರೀಮನ್ಮಹಾ** – ಶ್ರೀಮತ್+ಮಹಾ = ಅನುನಾಸಿಕ ಸಂಧಿ
12. **ಬಾಗಿಲುಗಟ್ಟಲೆ** – ಬಾಗಿಲು + ಕಟ್ಟಲೆ = ಆದೇಶಸಂಧಿ

### ➢ ಸಮಾಸ ಪದಗಳು

1. **ಜಿನಾಲಯ** – ಜಿನರ + ಆಲಯ = ತತ್ಪುರುಷಸಮಾಸ.
2. **ಅರಿರಾಯ** – ಅರಿಗಳಿಗೆ + ರಾಯ = ತತ್ಪುರುಷಸಮಾಸ
3. **ವಿಷ್ಣುಲೋಕ** – ವಿಷ್ಣುವಿನ + ಲೋಕ = ತತ್ಪುರುಷಸಮಾಸ
4. **ನಲವತ್ತೆಂಟು** – ನಲವತ್ತರ + ಎಂಟು = ಗಮಕಸಮಾಸ
5. **ಹೊಸಪಟ್ಟಣ** – ಹೊಸದು + ಪಟ್ಟಣ = ಕರ್ಮಧಾರಯಸಮಾಸ
6. **ತಣ್ಣೀರು** – ತಣ್ಣಗಿರುವ + ನೀರು = ಕರ್ಮಧಾರಯಸಮಾಸ
7. **ಕೈವಿಡಿದು** – ಕೈಯನ್ನು + ಹಿಡಿದು = ಕ್ರಿಯಾಸಮಾಸ
8. **ಚಂದ್ರಾರ್ಕ** – ಚಂದ್ರನೂ + ಅರ್ಕನೂ = ದ್ವಂದ್ವಸಮಾಸ
9. **ಪಂಚಮಹಾವಾದ್ಯ**– ಪಂಚ + ಮಹಾವಾದ್ಯ = ದ್ವಿಗುಸಮಾಸ

### ➢ ದ್ವಿರುಕ್ತಿ ಪದಗಳು : ಮನೆಮನೆಗೆ, ವರ್ಷವರ್ಷಕ್ಕೆ

ಪಾಠ: ಧರ್ಮಸಮದೃಷ್ಟಿ – (ಶಾಸನ)

1. ಒಂದು ಪೂರ್ಣ ಕ್ರಿಯಾಪದದಿಂದ ಕೂಡಿದ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನಚಿಹ್ನೆ:–
ಉ: ಪೂರ್ಣವಿರಾಮ

2.ಪ್ರಧಾನ ವಾಕ್ಯದಲ್ಲಿರುವ ಅನೇಕ ಉಪವಾಕ್ಯಗಳ ಅಂತ್ಯದಲ್ಲಿ ಬಳಸಬೇಕಾದ ಲೇಖನ ಚಿಹ್ನೆ:
ಉ: ಅರ್ಧವಿರಾಮ

3.ಸಂಬೋಧನೆಯ ಮುಂದೆ ಹಾಗೂ ಕರ್ತೃ,ಕರ್ಮ,ಕ್ರಿಯಾಪದಗಳಿಗೆ ವಿಶೇಷಣಗಳು ಬಂದಾಗ ಈ ಲೇಖನ ಚಿಹ್ನೆಯನ್ನು ಬಳಸುವರು :
ಉ: ಅಲ್ಪವಿರಾಮ

4.ಪ್ರಶ್ನೆರೂಪದ ಪದ ಮತ್ತು ವಾಕ್ಯಗಳ ಮುಂದೆ ಬಳಸಬೇಕಾದ ಲೇಖನ ಚಿಹ್ನೆ:
ಉ: ಪ್ರಶ್ನಾರ್ಥಕ

5.ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ, ಉಪವಾಕ್ಯಗಳ ಅಂತ್ಯದಲ್ಲಿ ಈಲೇಖನ ಚಿಹ್ನೆಯನ್ನು ಬಳಸುವರು:
ಉ: ಅರ್ಧವಿರಾಮ.

6.ಪ್ರಶ್ನೆಗಳನ್ನು ಕೇಳುವ ಸಂದರ್ಭದಲ್ಲಿ ಪದ ಅಥವಾ ವಾಕ್ಯದ ಅಂತ್ಯದಲ್ಲಿ ಬಳಸಬೇಕಾದ ಲೇಖನ ಚಿಹ್ನೆ:
ಉ: ಪ್ರಶ್ನಾರ್ಥಕ

7.ಹರ್ಷ,ಆಶ್ಚರ್ಯ, ಸಂತೋಷ, ದುಃಖ,ಕೋಪ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಈಲೇಖನ ಚಿಹ್ನೆಯನ್ನುಬಳಸುವರು:
ಉ: ಭಾವಸೂಚಕ

8.ಒಂದು ಅಭಿಪ್ರಾಯದ ವಿವರಣೆ(ಇಂತಿದೆ)ಮುಂದೆ ತಿಳಿಸಿದಂತೆಇದೆ ಎಂದು ತೋರಿಸುವ ಸಂದರ್ಭದಲ್ಲಿ ಈಲೇಖನ ಚಿಹ್ನೆಯನ್ನು ಬಳಸಿಲಾಗುತ್ತದೆ:
ಉ: ವಿವರಣಾತ್ಮಕ

9.ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸಬೇಕಾದ ಲೇಖನ ಚಿಹ್ನೆ:
ಉ: ಉದ್ಧರಣ

10.ಬರವಣಿಗೆಯಲ್ಲಿ ಪಾರಿಭಾಷಿಕ/ಪ್ರಧಾನ/ವಿಶಿಷ್ಟ ಪದಗಳನ್ನು ಬಳಕೆ ಮಾಡುವಾಗ ಇರಬೇಕಾದ ಲೇಖನ ಚಿಹ್ನೆ:
ಉ: ವಾಕ್ಯವೇಷ್ಟನ

11.ಒಂದು ಪದ ಅಥವಾ ವಾಕ್ಯಕ್ಕೆ ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಈಲೇಖನ ಚಿಹ್ನೆಯನ್ನು ಬಳಸಲಾಗುತ್ತದೆ:
ಉ: ಆವರಣ

12.ಉಪಾಧ್ಯಾಯರು ಹುಡುಗರ ಪೈಕಿ ಬಲಿಷ್ಟನಾದವನನ್ನು ಕರೆದು ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿಬಾ ಎಂದರು.ಈ ವಾಕ್ಯದಲ್ಲಿರ ಬೇಕಾದ ಲೇಖನ ಚಿಹ್ನೆ:
ಉ: ಉದ್ಧರಣ

13. ಬುಕ್ಕರಾಯನ ಹಿರಿಮೆ ಏನು– ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ:
ಉ: ಪ್ರಶ್ನಾರ್ಥಕ

14. ಆಹಾ ಎಷ್ಟು ಸುಂದರವಾಗಿದೆ ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ
ಉ: ಭಾವಸೂಚಕ, ಆಶ್ಚರ್ಯಸೂಚಕ.

ಪತ್ರದಲ್ಲಿರುವ ಉದಾಹರಣೆಗಳು:–

ವ್ಯವಹಾರಿಕ ಪತ್ರ:–
ಪತ್ರಲೇಖನ:– (ಮಾದರಿ)

ಅಶೋಕನಗರ
04–09–2013

ಪ್ರಮೀಳ
ಹತ್ತನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ಅಶೋಕನಗರ
ಶಿವಮೊಗ್ಗ

— ಇವರು,

ಮಾನ್ಯಕಾರ್ಯದರ್ಶಿಗಳು
ಕನ್ನಡ ಸಾಹಿತ್ಯ ಪರಿಷತ್ತು.
ಚಾಮರಾಜಪೇಟೆ
ಬೆಂಗಳೂರು

ಮಾನ್ಯರೇ,

ವಿಷಯ:– ಪರಿಷತ್ತಿನ ಪ್ರಕಟಣೆಯಾದ 'ಕನ್ನಡ ನಿಘಂಟಿನ" ಹತ್ತುಪ್ರತಿಗಳನ್ನು ಕಳುಹಿಸಿ ಕೊಡುವ ಬಗ್ಗೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ಪರಿಷತ್ತು ಪ್ರಕಟಿಸಿರುವ ಕನ್ನಡ ನಿಘಂಟಿನ ಹತ್ತು ಪ್ರತಿಗಳು ನನಗೆ ಮತ್ತು ನನ್ನ ಗೆಳೆಯ/ಗೆಳತಿಯರಿಗೆ ಬೇಕಾಗಿದೆ, ದಯಮಾಡಿ ಹತ್ತು ಪ್ರತಿಗಳನ್ನು ನನ್ನ ವಿಳಾಸಕ್ಕೆ ವಿ.ಪಿ.ಪಿ ಮಾಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ. ಆ ಬಗ್ಗೆ ಐನೂರು ರೂಪಾಯಿಗಳ ಬ್ಯಾಂಕ್ ಹುಂಡಿಯನ್ನು ಮುಂಗಡರೂಪವಾಗಿ ಈ ಪತ್ರದ ಜೊತೆ ಇರಿಸಿದ್ದೇನೆ.

ಗೌರವ ವಂದನೆಗಳೊಂದಿಗೆ,

ಇತಿ

ತಮ್ಮ ನಂಬುಗೆಯ

ಸಹಿ--------------

(ಪ್ರಮೀಳ)

ಸ್ಥಳ :-ಅಶೋಕನಗರ

ದಿನಾಂಕ:- 04-9-2013

## ಗದ್ಯಪಾಠ : 5. ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ

– ಡಿ.ಎಸ್.ಜಯಪ್ಪಗೌಡ

**ಕವಿ ಕೃತಿ ಪರಿಚಯ:** ಲೇಖಕ ಡಿ.ಎಸ್.ಜಯಪ್ಪಗೌಡರವರು 1947ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿಯಲ್ಲಿ ಜನಿಸಿದರು. ಇವರು 'ಕರ್ನಾಟಕ ಗ್ರಾಮೀಣ ಸಂಸ್ಥೆಗಳು', 'ಮೈಸೂರು ಒಡೆಯರು', 'ಜನಪದ ಆಟಗಳು', 'ಕರ್ನಾಟಕದ ಕಡಲಾಚೆಯ ಸಂಪರ್ಕಗಳು', 'ಸರ್.ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'- ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

### ಭಾಗ - ಎ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:**

1. ಸಾಧನೆಗೆ ಬೇಕಾಗುವ ಅಂಶಗಳಾವುವು?
2. ಭಾರತೀಯರು ಯಾವ ದೂಷಣೆಗೆ ಒಳಗಾಗಿದ್ದಾರೆ?
3. ವಿಶ್ವೇಶ್ವರಯ್ಯನವರ ಜನ್ಮ ದಿನಾಂಕ ತಿಳಿಸಿ.
4. ವಿಶ್ವೇಶ್ವರಯ್ಯನವರ ತಂದೆ ತಾಯಿಗಳ ಹೆಸರೇನು?
5. ವಿಶ್ವೇಶ್ವರಯ್ಯನವರಿಗೆ ' ಮೋಕ್ಷಗುಂಡಂ ' ಹೆಸರು ಸೇರಿಕೊಳ್ಳಲು ಕಾರಣವೇನು?
6. ಪಾಳೆಯಗಾರ ಭೈರೇಗೌಡ ಯಾವ ವಂಶಕ್ಕೆ ಸೇರಿದವನು?
7. ವಿಶ್ವೇಶ್ವರಯ್ಯನವರ ಕುಟುಂಬದವರು ಚಿಕ್ಕಬಳ್ಳಾಪುರಕ್ಕೆ ವಲಸೆ ಬರಲು ಕಾರಣವೇನು?
8. ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದವರು ಯಾರು?
9. ವಿಶ್ವೇಶ್ವರಯ್ಯನವರು ಕೈಗಾರಿಕೆಯ ಬಗ್ಗೆ ಮಾಡಿದ ಘೋಷಣೆ ಯಾವುದು?
10. ಮೈಸೂರು ಬ್ಯಾಂಕನ್ನು ಯಾವಾಗ ಸ್ಥಾಪಿಸಲಾಯಿತು?
11. ವಿಶ್ವೇಶ್ವರಯ್ಯನವರಿಗೆ ಭಾರತದ ಸರ್ಕಾರ ನೀಡಿದ ಅತ್ಯುನ್ನತ ಪ್ರಶಸ್ತಿ ಯಾವುದು?
12. ಶತಮಾನೋತ್ಸವ ಎಂದರೇನು?
13. ವಿಶ್ವೇಶ್ವರಯ್ಯನವರು ಕನ್ನಡ ಭಾಷೆಯ ಅಭಿವೃದ್ಧಿಗೆ ಸ್ಥಾಪಿಸಿದ ಸಂಸ್ಥೆ ಯಾವುದು?
14. ವಿಶ್ವೇಶ್ವರಯ್ಯನವರ ಆತ್ಮಚರಿತ್ರೆಯ ಹೆಸರೇನು?
15. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ?

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

1. ವಿಶ್ವೇಶ್ವರಯ್ಯನವರ ವಿದ್ಯಾಭ್ಯಾಸ ಎಲ್ಲೆಲ್ಲಿ ನಡೆಯಿತು?
2. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ?
3. ನೆಹರೂರವರು ಸರ್ ಎಂ ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ ?
4. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯನವರು ಸಲ್ಲಿಸಿದ ಸೇವೆ ಯಾವುದು ?
5. ಎಂಜಿನಿಯರ್ ಗಳಿಗೆ ವಿಶ್ವೇಶ್ವರಯ್ಯನವರು ಏನೆಂದು ಮಾರ್ಗದರ್ಶನ ಮಾಡಿದರು?
6. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯನವರು ಮಾಡಿದ ಮಾರ್ಪಾಡುಗಳೇನು?

**ಸಂದರ್ಭ ಸಹಿತ ವಿವರಿಸಿ:**

1. "ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ"
2. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"
3. " ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯವೇ ಸರಿ "
4. " ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು "
5. " ಮಾಹಿತಿಗಳಲ್ಲಾಗಲಿ, ವಿಧಾನದಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ "

## ಭಾಗ - ಬಿ

**ಕೆಳಗೆ ಕೊಟ್ಟಿರುವ ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ :**

**1) ' ದೈವಭಕ್ತಿ ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.**

ಎ) ದ್ವಿಗು ಸಮಾಸ ಬಿ) ತತ್ಪುರುಷ ಸಮಾಸ ಸಿ) ಕರ್ಮಧಾರಯ ಸಮಾಸ ಡಿ) ಕ್ರಿಯಾ ಸಮಾಸ

**2) ' ಪೆರ್ಮಗ ' ಪದವನ್ನು ವಿಗ್ರಹವಾಕ್ಯ ಮಾಡಿದಾಗ**

ಎ) ಪೆರಿ+ಮಗ ಬಿ) ಪೆರ್ಮ+ಮಗ ಸಿ) ಪಿರಿಯ+ಮಗ ಡಿ) ಪೆರ್ದು+ಮಗ

**3) ಈ ಪದಗಳಲ್ಲಿ 'ಕರ್ಮಧಾರಯ ಸಮಾಸ' ಪದವನ್ನು ಆರಿಸಿ.**

ಎ) ತಲೆನೋವು ಬಿ) ಒಗ್ಗಾಲಿ ಸಿ) ಮುಕ್ಕಣ್ಣ ಡಿ) ಮೆಲ್ಮಾತು

**4) ' ನಟ್ಟಡವಿ ' ಪದವು ಈ ಸಮಾಸಕ್ಕೆ ಉದಾಹರಣೆ**

ಎ) ತತ್ಪುರುಷ ಬಿ) ಅಂಶಿ ಸಿ) ದ್ವಿಗು ಡಿ) ಗಮಕ

**5) ಈ ಪದಗಳಲ್ಲಿ 'ದ್ವಂದ್ವ' ಸಮಾಸಕ್ಕೆ ಉದಾಹರಣೆ**

ಎ) ಸೂರ್ಯಚಂದ್ರರು ಬಿ) ಧನಹರಣ ಸಿ) ಘಟಸಂಭೂತ ಡಿ) ಸೊಲ್ಗೇಳಿ

**6) ನಾಮಪದ ಮತ್ತು ಕ್ರಿಯಾಪದ ಸೇರಿ ಆಗುವ ಸಮಾಸವನ್ನು ಹೀಗೆಂದು ಕರೆಯುವರು.**

ಎ) ಕರ್ಮಧಾರಯ ಬಿ) ತತ್ಪುರುಷ ಸಿ) ಕ್ರಿಯಾ ಸಮಾಸ ಡಿ) ದ್ವಂದ್ವಸಮಾಸ

**7) ' ಬಿಲ್ಗೊಂಡು ' ಪದವನ್ನು ವಿಗ್ರಹವಾಕ್ಯ ಮಾಡಿದಾಗ**

ಎ) ಬಿಲ್+ಕೊಂಡು ಬಿ) ಬಿಲ್ಲನ್ನು+ಗೊಂಡು ಸಿ) ಬಿಲ್ಲಂ+ಕೊಂಡು ಡಿ) ಬಿಲ್ಲ+ಕೊಂಡು

**8) ' ಆ ಶಿಕ್ಷಣ ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.**

ಎ) ಅಂಶಿ ಬಿ) ಗಮಕ ಸಮಾಸ ಸಿ) ಕ್ರಿಯಾ ಸಮಾಸ ಡಿ) ತತ್ಪುರುಷ

**9. ' ದಿವಾನ ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ :**

ಎ) ಅರಬ್ಬಿ ಬಿ) ಪರ್ಷಿಯನ್ ಸಿ) ಸಂಸ್ಕೃತ ಡಿ) ಹಿಂದುಸ್ಥಾನಿ

**10. ' ಅಜಮಾಯಿಸಿ' - ಈ ಭಾಷೆಯಿಂದ ಕನ್ನಡಕ್ಕೆ ಬಂದ ಅನ್ಯದೇಶಿಯ ಪದ :**

ಎ) ಪಾರ್ಸಿಭಾಷೆ ಬಿ) ಇಂಗ್ಲೀಷ್ ಸಿ) ಸಂಸ್ಕೃತ ಡಿ) ಹಿಂದುಸ್ಥಾನಿ

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ:**

1. ಹರಿಕಾರ : ತದ್ಧಿತಾಂತ ನಾಮಪದ : : ಬಡತನ : ____________
2. ಪುಸ್ತಕ : ಹೊತ್ತಗೆ : : ಕಾರ್ಯ : ____________
3. ಜ್ಞಾನ : ಜಾನ : : ಸ್ಥಾನ : ____________
4. ಯಶ : ಜಸ : : ಪಟ್ಟಣ : ____________
5. ದಿವಾನ : ಪರ್ಷಿಯನ್ : : ಕಾಗದ : ____________
6. ಸ್ಯಾನಿಟರಿ : ಇಂಗ್ಲೀಷ್ : : ಅಜಮಾಯಿಸಿ : ____________
7. ಪ್ರೌಢ : ಸಂಸ್ಕೃತ : : ಡಾಕ್ಟರೇಟ್ : ____________
8. ಸೋಪ್ : ಇಂಗ್ಲೀಷ್ : : ಶಿಕ್ಷಣ : ____________

**ಉತ್ತರಗಳು : 1 ಬಿ. ತತ್ಪುರುಷ ಸಮಾಸ 2. ಸಿ. ಪಿರಿಯ+ಮಗ 3. ಡಿ. ಮೆಲ್ಮಾತು 4. ಬಿ. ಅಂಶಿ 5. ಎ. ಸೂರ್ಯಚಂದ್ರರು 6. ಸಿ. ಕ್ರಿಯಾ ಸಮಾಸ 7. ಸಿ) ಬಿಲ್ಲಂ+ಕೊಂಡು 8. ಬಿ) ಗಮಕ ಸಮಾಸ 9. ಬಿ. ಪರ್ಷಿಯನ್ 10. ಎ. ಪಾರ್ಸಿಭಾಷೆ**

**ಉತ್ತರಗಳು : 1. ತದ್ಧಿತಾಂತ ಭಾವನಾಮ 2. ಕಜ್ಜ 3. ತಾಣ 4. ಪತ್ತನ 5. ಹಿಂದೂಸ್ತಾನಿ 6. ಪಾರ್ಸಿ 7. ಇಂಗ್ಲೀಷ್ 8. ಸಂಸ್ಕೃತ**

ಒಂದು ಅಂಕದ ಉತ್ತರಗಳು:

1: ಸಾಮಾಜಿಕ ಹೊಣೆಗಾರಿಕೆ, ಪರಿಶ್ರಮ, ಭವಿಷ್ಯತ್ ಚಿಂತನೆ, ನಿಷ್ಠೆ, ಛಲವಂತಿಕೆ ಇವು ಸಾಧನೆಗೆ ಬೇಕಾಗುವ ಅಂಶಗಳಾಗಿವೆ.

2: ಭಾರತೀಯರು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದಾರೆ.

3: ವಿಶ್ವೇಶ್ವರಯ್ಯನವರು ದಿನಾಂಕ : 15-09-1860 ರಲ್ಲಿ ಜನಿಸಿದರು.

4: ವಿಶ್ವೇಶ್ವರಯ್ಯನವರ ತಂದೆ ಶ್ರೀನಿವಾಸ ಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ.

5: ವಿಶ್ವೇಶ್ವರಯ್ಯನವರ ಪೂರ್ವಜರು ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಮೋಕ್ಷಗುಂಡಂ ಅಗ್ರಹಾರಕ್ಕೆ ಸೇರಿದವರಾದ್ದರಿಂದ ಅವರೊಂದಿಗೆ ಈ ಹೆಸರು ಸೇರಿಕೊಂಡಿದೆ.

6: ಪಾಳೆಯಗಾರ ಭೈರೇಗೌಡ ಆವತಿ ವಂಶಕ್ಕೆ ಸೇರಿದವನು.

7: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿಶ್ವೇಶ್ವರಯ್ಯನವರ ಕುಟುಂಬದವರು ಚಿಕ್ಕಬಳ್ಳಾಪುರಕ್ಕೆ ವಲಸೆ ಬಂದರು.

8: ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದರು.

9: ವಿಶ್ವೇಶ್ವರಯ್ಯನವರು "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು.

10: 1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಲಾಯಿತು.

11: 'ಭಾರತರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

12: ನೂರು ವರ್ಷಗಳನ್ನು ಪೂರೈಸಿದುದರ ನೆನಪಿಗಾಗಿ ಆಚರಿಸುವ ಸಂಭ್ರಮಾಚರಣೆಯೇ ಶತಮಾನೋತ್ಸವ

13: ವಿಶ್ವೇಶ್ವರಯ್ಯನವರು ಕನ್ನಡ ಭಾಷೆಯ ಅಭಿವೃದ್ಧಿಗೆ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು.

14: ಮೆಮೋರೀಸ್ ಆಫ್ ಮೈ ಲೈಫ್ ಎಂಬುದು ವಿಶ್ವೇಶ್ವರಯ್ಯನವರ ಆತ್ಮಚರಿತ್ರೆ

15: ವಿಶ್ವೇಶ್ವರಯ್ಯನವರ ಹುಟ್ಟು ಹಬ್ಬದ ನೆನಪಿಗಾಗಿ ಇಂದಿಗೂ ಇಂಜಿನಿಯರ್ಸ್ ದಿನಾಚರಣೆಯನ್ನು ಆಚರಿಸುತ್ತಾರೆ.

ಉತ್ತರಗಳು:

1: ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಬೆಂಗಳೂರಿನ ವೆಸ್ಲಿಯನ್ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣವನ್ನು, ಸೆಂಟ್ರಲ್ ಕಾಲೇಜಿನಲ್ಲಿ ಪದವಿ ಶಿಕ್ಷಣವನ್ನು ಪಡೆದರು. ಪೂನಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೊಮೊ ಶಿಕ್ಷಣವನ್ನು ಪಡೆದರು.

2: ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು, ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು ಎಂದು ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಹೇಳಿದ್ದಾರೆ.

3: 'ದುರಾದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ, ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ " ಎಂದು ವಿಶ್ವೇಶ್ವರಯ್ಯರವರ ಶತಮಾನೋತ್ಸವ ಸಮಾರಂಭದಲ್ಲಿ ಹೇಳಿದ್ದಾರೆ.

4: ಹೈದರಾಬಾದ್ ನಗರಕ್ಕೆ ಅಪಾರ ನಷ್ಟ ಉಂಟು ಮಾಡುತ್ತಿದ್ದ ಈಸಿ ಮತ್ತು ಮೂಸಿ ನದಿಗಳಿಗೆ ಪ್ರತ್ಯೇಕ ಜಲಾಶಯ ನಿರ್ಮಿಸಿ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರಿಸಿದರು.

5: ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು, ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ. ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರಿಂಗ್ ಪಡೆಯುವಷ್ಟು ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು ಎಂದು ಮಾರ್ಗದರ್ಶನ ನೀಡಿದರು.

6: 1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಉಳಿತಾಯ ಬ್ಯಾಂಕ್ ಗಳು ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್, ಸಾರ್ವಜನಿಕ ವಿಮಾ ಯೋಜನೆ, ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಹಕಾರಿ ಬ್ಯಾಂಕ್ ಗಳನ್ನು ವಿಶ್ವೇಶ್ವರಯ್ಯನವರು ಸ್ಥಾಪಿಸಿದರು.

**ಸಂದರ್ಭ ಸ್ವಾರಸ್ಯದ ಉತ್ತರಗಳು:** ( ಒಂದು ಸಂದರ್ಭಕ್ಕೆ ಮಾದರಿಯಾಗಿ ಉತ್ತರ ನೀಡಲಾಗಿದೆ ಉಳಿದವಕ್ಕೆ ಮಾದರಿಯಂತೆ ಉತ್ತರಿಸಿ )

1. ಈ ವಾಕ್ಯವನ್ನು 'ಡಿ.ಎಸ್.ಜಯಪ್ಪಗೌಡ' ರವರು ರಚಿಸಿರುವ 'ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಜವಹರಲಾಲ್ ನೆಹರೂರವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯನವರ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯನವರನ್ನು ಉದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಹೇಳಿದ್ದಾರೆ.ವಿಶ್ವೇಶ್ವರಯ್ಯನವರ ಗುಣ ಸ್ವಭಾವ, ಸಾಧನೆಗಳನ್ನು ಸ್ಮರಿಸಿ ಕೊಂಡಾಡುತ್ತ ವಿಶ್ವೇಶ್ವರಯ್ಯನವರು ಮಾತು ಕಡಿಮೆ ಮಾಡಿ ಕೆಲಸ ಹೆಚ್ಚು ಮಾಡುತ್ತಿದ್ದರೆಂದು ವಿವರಿಸಿದ್ದಾರೆ.

### ಭಾಗ್ಯಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ ಪಾಠದ ವ್ಯಾಕರಣಾಂಶಗಳು :

## ➢ ಪದಗಳ ಅರ್ಥ:

**ಅನ್ವೇಷಣೆ** - ಸಂಶೋಧನೆ, ಹುಡುಕಾಟ, **ಹರಿಕಾರ** - ಮುಂದಾಳು, **ತುಡಿತ** - ಅತಿಯಾದ ಆಸಕ್ತಿ, ಸೆಳೆತ **ಇಹಲೋಕ** - ಭೂಲೋಕ ಮನ್ವಂತರ - ಪರಿವರ್ತನೆಯ ಕಾಲ; ಹೊಸಯುಗ,

## ➢ ತತ್ಸಮ – ತದ್ಭವಪದಗಳು :

1. **ವಂಶ** – ಬಂಚ **2. ಸ್ಥಾನ** – ತಾಣ **3. ಯಶ** – ಜಸ **4. ಪಟ್ಟಣ** – ಪತ್ತನ **5. ಕಾರ್ಯ** – ಕಜ್ಜ **6. ಸಕ್ಕರೆ** – ಶರ್ಕರಾ 7. **ರಾಷ್ಟ್ರ** - ರಟ್ಟ

## ➢ ಸಂಧಿಗಳು:

| | | | |
|---|---|---|---|
| **ಮತ್ತೊಂದು** | - ಮತ್ತು + ಒಂದು = ಲೋಪ ಸಂಧಿ | **ಮೇಲುಗಾಲುವೆ** | - ಮೇಲು + ಕಾಲುವೆ = ಆದೇಶಸಂಧಿ |
| **ಗುರಿಯಾಗಿತ್ತು** | - ಗುರಿ + ಆಗಿತ್ತು = 'ಯ' ಆಗಮ ಸಂಧಿ | **ಜಲಾಶಯ** | - ಜಲ + ಆಶಯ = ಸವರ್ಣದೀರ್ಘಸಂಧಿ |
| **ಕಾರಣಾಂತರ** | - ಕಾರಣ +ಅಂತರ = ಸವರ್ಣದೀರ್ಘಸಂಧಿ | **ವಿದ್ಯಾಲಯ** | - ವಿದ್ಯ + ಆಲಯ = ಸವರ್ಣದೀರ್ಘಸಂಧಿ |
| ಗ್ರಂಥಾಲಯ | - ಗ್ರಂಥ + ಆಲಯ = ಸವರ್ಣದೀರ್ಘಸಂಧಿ | **ಕಾರ್ಯಾಂಗ** | - ಕಾರ್ಯ + ಅಂಗ = ಸವರ್ಣದೀರ್ಘಸಂಧಿ |
| **ಶತಮಾನೋತ್ಸವ** | - ಶತಮಾನ + ಉತ್ಸವ = ಗುಣಸಂಧಿ | **ಪರಮೋಚ್ಛ** | - ಪರಮ + ಉಚ್ಛ = ಗುಣಸಂಧಿ |
| **ಲೋಕೋಪಯೋಗಿ** | - ಲೋಕ + ಉಪಯೋಗಿ = ಗುಣಸಂಧಿ | **ಪೀಠೋಪಕರಣ** | - ಪೀಠ + ಉಪಕರಣ = ಗುಣಸಂಧಿ |
| **ಅತ್ಯುನ್ನತ** | - ಅತಿ + ಉನ್ನತ = ಯಣ್ಸಂಧಿ | **ಮನ್ವಂತರ** | - ಮನು + ಅಂತರ = ಯಣ್ ಸಂಧಿ |

**ಗಾದೆ ವಿಸ್ತರಿಸಿ:**

**"ಆಡು ಮುಟ್ಟದ ಸೊಪ್ಪಿಲ್ಲ"**

ಗಾದೆಗಳು ವೇದಕ್ಕೆ ಸಮಾನ. ವೇದ ಸುಳ್ಳಾದರೂ, ಗಾದೆ ಸುಳ್ಳಾಗುವುದಿಲ್ಲ ಎಂಬ ನಾಣ್ಣುಡಿ ಬಳಕೆಯಲ್ಲಿದೆ. ಗಾದೆಗಳು ಹಿರಿಯರ ಅನುಭವದಿಂದ ಬಂದ ನುಡಿ ಮುತ್ತುಗಳಾಗಿವೆ.

ಸಾಮಾನ್ಯವಾಗಿ ಆಡು ಆಹಾರಕ್ಕಾಗಿ ಎಲ್ಲಾ ಗಿಡಗಳ ಸೊಪ್ಪನ್ನು ತಿನ್ನುತ್ತದೆ. ಆಹಾರಕ್ಕಾಗಿ ನಿಂತಕಡೆ ನಿಲ್ಲುವುದಿಲ್ಲ. ಹೀಗೆಯೇ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿಗಳ ಬಗ್ಗೆ ಮಾತನಾಡುವಾಗ, ಬರೆಯುವಾಗ ಈ ಗಾದೆ ಮಾತನ್ನು ಬಳಸುತ್ತಾರೆ.

ಉದಾಹರಣೆಗೆ ಸಾಹಿತ್ಯ, ನಾಟಕ, ವಿಜ್ಞಾನ, ಪರಿಸರ, ಸಿನಿಮಾ, ಯಕ್ಷಗಾನ ಮುಂತಾದ ಕ್ಷೇತ್ರಗಳಲ್ಲಿ ಮಹತ್ತರವಾದ ಸಾಧನೆ ಮಾಡಿರುವ ಡಾ|| ಶಿವರಾಮಕಾರಂತರು, ಸರ್.ಎಂ.ವಿಶ್ವೇಶ್ವರಯ್ಯನವರು, ಮುಂತಾದವರನ್ನು ಕುರಿತು ಹೇಳಬಹುದಾಗಿದೆ. ಜೊತೆಗೆ ಕಾರಂತರನ್ನು ಕುರಿತು ಒಂದು ಗಾದೆಯು ಪ್ರಚಲಿತವಾಗಿದೆ. ಅಂದರೆ ಆಡು ಮುಟ್ಟದ ಸೊಪ್ಪಿಲ್ಲ; ಕಾರಂತರು ಮುಟ್ಟದ ವಿಷಯವಿಲ್ಲ.

**ಸಮಾಸಗಳು:**

**1) ತತ್ಪುರುಷ ಸಮಾಸ:**

| | | |
|---|---|---|
| ಮದದಿಂದ + ಅಂಧ = ಮದಾಂಧ | ಕಾಲದಿಂದ + ವಶ = ಕಾಲವಶ | ವಯಸ್ಸಿನಿಂದ + ವೃದ್ಧ = ವಯೋವೃದ್ಧ |
| ಬೆಟ್ಟದ + ತಾವರೆ = ಬೆಟ್ಟದಾವರ | ಪರರ + ಧನ = ಪರಧನ | ಸ್ವಾಮಿಗೆ + ದ್ರೋಹ = ಸ್ವಾಮಿದ್ರೋಹ |
| ದೈವದ +ಭಕ್ತಿ = ದೈವಭಕ್ತಿ | ಧನದ + ಹರಣ = ಧನಹರಣ | ಅತಿಯಾದ+ಕುಟಿಲ= ಅತಿಕುಟಿಲ |
| ತಲೆಯಲ್ಲಿ+ನೋವು=ತಲೆನೋವು | ಮೈಯಲ್ಲಿ+ನೋವು=ಮೈನೋವು | |

**2) ಕರ್ಮಧಾರಯ ಸಮಾಸ:**

| | | |
|---|---|---|
| ಹಿರಿದಾದ + ತೊರೆ = ಹೆದ್ದೊರೆ | ಪಿರಿದಾದ + ಮರ = ಪೆರ್ಮರ | ಪಿರಿಯ + ಮಗ + ಪೆರ್ಮಗ |
| ಇನಿದು + ಮಾವು = ಇಮ್ಮಾವು | ಮೆಲ್ಲಿತು + ಮಾತು = ಮೆಲ್ಮಾತು | ಹೊಸತು + ಕನ್ನಡ = ಹೊಸಗನ್ನಡ |

**3) ದ್ವಿಗು ಸಮಾಸ**

| | | |
|---|---|---|
| ಒಂದು + ಗಾಲಿ = ಒಗ್ಗಾಲಿ | ಎರಡು + ಮಡಿ = ಇಮ್ಮಡಿ | ಮೂರು + ಗಾವುದ = ಮೂಗಾವುದ |
| ಮೂರು + ಕಣ್ಣು =ಮುಕ್ಕಣ್ಣು | ನಾಕು + ಆಳು = ನಾಕಾಳು | ಪಂಚ + ಇಂದ್ರಿಯ = ಪಂಚೇಂದ್ರಿಯ |
| ಷಟ್ + ಪದಿ = ಷಟ್ಪದಿ | ಸಪ್ತ + ಸ್ವರ = ಸಪ್ತಸ್ವರ | ನವ + ರಾತ್ರಿ = ನವರಾತ್ರಿ |
| ನಾಲ್ಕು + ಪಡಿ = ನಾಲ್ವಡಿ | | |

**4) ಅಂಶಿ ಸಮಾಸ:**

ಕೈಯ + ಅಡಿ = ಅಂಗೈ　　ಆರಿನ + ಮುಂದು = ಮುಂಗಾರು　　ತಲೆಯ + ಹಿಂದು = ಹಿಂದಲೆ

ಮನೆಯ + ನಡುವೆ = ನಡುಮನೆ　　ಅಡವಿಯ + ನಡುವೆ =ನಟ್ಟಡವಿ　　ಕೈಯ + ಮುಂದು = ಮುಂಗೈ

ರಾತ್ರಿಯ + ನಡುವೆ = ನಡುರಾತ್ರಿ　　ಹುಬ್ಬಿನ + ಕುಡಿ = ಕುಡಿಹುಬ್ಬು　　ಮೂಗಿನ + ತುದಿ = ತುದಿಮೂಗು

**5) ದ್ವಂದ್ವ ಸಮಾಸ:**

ರಾಮನೂ + ಲಕ್ಷ್ಮಣನೂ+ ಸೀತೆಯೂ= ರಾಮಲಕ್ಷ್ಮಣಸೀತೆಯರು　　ಗಿರಿಯೂ+ವನವೂ=ದುರ್ಗವೂ=ಗಿರಿವನದುರ್ಗಗಳು

ಹನುಮನೂ+ಭೀಮನೂ+ರಾಮನೂ = ಹನುಮಭೀಮರಾಮರು　　ಕೆರೆಯೂ+ಕಟ್ಟೆಯೂ = ಕೆರೆಕಟ್ಟೆಗಳು

ಸೂರ್ಯನೂ+ಚಂದ್ರನೂ=ಸೂರ್ಯಚಂದ್ರರು　　ಸೀತೆಯೂ + ರಾಮನೂ = ಸೀತಾರಾಮರು

ಅಣ್ಣನೂ + ತಮ್ಮನೂ = ಅಣ್ಣತಮ್ಮಂದಿರು　　ತಿಂಡಿಯೂ + ತೀರ್ಥವೂ = ತಿಂಡಿತೀರ್ಥಗಳು

**6) ಕ್ರಿಯಾ ಸಮಾಸ :**

ಮೋಸವನ್ನು+ ಮಾಡು = ಮೋಡಮಾಡು,　　ಹೊಣೆಯನ್ನು + ತೋರು = ಹೊಣೆದೋರು　　ಬಿಲ್ಲಂ + ಕೊಂಡು = ಬಿಲ್ಗೊಂಡು

ಸೊಲ್ಲಂ + ಕೇಳಿ = ಸೊಲ್ಗೇಳಿ　　ಕೈಯಂ + ಆನು = ಕೈಯಾನು　　ಸಾಕ್ಷಿಯನ್ನು + ಮಾಡಿ = ಸಾಕ್ಷಿಮಾಡಿ

ಎವೆಯನ್ನು + ತೆರೆ = ಎವೆತೆರೆ　　ಮೈಯನ್ನು + ತಡವಿ = ಮೈದಡವಿ

**7) ಗಮಕ ಸಮಾಸ:**

ಅದು + ಪುಸ್ತಕ = ಆ ಪುಸ್ತಕ　　ಇದು + ಶಿಕ್ಷಣ = ಈ ಶಿಕ್ಷಣ　　ಮಡಿಯಾದುದು + ವಸ್ತ್ರ = ಮಡಿವಸ್ತ್ರ

ಬೆಂದುದು + ಅಡಿಗೆ = ಬೆಂದಡಿಗೆ　　ತಿಂದುದು + ಊಟ = ತಿಂದೂಟ　　ಇವರು + ಮಕ್ಕಳು = ಈ ಮಕ್ಕಳು

**8) ಬಹುವ್ರೀಹಿ ಸಮಾಸ:**

ಗಾಂಡೀವಿ = ಗಾಂಡೀವ ಎಂಬ ಬಿಲ್ಲನ್ನು + ಹೊಂದಿರುವವನು [ಅರ್ಜುನ]

ಘಟಸಂಭೂತ = ಘಟ ಎಂದರೆ ಕುಂಭದಲ್ಲಿ + ಜನಿಸಿದವನು [ದ್ರೋಣ]

ಕುರುಕುಲನಂದನ = ಕುರುಕುಲಕ್ಕೆ + ನಂದಾದೀಪದಂತಿರುವವನು [ ದುರ್ಯೋಧನ ]

ಚಕ್ರಪಾಣಿ = ಪಾಣಿಯಲ್ಲಿ + ಚಕ್ರವನ್ನು ಹಿಡಿದಿರುವವನು [ ವಿಷ್ಣು ]

ಅಬ್ಜೋದರ = ನೀರಿನಲ್ಲಿ ಜನಿಸಿದ ತಾವರೆಯನ್ನು + ಉದರದಲ್ಲಿ ಉಳ್ಳವನು [ ವಿಷ್ಣು ]

ಶಿತಿಕಂಠ = ನೀಲವಾದ + ಕೊರಳುಳ್ಳವನು [ ಶಿವ ]

ಮುಕ್ಕಣ್ಣ = ಮೂರು = ಕಣ್ಣುಳ್ಳವನು [ ಶಿವ ]

ಭೂಮಿಜಾತೆ = ಭೂಮಿಯಲ್ಲಿ = ಜನಿಸಿದವಳು [ ಸೀತೆ ]

## ಗದ್ಯಪಾಠ : 6. ಎದೆಗೆ ಬಿದ್ದ ಅಕ್ಷರ ( ವೈಚಾರಿಕ ಲೇಖನ)

– ದೇವನೂರು ಮಹಾದೇವ

**ಕವಿಕಾವ್ಯ ಪರಿಚಯ :** ಬಂಡಾಯ ಮತ್ತು ದಲಿತ ಸಾಹಿತ್ಯದ ಪ್ರಮುಖರಲ್ಲಿ ಒಬ್ಬರೆನಿಸಿದವರು ದೇವನೂರು ಮಹಾದೇವರವರು. ಇವರು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ದೇವನೂರಿನವರು. ಇವರ ಕಾಲ ಕ್ರಿ.ಶ. ೧೯೪೯ (1949). ಇವರು ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೋ, ನಂಬಿಕೆಯ ನೆಂಟ, ನೋಡು ಮತ್ತು ಕೂಡು, ಎದೆಗೆ ಬಿದ್ದ ಅಕ್ಷರ, ಕುಸುಮಬಾಲೆ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರ ಕುಸುಮಬಾಲೆ ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

### ಭಾಗ – ಎ

**ಒಂದು ಅಂಕದ ಪ್ರಶ್ನೆಗಳು :**

1. ಮನೆಮಂಚಮ್ಮ ಯಾರು ?
2. ಮನೆ ಮಂಚಮ್ಮನ ಕಥೆಯನ್ನು ಹೇಳಿದ ಕವಿಯಾರು ?
3. 'ಮಲೆಗಳಲ್ಲಿ ಮದುಮಗಳು'ಯಾರು ಬರೆದ ಕಾದಂಬರಿ ?
4. ಅಶೋಕ ಪೈರವರ ವೃತ್ತಿ ಯಾವುದು ?
5. ದೇವನೂರು ಮಹಾದೇವರವರು 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.
6. ದೇವನೂರು ಮಾಹಾದೇವರವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿದೆ ?
7. ವ್ಯಾಸರಿಗೆ ವೇದವ್ಯಾಸರೆಂಬ ಹೆಸರು ಬರಲು ಕಾರಣವೇನು?
8. ಬುದ್ಧನ ಮೊದಲ ಹೆಸರೇನು ?
9. ಟಾಲ್‌ಸ್ಟಾಯ್ ಯಾರು ?
10. ಟಾಲ್‌ಸ್ಟಾಯ್‌ರವರ ಮೇರು ಕೃತಿ ಯಾವುದು?
11. ಐನ್‌ಸ್ಟೈನ್ ಪ್ರತಿಪಾದಿಸಿದ ಸಿದ್ಧಾಂತ ಯಾವುದು ?
12. ದೇವನೂರು ಮಹಾದೇವರವರು ಪರಮಹಂಸರ ಬಗೆಗೆ ಏನು ಹೇಳಿದ್ದಾರೆ ?
13. ಬುದ್ಧನ ಯಾವ ಅಂಶ ಲೇಖಕರ ಮನದಲ್ಲಿ ಕುಳಿತಿತು ?
14. ಜಗತ್ತು ಯಾವುದರಿಂದ ನರಳುತ್ತಿದೆ ?
15. ಮನೆಮಂಚಮ್ಮ ಎಲ್ಲಿ ಪೂಜಿತಳಾಗುತ್ತಿದ್ದಾಳೆ ?

**ಎರಡು ಅಂಕದ ಪ್ರಶ್ನೆಗಳು**

1. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?
2. 'ವಚನಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯವೇನು ?
3. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ ಎಂಥದ್ದು ?
4. ಇಂದಲ್ಲ – ನಾಳೆ ಫಲಕೊಡುವ ಅಂಶಗಳಾವುವು ?
5. ಸತ್ಯ ಮತ್ತು ಸಮಾನತೆ ಕುರಿತು ಹೇಳಿದ ಮಹಾನೀಯರು ಯಾರು ?

**ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ.**

1. " ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ "
2. " ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ. "
3. " ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ. "
4. " ನಾವು ಮನುಷ್ಯರು. "
5. " ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ. "

## ಭಾಗ – ಬಿ

1. ' ಜಾಣತನ ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
   ಎ) ತದ್ಧಿತಾಂತನಾಮ ಬಿ) ತದ್ಧಿತಾಂತಅವ್ಯಯ ಸಿ) ಕೃದಾಂತಭಾವನಾಮ ಡಿ) ತದ್ಧಿತಾಂತಭಾವನಾಮ
2. ' ಸಮಷ್ಟಿ ' ಪದದ ವಿರುದ್ಧಾರ್ಥಕ ರೂಪ :
   ಎ) ಸಮಾನದೃಷ್ಟಿ ಬಿ) ವ್ಯಷ್ಟಿ ಸಿ) ಸಮದೃಷ್ಟಿ ಡಿ) ಸಮಪುಷ್ಟಿ
3. ಅವನು ಭೀಮನಿಗಿಂತ ಬಲಶಾಲಿಯಾದ ಹುಡುಗ ಈ ವಾಕ್ಯದಲ್ಲಿ ತದ್ಧಿತಾಂತಾವ್ಯಯ ಪದವಿದು :
   ಎ) ಭೀಮನಿಗಿಂತ ಬಿ) ಅವನು ಸಿ) ಹುಡುಗ ಡಿ) ಬಲಶಾಲಿ
4. ' ವಿಜ್ಞಾನ ' ಪದದ ತದ್ಭವ ರೂಪ :
   ಎ) ವಿನಂತಿ ಬಿ) ಜ್ಞಾನ ಸಿ) ಬಿನ್ನಾಣ ಡಿ) ವೈಜ್ಞಾನಿಕ
5. ' ಸಚ್ಚಿಂತನೆ ' ಪದವು ಈ ಸಂದಿಯ ಪದವಾಗಿದೆ :
   ಎ) ಆಗಮಸಂಧಿ ಬಿ) ಶ್ಚುತ್ವಸಂಧಿ ಸಿ) ಅನುನಾಸಿಕಸಂಧಿ ಡಿ) ಜಶ್ತ್ವಸಂಧಿ.
6. ' ಬಳೆಗಾರ ' ಪದದ ಸ್ತ್ರೀಲಿಂಗ ತದ್ಧಿತಾಂತ ಪದ :
   ಎ) ಬಳೆವಂತೆ ಬಿ) ಬಳೆಗಾರುತಿ ಸಿ) ಬಳೆಗಾರ್ತಿ ಡಿ) ಬಳೆಮಾರುವವಳು.
7. ' ಅವಳಿಗೋಸ್ಕರ ನನ್ನ ಬದುಕನ್ನೇ ತ್ಯಾಗಮಾಡಿದೆ' ಈ ವಾಕ್ಯದಲ್ಲಿರುವ ತದ್ಧಿತಾಂತಾವ್ಯಯ ಪದ :
   ಎ) ನನ್ನ ಬಿ) ತ್ಯಾಗಮಾಡು ಸಿ) ಬದುಕನ್ನೇ ಡಿ) ಅವಳಿಗೋಸ್ಕರ
8. 'ಬಿಳಿಕೂದಲು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :
   ಎ) ತತ್ಪುರುಸಮಾಸ ಬಿ) ಕರ್ಮಧಾರಯಸಮಾಸ ಸಿ) ಅಂಶಿಸಮಾಸ ಡಿ) ದ್ವಂದ್ವಸಮಾಸ
9. ' ಮನೆ ' ಪದವು ಈ ವ್ಯಾಕರಣಾಂಶವಾಗಿದೆ :
   ಎ) ಅಂಕಿತನಾಮ ಬಿ) ಅನ್ವರ್ಥನಾಮ ಸಿ) ಕೃದಂತನಾಮ ಡಿ) ರೂಢನಾಮ
10. ' ಗುಡಿಕಟ್ಟು ' ಪದವು ಈ ಸಮಾಸ ಪದವಾಗಿದೆ :
    ಎ) ತತ್ಪುರುಸಮಾಸ ಬಿ) ಕ್ರಿಯಾಸಮಾಸ ಸಿ) ಅಂಶಿಸಮಾಸ ಡಿ) ದ್ವಂದ್ವಸಮಾಸ
11. ' ಗಳಿಗೆಗಳಿಗೆಗೆ ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :
    ಎ) ದ್ವಿರುಕ್ತಿ ಬಿ) ಅನುಕರಣಾವ್ಯಯ ಸಿ) ಜೋಡಿಪದ ಡಿ) ನಾಮಪದ
12. ' ಮಹೋನ್ನತ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ :
    ಎ) ಆಗಮಸಂಧಿ ಬಿ) ಸವರ್ಣದೀರ್ಘಸಂಧಿ ಸಿ) ಗುಣಸಂಧಿ ಡಿ) ಜಶ್ತ್ವಸಂಧಿ

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆ ಪದಕ್ಕೆ ಸಂಬಂಧ ಪದ ಬರೆಯಿರಿ :**

1. ಬಿಡುಬಿಡು : ದ್ವಿರುಕ್ತಿ : : ಕೊಲೆಸುಲಿಗೆ : ___________
2. ನಾಟಕಕಾರ : ತದ್ಧಿತಾಂತನಾಮ : : ಚೆಲುವಿಕೆ : ___________
3. ಗುಡಿ : ರೂಢನಾಮ : : ಮೈಸೂರು : ___________
4. ಹಣ : ಹಣವಂತ : : ಬಳೆ : ___________
5. ಧರ್ಮ : ಅಧರ್ಮ : : ಪುಣ್ಯ : ___________
6. ಅದಕ್ಕಿಂತ : ತದ್ಧಿತಾಂತಾವ್ಯಯ : : ಕಪ್ಪು : ___________
7. ಜೀವಸಂಕುಲ : ತತ್ಪುರುಷಸಮಾಸ : : ಆ ದೇವತೆ : ___________
8. ಕವಿ : ಕಬ್ಬಿಗ : : ಶಿಲ್ಪಿ : ___________
9. ಸಿರಿವಂತ : ಸಿರಿವಂತೆ : : ಕನ್ನಡಿಗ : ___________
10. ಅಲ್ಲೊಬ್ಬ : ಲೋಪಸಂಧಿ : : ಗುಡಿಯನ್ನು : ___________

**ಉತ್ತರಗಳು :** 1. ಸಿ. ತದ್ಧಿತಾಂತಭಾವನಾಮ 2. ಬಿ. ವ್ಯಷ್ಟಿ 3. ಎ. ಭೀಮನಿಗಿಂತ 4. ಸಿ. ಬಿನ್ನಣ 5. ಡಿ. ಶ್ಚುತ್ವಸಂಧಿ 6. ಸಿ. ಬಳೆಗಾರ್ತಿ 7. ಡಿ. ಅವಳಿಗೋಸ್ಕರ 8. ಬಿ. ಕರ್ಮಧಾರೆಯಸಮಾಸ 9. ಡಿ. ರೂಢನಾಮ 10. ಬಿ. ಕ್ರಿಯಾಸಮಾಸ 11. ಎ. ದ್ವಿರುಕ್ತಿ 12. ಗುಣಸಂಧಿ

**ಉತ್ತರಗಳು :** 1. ಜೋಡುನುಡಿ 2. ತದ್ಧಿತಾಂತಭಾವನಾಮ 3. ಅಂಕಿತನಾಮ 4. ಬಳೆಗಾರ 5. ಪಾಪ 6. ತದ್ಧಿತಾಂತಭಾವನಾಮ 7. ಗಮಕಸಮಾಸ 8. ಚೆಪ್ಪಿಗ 9. ಕನ್ನಡತಿ 10. ಆಗಮಸಂಧಿ

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಮನೆಮಂಚಮ್ಮ ಗ್ರಾಮದೇವತೆ.
2. ಮನೆಮಂಚಮ್ಮನ ಕತೆ ಹೇಳಿದವರು ಕವಿ ಸಿದ್ಧಲಿಂಗಯ್ಯ.
3. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ರಾಷ್ಟ್ರಕವಿ ಕುವೆಂಪುರವರು ಬರೆದಿದ್ದಾರೆ.
4. ಅಶೋಕ ಪೈ ಅವರು ವೃತ್ತಿಯಲ್ಲಿ ಮನೋವೈದ್ಯರು.
5. ಭಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಇಟ್ಟರೆ ಅದೇ ನನ್ನ ದೇವರಾಗುತ್ತದೆ.
6. ದೇವನೂರು ಮಹಾದೇವರವರ 'ಕುಸುಮಬಾಲೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿದೆ.
7. ವ್ಯಾಸರು ವೇದಗಳನ್ನು ವಿಂಗಡಿಸಿದ್ದರಿಂದ ಇವರಿಗೆ ವೇದವ್ಯಾಸ ಎಂಬ ಹೆಸರು ಬಂದಿದೆ.
8. ಬುದ್ಧನ ಪೂರ್ವದ ಹೆಸರು ಸಿದ್ಧಾರ್ಥ ಎಂದು.
9. ಟಾಲ್ಸ್ ಟಾಯ್ ರವರು ರಷ್ಯಾದೇಶದ ಮಹಾನ್ ಮೇಧಾವಿ.
10. ' ಯುದ್ಧ ಮತ್ತು ಶಾಂತಿ ' ಟಾಲ್ಸ್ ಟಾಯ್‌ರವರ ಮೇರುಕೃತಿ.
11. ಐನ್‌ಸ್ಟೈನ್ ರವರು 'ಸಾಪೇಕ್ಷತಾ ಸಿದ್ಧಾಂತ'ವನ್ನು ಪ್ರತಿಪಾದಿಸಿದ್ದಾರೆ.
12. ದೇವನೂರರು 'ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟು ಒಂದೇದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆಯೇ ಪರಮಹಂಸರು' ಎಂದಿದ್ದಾರೆ.
13. ಬುದ್ಧನಲ್ಲಿನ 'ಕಾರುಣ್ಯ' ಲೇಖಕರ ಮನದಲ್ಲಿ ಕುಳಿತಿದೆ.
14. ಜಗತ್ತು ಕೊಲೆ, ಸುಲಿಗೆ, ದ್ವೇಷ, ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿದೆ.
15. ಮನೆಮಂಚಮ್ಮ ಭಾವಣಿ ಇಲ್ಲದ ಗುಡಿಮನೆಯಲ್ಲಿ ಪೂಜಿತವಾಗುತ್ತಿದ್ದಾಳೆ.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಅಶೋಕ ಪೈರವರು ಹೇಳಿದ ಸಂಶೋಧನಾ ಸತ್ಯವೆಂದರೆ ' ಯಾವಜೀವಿಯು ತನ್ನಷ್ಟಕ್ಕೆ ತಾನಿಲ್ಲ ಯಾವುದೇ ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತಾ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೇನೋ, ಈ ಕಂಪನ ಇಡೀ ಜೀವ ಸಂಕುಲವನ್ನೇ ಒಂದು ಎಂದು ಹೇಳುತ್ತದೆ' ಎಂದಿದ್ದಾರೆ.
2. ಹನ್ನೆರಡನೆಯ ಶತಮಾನದ ವಚನಾಂದೋಲನವು ಸಮಾಜದ ಸಮಾನತೆಯನ್ನು ಸಾರುತ್ತದೆ. ಈ ವಚನಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿದರೆ ಜಗತ್ತಿಗೆ ಇದು ಬೆಳಕಾಗಬಹುದೇನೋ. ಇದು ಜಾತಿಯಾದರೆ ಕೆಟ್ಟ ಜಾತಿ, ಧರ್ಮವಾದರೆ ಮಹೋನ್ನತ ಧರ್ಮ – ಎಂದು ದೇವನೂರರು ಹೇಳಿದ್ದಾರೆ.
3. ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸರು. ಯಾವುದನ್ನು ಕೊಲ್ಲದೆ, ಒಳಿತುಗಳನ್ನೆ ಕೂಡಿಸುತ್ತ ಕೂಡಿಸುತ್ತಾ ಹೋದವರು ಪರಮ ಹಂಸರು – ಎಂದು ಲೇಖಕರು ಹೇಳಿದ್ದಾರೆ.
4. ಭೂಮಿಗೆ ಬಿದ್ದ ಬೀಜ ಹಾಗೂ ಎದಗೆ ಬಿದ್ದ ಅಕ್ಷರ – ಇಂದಲ್ಲ ನಾಳೆ ಫಲ ನೀಡುವ ಅಂಶಗಳಾಗಿವೆ. ಎಂದು ಲೇಖಕರು ಹೇಳಿದ್ದಾರೆ.
5. ಸತ್ಯ ಮತ್ತು ಸಮಾನತೆಯ ಕುರಿತು ಹೇಳಿದ ಮಹಾನೀಯರುಗಳೆಂದರೆ ಬುದ್ಧ, ವ್ಯಾಸ, ರಾಮಕೃಷ್ಣಪರಮಹಂಸರು, ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್, ಐನ್‌ಸ್ಟೈನ್, ಗಾಂಧೀಜಿಯವರು, ಅಂಬೇಡ್ಕರ್‌ರರು, ಪಂಪ, ಕುಮಾರವ್ಯಾಸ, ಕುವೆಂಪು, ದ.ರಾ.ಬೇಂದ್ರೆ ಮೊದಲಾದವರು.

**ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ.**

**( ಸೂಚನೆ : ಇಲ್ಲಿ ಮಾದರಿಯಾಗಿ ಒಂದು ಸಂದರ್ಭಕ್ಕೆ ಉತ್ತರಿಸಲಾಗಿದೆ. ಉಳಿದವನ್ನು ಇದೇ ಮಾದರಿಯಲ್ಲಿ ಉತ್ತರಿಸುವುದು.)**

1. ಈ ವಾಕ್ಯವನ್ನು ದೇವನೂರು ಮಹಾದೇವರವರ ವೈಚಾರಿಕ ಲೇಖನಗಳ ಸಂಗ್ರಹ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ಕೆಮಾಡಿಕೊಂಡಿರುವ ಎದೆಗೆ ಬಿದ್ದ ಅಕ್ಷರ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
   ಮಂಚಮ್ಮ ಗ್ರಾಮದೇವತೆಗೆ ಗ್ರಾಮಸ್ಥರೆಲ್ಲ ಸೇರಿ ಒಂದು ಗುಡಿಮನೆಯನ್ನು ಛಾವಣಿಯವರೆಗೆ ಕಟ್ಟಿರುವಾಗ ಒಬ್ಬನ ಮೈಮೇಲೆ ಆವಾಹಿಸಿಕೊಂಡ ಮಂಚಮ್ಮ ದೇವತೆ ಗ್ರಾಮಸ್ಥರಿಗೆ ಹೇಳುವ ಮಾತಿದು. ಲೇಖಕರು ಕವಿ ಸಿದ್ಧಲಿಂಗಯ್ಯ ನವರು ಹೇಳಿದ ಕಥೆಯನ್ನು ಸ್ಮರಿಸಿಕೊಂಡು ಈ ಕಥೆ ಹೇಳುತ್ತಾ ಮಂಚಮ್ಮ ಮನೆಮಂಚಮ್ಮಳಾದ ಕಥೆಯನ್ನು ತಿಳಿಸುತ್ತಾ ಮಂಚಮ್ಮ ಒಬ್ಬನ ಮೇಲೆ ಆವಾನಿಸಿಕೊಂಡು ಗ್ರಾಮದವರಿಗೆ ಹೇಳುವ ಸಂದರ್ಭದ ಸ್ವಾರಸ್ಯವಿದು.

## : ಎದೆಗೆ ಬಿದ್ದ ಅಕ್ಷರ ಗದ್ಯಭಾಗದಲ್ಲಿ ಬರುವ ವ್ಯಾಕರಣಾಂಶಗಳು :

➢ **ಹೊಸಪದಗಳ ಅರ್ಥ :**

1. **ಅಂದಾಜಿಸು** – ಊಹೆಮಾಡು 2. **ಆವಾಹಿಸು** – ಮೈಮೇಲೆಬರುವಂತೆ ಮಾಡಿಕೊ, 3. **ಒಡಮೂಡು** – ಹುಟ್ಟು
4. **ಕ್ಷೋಭೆ** – ತಳಮಳ 5. **ಆರ್ತತೆ** – ಬಯಕೆ.

➢ **ತತ್ಸಮ – ತದ್ಭವಗಳು :**

1. **ವಿಜ್ಞಾನ** – ಬಿನ್ನಣ 2. **ದನಿ** – ಧ್ವನಿ 3. **ಭೂಮಿ** – ಬುವಿ 4. **ಎದೆ** – ಹೃದಯ 5. **ಕವಿ** – ಕಬ್ಬಿಗ
6. **ಕತೆ** – ಕಥೆ 9. **ಧರ್ಮ** – ದಮ್ಮ 10. **ಜಾತಿ** – ಜಾದಿ 11. **ಋಷಿ** – ರಿಸಿ 12. **ಪುಣ್ಯ** – ಪುನ್ನೆ
13. **ಶಬ್ದ** – ಶಬುದ 14. **ಶಿಲ್ಪಿ** – ಚಿಪ್ಪಿಗ 15. **ಜ್ಞಾನ** – ಜಾನ 16. **ದೃಷ್ಟಿ** – ದಿಟ್ಟಿ 17. **ಸಂಸ್ಕೃತ** – ಸಕ್ಕದ.

➢ **ವಿರುದ್ಧಪದಗಳು :**

1. **ಒಳಿತು X** ಕೆಡುಕು. 2. **ಸಮಷ್ಟಿ X** ವ್ಯಷ್ಟಿ 3. ಪುಣ್ಯ **X** ಪಾಪ 4. ಬೆಳಕು **X** ಕತ್ತಲು 5. ಧರ್ಮ **X** ಅಧರ್ಮ

➢ **ಸಂಧಿಪದಗಳು :**

1. **ಸದ್ಚಿಂತನೆ** = ಸತ್ + ಚಿಂತನೆ = ಜಶ್ತ್ವಸಂಧಿ.
2. **ಒಂದ್ಸಲ** = ಒಂದು + ಸಲ = ಲೋಪಸಂಧಿ.
3. **ನಿನಗೊಂದು** = ನಿನಗೆ + ಒಂದು = ಲೋಪಸಂಧಿ.
4. **ಗುಡಿಯಲ್ಲಿ** = ಗುಡಿ + ಅಲ್ಲಿ = ಆಗಮಸಂಧಿ.
5. **ಮಹೋನ್ನತ** = ಮಹ + ಉನ್ನತ = ಗುಣಸಂಧಿ.

➢ **ಸಮಾಸಪದಗಳು :**

1. **ಗು ಡಿಕಟ್ಟು** = ಗುಡಿಯನ್ನು + ಕಟ್ಟು = ಕ್ರಿಯಾಸಮಾಸ.
2. **ಆ ಗುಡಿ** = ಅದು + ಗುಡಿ = ಗಮಕಸಮಾಸ.
3. **ಆ ದೇವತೆ** = ಅವಳು + ದೇವತೆ = ಗಮಕಸಮಾಸ.
4. **ಇಪ್ಪತ್ತೈದು** = ಇಪ್ಪತ್ತರ + ಐದು = ಗಮಕಸಮಾಸ.
5. **ಜೀವಸಂಕುಲ** = ಜೀವಿಗಳ + ಸಂಕುಲ = ತತ್ಪುರುಷಸಮಾಸ.

➢ **ತದ್ಧಿತಾಂತನಾಮ :** ನಾಟಕಕಾರ.

➢ **ಜೋಡಿಪದ** : ದುಃಖದುಮ್ಮಾನ

➢ **ದ್ವಿರುಕ್ತಿ ಪದಗಳು :** ಕೂಡಿಸಿಕೂಡಿಸಿ, ಗಳಿಗೆಗಳಿಗೆ.

# ಗದ್ಯಪಾಠ : 7. ವೃಕ್ಷ ಸಾಕ್ಷಿ

- ದುರ್ಗಸಿಂಹ

## ಭಾಗ - ಎ

<u>**ಕವಿ ಕೃತಿ ಪರಿಚಯ :**</u> ದುರ್ಗಸಿಂಹನು **ಕ್ರಿ.ಶ.1031** ರಲ್ಲಿ **ಕಿಸುಕಾಡು ನಾಡಿನ ಸಯ್ಯಡಿ** ಎಂಬಲ್ಲಿ ಜನಿಸಿದನು. ಈತನು ಒಂದನೆಯ ಜಗದೇಕಮಲ್ಲನಲ್ಲಿ ದಂಡನಾಯಕ ಹಾಗೂ ಸಂಧಿವಿಗ್ರಹಿಯಾಗಿದ್ದನು. ಈತನು **'ಕರ್ನಾಟಕ ಪಂಚತಂತ್ರಂ'** ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾನೆ.

**ಒಂದು ಅಂಕದ ಪ್ರಶ್ನೆಗಳು**

1. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
2. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?
3. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
4. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?
5. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಯಾರು?
6. ವ್ಯಾಪಾರಿಗಳು ಹೊನ್ನನ್ನು ಎಲ್ಲಿ ಅವಿತಿಟ್ಟರು?
7. ಹೊನ್ನನ್ನು ಕದ್ದ ಆರೋಪ ಯಾರ ಮೇಲೆ ಬಂದಿತು?
8. ದುಷ್ಟಬುದ್ಧಿಯು ಯಾರನ್ನು ಸಾಕ್ಷಿಯಾಗಿ ಸೂಚಿಸಿದನು?
9. ಮನುಷ್ಯರ ಸುಕೃತ ದುಷ್ಕೃತ್ಯಗಳು ಯಾರಿಗೆ ತಿಳಿದಿರುತ್ತವೆ?
10. ದುಷ್ಟಬುದ್ಧಿಯ ತಂದೆಯ ಹೆಸರೇನು?
11. ಧರ್ಮಾಧಿಕರಣರು ಸಾಕ್ಷಿ ಹೇಳುವ ಮೊದಲು ವಟವೃಕ್ಷಕ್ಕೆ ಏನು ಮಾಡಿದರು?
12. ವಟವೃಕ್ಷದ ಒಳಗಿನಿಂದ ಪ್ರೇಮಮತಿ ಏನೆಂದು ಸಾಕ್ಷಿ ನುಡಿದನು?
13. ಪ್ರೇಮಮತಿಯನ್ನು ಪೊಟರೆಯೊಳಗೆ ಕಳಿಸಿದ್ದನ್ನು ದುರ್ಗಸಿಂಹ ಹೇಗೆ ವರ್ಣಿಸಿದ್ದಾನೆ?
14. ಪ್ರಕೃತಿ ವಿಕೃತಿಯಾದರೆ ಮನುಷ್ಯನಿಗೆ ಏನಾಗುತ್ತದೆ?
15. ಪ್ರೇಮಮತಿಗೆ ಒದಗಿದ ದುರ್ಗತಿ ಏನು?

**ಎರಡು ಅಂಕದ ಪ್ರಶ್ನೆಗಳು**

1. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?
2. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?
3. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?
4. ಧರ್ಮಬುದ್ಧಿಯು ತನ್ನ ಮೇಲೆ ಬಂದ ಆಪಾದನೆಯಿಂದ ಹೇಗೆ ಪಾರಾದನು?

**ಸಂದರ್ಭ ಸಹಿತ ವಿವರಿಸಿ:**

1. "ಪೊನ್ನನೆಲ್ಲಮಂ ನೀನೆ ಕೊಂಡೆ"
2. "ಈತನ ಮಾತು ಅಶ್ರುತಪೂರ್ವಂ"
3. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"
4. "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗಂ"
5. "ಹುಸಿಯದ ಬೇಹಾರಿಯೇ ಇಲ್ಲ"

ಭಾಗ - ಬಿ

ಕೆಳಗೆ ಕೊಟ್ಟಿರುವ ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆ:

1. ' ಪರದು' ಪದದ ಅರ್ಥ :

ಎ) ಪರರದು ಬಿ) ವ್ಯಾಪಾರ ಸಿ) ಪಾರವಿಲ್ಲ ಡಿ) ಅವರದು

2. 'ಬೀಯ' ಪದದ ಅರ್ಥ :

ಎ) ವ್ಯಯ ಬಿ) ಬೀಜ ಸಿ) ಬೀಗ ಡಿ) ಆದಾಯ

3. 'ಕೆಲದೊಳ್' ಪದದಲ್ಲಿರುವ ವಿಭಕ್ತಿ ಪ್ರತ್ಯಯ :

ಎ) ಪ್ರಥಮವಿಭಕ್ತಿ ಬಿ) ಚತುರ್ಥಿವಿಭಕ್ತಿ ಸಿ) ಸಪ್ತಮಿವಿಭಕ್ತಿ ಡಿ) ಷಷ್ಠಿವಿಭಕ್ತಿ

4.. ' ವ್ಯಾಪಾರಿ ' ಪದದ ತದ್ಭವ ರೂಪ :

ಎ) ಬೇಹಾರಿ ಬಿ) ವ್ಯವಹಾರಿ ಸಿ) ಗ್ರಾಹಕ ಡಿ) ಮಾರಾಟಗಾರ

5. ' ಪೊಳ್ದಿಡೆ ' ಪದದಲ್ಲಿರುವ ಸಂಧಿ :

ಎ) ಲೋಪಸಂಧಿ ಬಿ) ಆಗಮಸಂಧಿ ಸಿ) ಆದೇಶ ಸಂಧಿ ಡಿ) ಪ್ರಕೃತಿಭಾವ

6. 'ಧರ್ಮಾಧಿಕರಣ' ಪದದಲ್ಲಿರುವ ಸಂಧಿ :

ಎ) ಗುಣ ಸಂಧಿ ಬಿ) ಯಣ್ ಸಂಧಿ ಸಿ) ವೃದ್ಧಿ ಸಂಧಿ ಡಿ) ಸವರ್ಣದೀರ್ಘ ಸಂಧಿ

7. 'ಭಂಗೋದರ' ಪದದಲ್ಲಿರುವ ಸಂಧಿ :

ಎ) ಗುಣ ಸಂಧಿ ಬಿ) ಯಣ್ ಸಂಧಿ ಸಿ) ವೃದ್ಧಿ ಸಂಧಿ ಡಿ) ಸವರ್ಣದೀರ್ಘ ಸಂಧಿ

8. 'ಮನುಷ್ಯನಾಯುಶ್ಯಂ' ಪದದಲ್ಲಿರುವ ವಿಭಕ್ತಿ ಪ್ರತ್ಯಯ :

ಎ) ಪ್ರಥಮವಿಭಕ್ತಿ ಬಿ) ಚತುರ್ಥಿವಿಭಕ್ತಿ ಸಿ) ಪಂಚಮಿವಿಭಕ್ತಿ ಡಿ) ಷಷ್ಠಿವಿಭಕ್ತಿ

9. 'ಆದಿತ್ಯೋದಯ' ಪದದಲ್ಲಿರುವ ಸಂಧಿ :

ಎ) ಗುಣಸಂಧಿ ಬಿ) ಯಣ್ ಸಂಧಿ ಸಿ) ವೃದ್ಧಿಸಂಧಿ ಡಿ) ಆಗಮಸಂಧಿ

10. ಮಹಾಸ್ರಗ್ಧರಾ ವೃತ್ತದ ಒಂದು ಸಾಲಿನಲ್ಲಿರುವ ಅಕ್ಷರಗಳ ಸಂಖ್ಯೆ :

ಎ) 19 ಬಿ) 20 ಸಿ) 21 ಡಿ) 22

11. 'ಪ್ರತ್ಯರ್ಥಿ' ಪದದಲ್ಲಿರುವ ಸಂಧಿ :

ಎ) ಗುಣ ಸಂಧಿ ಬಿ) ಯಣ್ ಸಂಧಿ ಸಿ) ವೃದ್ಧಿ ಸಂಧಿ ಡಿ)ಲೋಪಸಂಧಿ

12. 'ಚೋದ್ಯಂಬಟ್ಟ' ಪದದಲ್ಲಿರುವ ಸಂಧಿ :

ಎ) ಆದೇಶ ಸಂಧಿ ಬಿ) ಆಗಮಸಂಧಿ ಸಿ) ಲೋಪಸಂಧಿ ಡಿ) ಗುಣಸಂಧಿ

13. ಕಂದ ಪದ್ಯದ ನಾಲ್ಕು ಸಾಲುಗಳಲ್ಲಿರುವ ಮಾತ್ರೆಗಳ ಸಂಖ್ಯೆ ________

ಎ) 32 ಬಿ) 64 ಸಿ) 102 ಡಿ) 144

14. 'ಚಾಗದ' ಪದವು ಈ ಗಣಕ್ಕೆ ಉದಾಹರಣೆಯಾಗಿದೆ.__________

ಎ) ಯ-ಗಣ ಬಿ) ಭ-ಗಣ ಸಿ) ಮ-ಗಣ ಡಿ) ಸ-ಗಣ

15. ಉತ್ಪಲಮಾಲಾವೃತ್ತದ ಗಣವಿನ್ಯಾಸ :

ಎ) ಭರನಭಭರ ಬಿ) ಮರಭನಯಯಯ ಸಿ) ಸತತನಸರರ ಡಿ) ನಜಭಜಜಜರ

16. 'ಅಬ್ಜೋದರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

ಎ) ಗಮಕ ಸಮಾಸ ಬಿ) ಬಹುವ್ರೀಹಿ ಸಮಾಸ ಸಿ) ತತ್ಪುರುಷ ಸಮಾಸ ಡಿ) ಅಂಶಿ ಸಮಾಸ

17. 'ಕಿಚ್ಚನಿಕ್ಕು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ__________

ಎ) ತತ್ಪುರುಷ ಸಮಾಸ ಬಿ) ಕ್ರಿಯಾಸಮಾಸ ಸಿ) ಗಮಕ ಸಮಾಸ ಡಿ) ದ್ವಂದ್ವ ಸಮಾಸ

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ:

1. ಕಬ್ಬ : ಕಾವ್ಯ : : ಬೇಹಾರಿ : ________
2. ಅನೃತ : ಸುಳ್ಳು : : ಕೃತ್ರಿಮ : ________
3. ಬಂದಲ್ಲದೆ : ಲೋಪ ಸಂಧಿ : : ಧೃತಿಗೆಟ್ಟು : ________
4. ದೈವ ಭಕ್ತಿ : ತತ್ಪುರುಷ : : ಶಿತಿಕಂಠ : ________
5. ಸಂದೆಯ : ಸಂದೇಹ : : ಕೋಕಿಲಾ : ________
6. ನೇಸರ : ಸೂರ್ಯ : : ಮೇದಿನಿ : ________
7. ಮೊರೆ : ಪ್ರಾರ್ಥನೆ : : ಮೊಜ಼ಿ : ________
8. ನೆಜಿ಼ : ಪ್ರವಾಹ : : ನೆರೆ : ________
9. ಕಂದಪದ್ಯ : ಮಾತ್ರಾಗಣ : : ವೃತ್ತಗಳು : ________
10. ಏರ್ : ಹತ್ತು : : ಏಜ಼್ : ________
11. ಕಟ್ಟೇಕಾಂತ : ಲೋಪ ಸಂಧಿ : : ಬಾಳುವಷ್ಟು : ________
12. ಅತಿಕುಟಿಲ : ಕರ್ಮಧಾರಯ : : ಕೈಕೊಳ್ಳುದು : ________
13. ಪರಧನ : ತತ್ಪುರುಷ : : ಸಾಕ್ಷಿಮಾಡಿ : ________
14. ಕಟ್ಟೇಕಾಂತ : ಕರ್ಮಧಾರಯ : : ಸ್ವಾಮಿದ್ರೋಹ : ________
15. ಶಿತಿಕಂಠ : ಬಹುವ್ರೀಹಿ : : ಅಬ್ಜೋದರ : ________

**ಉತ್ತರಗಳು : 1. ಬಿ. ವ್ಯಾಪಾರ 2. ಎ. ವ್ಯಯ 3. ಸಿ. ಸಪ್ತಮಿವಿಭಕ್ತಿ 4. ಎ) ಬೇಹಾರಿ 5. ಎ) ಲೋಪಸಂಧಿ 6. ಡಿ) ಸವರ್ಣದೀರ್ಘ ಸಂಧಿ 7. ಎ) ಗುಣ ಸಂಧಿ 8. ಎ) ಪ್ರಥಮವಿಭಕ್ತಿ 9. ಎ) ಗುಣಸಂಧಿ 10. ಡಿ) 22 11. ಬಿ) ಯಣ್ ಸಂಧಿ 12. ಎ) ಆದೇಶ ಸಂಧಿ 13. ಬಿ) 64 14. ಬಿ) ಭ-ಗಣ 15. ಎ.ಭರನಭಭರ 15. ಬಿ) ಬಹುವ್ರೀಹಿ 17. ಬಿ) ಕ್ರಿಯಾ ಸಮಾಸ**

**ಉತ್ತರಗಳು : 1. ವ್ಯಾಪಾರಿ 2. ಮೋಸ 3. ಆದೇಶ ಸಂಧಿ 4. ಬಹುವ್ರೀಹಿ 5. ಕೋಗಿಲೆ 6. ಭೂಮಿ 7. ಗೋಳಾಟ 8.ಸಮೀಪ 9. ಅಕ್ಷರ ಗಣ 10. ಗಾಯ 11. ಆಗಮ ಸಂಧಿ 12. ಕ್ರಿಯಾ ಸಮಾಸ 13. ಕ್ರಿಯಾ ಸಮಾಸ 14. ತತ್ಪುರುಷ ಸಮಾಸ 15. ಬಹುವ್ರೀಹಿಸಮಾಸ**

**ಕೊಟ್ಟಿರುವ ಪದ್ಯಕ್ಕೆ ಪ್ರಸ್ತಾರ ಹಾಕಿ ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ :**

**U U U U | U U - | U U -**
ಅತಿಕುಟಿ | ಲಮನಂ | ಧನಲು |

U U - | - - | U – U | U U - | U U -
ಬ್ಧತೆಯಿಂ | ದಂ ದು | ಷ್ಟಬುದ್ಧಿ | ನುಡಿದಂ | ಪುಸಿಯಂ ‖ - ಇದು ಕಂದಪದ್ಯ

( ಲಕ್ಷಣ : ಇದು ನಾಲ್ಕುಸಾಲಿನ ಪದ್ಯವಾಗಿದ್ದು ಇಲ್ಲಿ ಪೂರ್ವಾರ್ಧದ ಎರಡು ಸಾಲು ನೀಡಿದೆ. ಇಲ್ಲಿ ಮಾತ್ರಾಗಣ ನಿಯಮಕ್ಕನುಗುಣವಾಗಿ ಗಣವಿಭನೆ ಇದೆ. ನಾಲ್ಕು ನಾಲ್ಕು ಮಾತ್ರೆಗೆ ಗಣ ವಿಭಜನೆಯಾಗಿದೆ. ಮತ್ತು ಆರನೇ ಗಣ ಸ್ಥಾನದಲ್ಲಿ ' ಜ ' ಗಣ ಬಂದಿರುವುದರಿಂದ ಇದು ಕಂದಪದ್ಯವಾಗಿದೆ.)

**ಒಂದು ಅಂಕದ ಪ್ರಶ್ನೆಗಳು ಉತ್ತರಗಳು**

1: ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನನ್ನು ಅಪಹರಿಸಿದ ಆರೋಪವನ್ನು ಹೊರಿಸಿದನು.

2: ದುಷ್ಟಬುದ್ಧಿಯು ಸಾಕ್ಷಿಯಾಗಿ ವಟವೃಕ್ಷವನ್ನು ಸೂಚಿಸಿದಾಗ ಧರ್ಮಾಧಿಕರಣರು ವಿಸ್ಮಯ ಹೊಂದಿದರು.

3: ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವಗುರು, ದ್ವಿಜಪೂಜೆಗಳನ್ನು ಮಾಡುತ್ತಾ ಕಳೆದನು.

4: ಧರ್ಮಾಧಿಕರಣರು ವಟವೃಕ್ಷದ ಸಾಕ್ಷಿಯನ್ನು ಆಲಿಸಲು ಅದರ ಸಮೀಪಕ್ಕೆ ಬಂದರು.

5: ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಮಧುರಾನಗರದಲ್ಲಿದ್ದ ವ್ಯಾಪಾರಿಗಳ ಮಕ್ಕಳಾಗಿದ್ದರು.

6: ವಟವೃಕ್ಷದ ಸಮೀಪದಲ್ಲಿ ವ್ಯಾಪಾರಿಗಳು ಹೊನ್ನನ್ನು ಅವಿತಿಟ್ಟರು.

7: ಹೊನ್ನನ್ನು ಕದ್ದ ಆರೋಪ ಧರ್ಮಬುದ್ಧಿಯ ಮೇಲೆ ಬಂದಿತು.

8: ದುಷ್ಟಬುದ್ಧಿಯು ವಟವೃಕ್ಷವನ್ನು ಸಾಕ್ಷಿಯಾಗಿ ಸೂಚಿಸಿದನು.

9: ಮನುಷ್ಯರ ಸುಕೃತ ದುಷ್ಕೃತ್ಯಗಳು ದೈವಗಳಿಗೆ ತಿಳಿದಿರುತ್ತವೆ.

10: ದುಷ್ಟಬುದ್ಧಿಯ ತಂದೆಯ ಹೆಸರು ಪ್ರೇಮಮತಿ

11: ಧರ್ಮಾಧಿಕರಣರು ಸಾಕ್ಷಿ ಹೇಳುವ ಮೊದಲು ವಟವೃಕ್ಷಕ್ಕೆ ಅಷ್ಟವಿಧದಿಂದ ಅರ್ಚಿಸಿದರು.

12: ಧರ್ಮಬುದ್ಧಿಯೇ ಧನವನ್ನು ತೆಗೆದುಕೊಂಡು ಹೋದನೆಂದು ವಟವೃಕ್ಷದ ಒಳಗಿನಿಂದ ಪ್ರೇಮಮತಿ ಸಾಕ್ಷಿ ನುಡಿದನು.

13: ಮಾರಿಯ ಮನೆಗೆ ಹರಕೆಯ ಕುರಿಯನ್ನು ನುಗ್ಗಿಸುವಂತೆ ಪ್ರೇಮಮತಿಯನ್ನು ಪೊಟರೆಯೊಳಗೆ ಕಳಿಸಿದನೆಂದು ದುರ್ಗಸಿಂಹ ವರ್ಣಿಸಿದ್ದಾನೆ.

14: ಪ್ರಕೃತಿ ವಿಕೃತಿಯಾದರೆ ಮನುಷ್ಯನಾಯುಷ್ಯ ಕುಂದುತ್ತದೆ.

15: ಪ್ರೇಮಮತಿಯು ಹೊಗೆಯಿಂದ ಉಸಿರುಕಟ್ಟಿಕೊಂಡು ಸತ್ತು ಹೋದನು.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರ :**

1: ಧರ್ಮಬುದ್ಧಿಯು ದುಷ್ಟಬುದ್ಧಿಯೊಂದಿಗೆ ಹೊನ್ನನ್ನು ಹಂಚಿಕೊಳ್ಳೋಣವೆಂದನು. ಆಗ ದುಷ್ಟಬುದ್ಧಿಯು ನಾವು ಈ ಹೊನ್ನನ್ನು ಹಂಚಿಕೊಂಡರೆ ಮನೆಯಲ್ಲಿ ಸ್ವೇಚ್ಛೆಯಿಂದ ಇರಲು ಸಾಧ್ಯವಿಲ್ಲ. ಈಗ ವ್ಯಾಪಾರಕ್ಕೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಹಣವನ್ನು ಇಲ್ಲಿಯೇ ಹೂತಿಡೋಣ ಎಂದು ಸಲಹೆಯಿತ್ತನು.

2: ದುಷ್ಟಬುದ್ಧಿಯು ತನ್ನ ತಂದೆಯನ್ನು ಏಕಾಂತಕ್ಕೆ ಕರೆದು ನಡೆದ ವೃತ್ತಾಂತವೆಲ್ಲವನ್ನು ಹೇಳಿದನು. ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟವೆಲ್ಲ ಕಳೆದುಹೋಗಿ ಹಲವು ಕಾಲ ಸುಖದಿಂದ ಬಾಳುವಂತೆ ಆಗುತ್ತದೆ. ಆದ್ದರಿಂದ ನೀವು ಆ ಮರದ ಪೊಟರೆಯೊಳಗೆ ಅಡಗಿದ್ದು ಧರ್ಮಬುದ್ಧಿಯೇ ಹೊನ್ನನ್ನು ಕೊಂಡೊಯ್ದನೆಂದು ಹೇಳಲು ಸೂಚಿಸಿದನು.

3: ಧರ್ಮಾಧಿಕರಣರು ವಟವೃಕ್ಷಕ್ಕೆ ಅಷ್ಟವಿಧದ ಪೂಜೆಯನ್ನು ಸಲ್ಲಿಸಿ ನೀನಾದರೋ ಯಕ್ಷಾದಿ ದೇವತೆಗಳಿಗೆ ದಿವ್ಯ ಆವಾಸವಾಗಿದ್ದೀಯ. ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ, ಸತ್ಯವನ್ನು ನುಡಿಯಬೇಕೆಂದು ಕೇಳಿಕೊಂಡರು.

4: ಧರ್ಮಬುದ್ಧಿಯು ವಟವೃಕ್ಷವು ಸುಳ್ಳು ಹೇಳಿದುದನ್ನು ಕಂಡು ಪರೀಕ್ಷಿಸಲು ವೃಕ್ಷದ ಸುತ್ತಲೂ ಬಂದನು. ಅಲ್ಲಿ ಮನುಷ್ಯಸಂಚಾರ ಆಗಿರುವುದನ್ನು ಗಮನಿಸಿದನು. ಧರ್ಮಾಧಿಕರಣರಲ್ಲಿಗೆ ಬಂದು ಸುಳ್ಳು ಹೇಳದ ವ್ಯಾಪಾರಿಯೇ ಇಲ್ಲ, ನಾನು ಹೊನ್ನನ್ನು ಒಯ್ಯುವಾಗ ಬೆಳಗಾದುದರಿಂದ ಈ ಪೊಟರೆಯಲ್ಲಿ ಬಚ್ಚಿಟ್ಟೆನು. ಪುನಃ ಮರುದಿನ ಅಲ್ಲಿಗೆ ಬಂದಾಗ ಹೊನ್ನನ್ನು ಹಾವೊಂದು ಸುತ್ತಿಕೊಂಡಿತ್ತು. ಈಗ ಆ ಹಾವನ್ನು ಹೊಗೆ ಹಾಕಿ ಓಡಿಸಿ ಹೊನ್ನನ್ನು ತರುವೆನೆಂದು ಹೇಳಿ ಪೊಟರೆಯೊಳಗೆ ಹೊಗೆ ಹಾಕಿದನು. ಆಗ ಅಲ್ಲಿ ಅವಿತಿದ್ದ ಪ್ರೇಮಮತಿ ಉಸಿರುಕಟ್ಟಿ ಸತ್ತು ಹೊರಬಿದ್ದನು. ಹೀಗೆ ಧರ್ಮಬುದ್ಧಿ ಆಪಾದನೆಯಿಂದ ಪಾರಾದನು.

**( ಸೂಚನೆ : ಒಂದು ಸಂದರ್ಭಕ್ಕೆ ಮಾದರಿಯಾಗಿ ಉತ್ತರ ನೀಡಲಾಗಿದ್ದು ಉಳಿದ ಸಂದರ್ಭಗಳನ್ನು ಕ್ರಮವಾಗಿ ಉತ್ತರಿಸುವುದು )**

1. ಈ ವಾಕ್ಯವನ್ನು ದುರ್ಗಸಿಂಹನ ಪಂಚತಂತ್ರ ಕೃತಿಯಿಂದ ಆರಿಸಿರುವ 'ವೃಕ್ಷಸಾಕ್ಷಿ' ಗದ್ಯದಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಮಾತನ್ನು ದುಷ್ಟಬುದ್ಧಿಯು ಧರ್ಮಬುದ್ಧಿಗೆ ಹೇಳುತ್ತಾನೆ. ಅಡಗಿಸಿಟ್ಟ ಹೊನ್ನನ್ನು ಮೊದಲೇ ಅಪಹರಿಸಿ ಈಗ ಧರ್ಮಬುದ್ಧಿಯೊಂದಿಗೆ ಧನವನ್ನು ಹೂತಿಟ್ಟ ಸ್ಥಳಕ್ಕೆ ಹೊನ್ನನ್ನು ಹಂಚಿಕೊಳ್ಳಲು ಕರೆತರುತ್ತಾನೆ. ಅಲ್ಲಿ ಹೊನ್ನು ಇಲ್ಲದುದನ್ನು ಕಂಡು ಈ ರೀತಿ ಧರ್ಮಬುದ್ಧಿಯ ಮೇಲೆ ಆರೋಪಿಸುತ್ತಾನೆ.

## ಗದ್ಯಪಾಠ : 8. ವ್ಯಾಘ್ರಗೀತೆ

– ಎ.ಎನ್.ಮೂರ್ತಿರಾವ್

**ಕವಿ–ಕಾವ್ಯ ಪರಿಚಯ :**

ಆಧುನಿಕ ಕನ್ನಡದ ಪ್ರಮುಖ ಗದ್ಯಬರಹಗಾರರಾದ ಎ.ಎನ್.ಮೂರ್ತಿರಾವ್‌ರವರು, ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನವರು. ಇವರ ಕಾಲ ಕ್ರಿ.ಶ.1900 ಆಗಿದ್ದು. ಹಗಲುಗನಸು, ಅಲೆಯುವಮನ, ಅಪರವಯಸ್ಕನ ಅಮೇರಿಕ ಯಾತ್ರೆ, ಮಿನುಗುಮಿಂಚು, ಚಿತ್ರಗಳು–ಪತ್ರಗಳು, ದೇವರು ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪಪ್ರಶಸ್ತಿ ದೊರೆತಿದೆ.

### ಭಾಗ – ಎ

**ಒಂದು ಅಂಕದ ಪ್ರಶ್ನೆಗಳು.**

1. ಖಿರ್ದಿಪುಸ್ತಕ ಎಂದರೇನು ?
2. ಇರಸಾಲು ಎಂದರೇನು ?
3. ಬೆಕ್ಕು ರೂಪಿನಿಂದ ಯಾವ ಪ್ರಾಣಿ ಜಾತಿಗೆ ಸೇರಿದೆ ?
4. ಹುಲಿಯು ಮಾಂಸವನ್ನು ತಿನ್ನುವುದು ದೊಡ್ಡ ಅಪರಾಧವಲ್ಲ ಏಕೆ ?
5. ಭಗವದ್ಗೀತೆಯನ್ನು ರಚಿಸಿದವರು ಯಾರು ?
6. ಭಾರತೀಯರ ಪೂಜ್ಯನೀಯ ಗ್ರಂಥ ಯಾವುದು ?
7. ಜನಪ್ರಿಯ ಜನಪದ ಕಥನ ಕಾವ್ಯ ಯಾವುದು ?
8. ಖಿರ್ದಿಪುಸ್ತಕ ಯಾವುದರ ಲಾಂಛನವಾಗಿತ್ತು ?
9. ಮದಲಿಂಗನ ಕಣಿವೆ ಯಾವ ಜಿಲ್ಲೆಯಲ್ಲಿದೆ ?
10. ಹುಲಿ ಎಲ್ಲಿ ಮಲಗಿತ್ತು ?
11. ಹುಲಿಗೆ ಪರಮಾನಂದವಾಗಲು ಕಾರಣವೇನು ?
12. ರಸ್ತೆಯ ಬದಿಯಲ್ಲಿ ಹುಲಿ ಯಾರನ್ನು ನೋಡಿತು ?
13. ಹುಲಿಗೆ ಹಸು ಏನೆಂದು ಆಹ್ವಾನ ಕೊಟ್ಟಿತು ?
14. ಹುಲಿ ಭಗವದ್ಗೀತೆಯ ಯಾವ ಸಾಲನ್ನು ನೆನಪು ಮಾಡಿಕೊಂಡಿತು ?
15. ಶಾನುಭೋಗರು ಮಡಿಯಲೇಬೇಕಾದರೆ ಏನು ಮಾಡುವೆನೆಂದು ನಿಶ್ಚಯಿಸಿದರು ?
16. ಶಾನುಭೋಗರ ಬ್ರಹ್ಮಾಸ್ತ್ರವೇನು ?
17. ಶಾನುಭೋಗರು ದೇವರಲ್ಲಿ ಏನೆಂದು ಪ್ರಾರ್ಥಿಸಿದರು ?
18. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು ?
19. ಹಸಿದು ಮಲಗಿದ್ದ ಹುಲಿ ಏನೆಂದು ಯೋಚಿಸಿತು ?
20. ನೈಜವಾಗಿ ಶಾನುಭೋಗರು ಉಳಿದಿದ್ದು ಹೇಗೆ ?

**ಎರಡು ಅಂಕದ ಪ್ರಶ್ನೆಗಳು :**

1. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?
2. ಹುಲಿಯು ಹಿಂದಿನಿಂದ ಹಾರದಿರಲು ಕಾರಣವೇನು ?
3. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ವಿವರಿಸಿ.
4. ಹುಲಿಯು ಆಹಾರಕ್ಕಾಗಿ ಕೊಲ್ಲುವುದರಲ್ಲಿ ತಪ್ಪಿಲ್ಲವೆಂದು ಹೇಳುವಲ್ಲಿ ಲೇಖಕರ ಅಭಿಪ್ರಾಯವೇನು ?

**ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ :**

1. " ಖಂಡವಿದೆಕೋ, ಮಾಂಸವಿದೆಕೋ ಗುಂಡಿಗೆಯ ಬಿಸಿ ರಕ್ತವಿದೆಕೋ "
2. " ಸ್ವಧರ್ಮೇ ನಿಧನಂ ಶ್ರೇಯಃ "
3. " ದೇವರೇ ಮರ ಹತ್ತುವಷ್ಟು ಅವಕಾಶ ಕರುಣಿಸು "
4. " ನಾನು ಮುಖಮೇಲಾಗಿ ಬಿದ್ದಿದ್ದೇನೆ ? "
5. " ಹುಲಿ ಈಗ ಎಷ್ಟು ಹಸಿದಿರಬೇಕು "

## ಭಾಗ – ಬಿ

**ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ :**

**1. ನಾಮಪದದ ಮೂಲ ರೂಪಕ್ಕೆ :**
ಎ) ಧಾತು ಬಿ) ಭಾವನಾಮ ಸಿ) ನಾಮಪ್ರಕೃತಿ ಡಿ) ಸರ್ವನಾಮ

**2. 'ವ್ಯಾಪಾರಿ' – ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ :**
ಎ) ರೂಢನಾಮ ಬಿ) ಅಂಕಿತನಾಮ ಸಿ) ಭಾವನಾಮ ಡಿ) ಅನ್ವರ್ಥನಾಮ

**3. 'ಹಿರಿಯ'ದರ ಭಾವನಾಮ :**
ಎ) ದೊಡ್ಡದು ಬಿ) ಕಿರಿದು ಸಿ) ಇಂಪು ಡಿ) ಹಿರಿಮೆ

**4. ಆತನ <u>ಓಟ</u> ಚೆನ್ನಾಗಿತ್ತು ಈ ವಾಕ್ಯದಲ್ಲಿ ಗೆರೆ ಎಳೆದಿರುವ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ :**
ಎ) ಕೃದಂತಭಾವನಾಮ ಬಿ) ತದ್ಧಿತಾಂತಭಾವನಾಮ ಸಿ) ಕೃದಂತವ್ಯಯ ಡಿ) ಕೃದಂತನಾಮ

**5. 'ತಾನು – ತಾವು' – ಪದಗಳು ಈ ಸರ್ವನಾಮಕ್ಕೆ ಉದಾಹರಣೆಯಾಗಿವೆ :**
ಎ) ಪ್ರಶ್ನಾರ್ಥಕ ಬಿ) ಆತ್ಮಾರ್ಥಕ ಸಿ) ಪುರುಷಾರ್ಥಕ ಡಿ) ನಾಮಾತ್ಮಕ

**6. 'ಮೂಡಣ' – ಈ ನಾಮಪದಕ್ಕೆ ಉದಾಹರಣೆಯಾಗಿದೆ :**
ಎ) ದಿಗ್ವಾಚಕ ಬಿ) ಗುಣವಾಚಕ ಸಿ) ಪರಿಮಾಣವಾಚಕ ಡಿ) ಸಂಖ್ಯಾವಾಚಕ

**7. ವಸ್ತು, ವ್ಯಕ್ತಿ, ಪ್ರಾಣಿ, ಪಕ್ಷಿ ಮುಂತಾದವುಗಳನ್ನು ಗುರುತಿಸಲು ಇಟ್ಟ ಹೆಸರು ಈ ನಾಮಪದವಾಗಿದೆ :**
ಎ) ರೂಢನಾಮ ಬಿ) ಅಂಕಿತನಾಮ ಸಿ) ಅನ್ವರ್ಥನಾಮ ಡಿ) ಭಾವನಾಮ

**8. ನಾನು, ನಾವು – ಪದಗಳು ಈ ಪುರುಷಾರ್ಥಕ ಸರ್ವನಾಮಗಳು :**
ಎ) ಉತ್ತಮಪುರುಷ ಬಿ) ಪ್ರಥಮಪುರುಷ ಸಿ) ಮಧ್ಯಮಪುರುಷ ಡಿ) ಅಧಮಪುರುಷ

**9. ' ಮಾಡಲಿಕ್ಕೆ ' – ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :**
ಎ) ಕೃದಂತನಾಮ ಬಿ) ಕೃದಂತ ಭಾವನಾಮ ಸಿ) ಕೃದಂತಾವ್ಯಯ ಡಿ) ತದ್ಧಿತಾಂತಾವ್ಯಯ

**10. ' ಬರೆಯದ ' – ಪದವು ಈ ಕೃದಂತಕ್ಕೆ ಉದಾಹರಣೆ :**
ಎ) ವರ್ತಮಾನ ಕೃದಂತ ಬಿ) ಭೂತಕಾಲಕೃದಂತ ಸಿ) ನಿಷೇಧಕೃದಂತ ಡಿ) ಕೃದಂತಭಾವನಾಮ.

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ :**

1. ದೃಷ್ಟಿ : ದಿಟ್ಟಿ : : ಧರ್ಮ : ____________
2. ಪುಸ್ತಕ : ಹೊತ್ತಿಗೆ : : ಪ್ರಾಣ : ____________
3. ಸ್ಪರ್ಶೇಂದ್ರಯ : ಚರ್ಮ : : ಘ್ರಾಣೇಂದ್ರಿಯ : ____________
4. ಗಂಧ : ಸುವಾಸನೆ : : ಲಾಂಛನ : ____________
5. ಹನ್ನೆರಡು : ಸಂಖ್ಯಾವಾಚಕ : : ಹನ್ನೆರಡನೆಯ : ____________
6. ನೋಡುವುದರ ಭಾವ : ನೋಟ : : ನೆನೆಯುವುದರ ಭಾವ : ____________
7. ಓಡಿದ : ಭೂತಕಾಲಕೃದಂತ : : ಓಡುವ : ____________
8. ಮನುಷ್ಯ : ರೂಢನಾಮ : : ವಿಜ್ಞಾನಿ : ____________
9. ತಮ್ಮ : ಆತ್ಮಾರ್ಥಕ ಸರ್ವನಾಮ : : ಯಾರು : ____________
10. ರಾಜಭಕ್ತಿ : ತತ್ಪುರುಷಸಮಾಸ : : ಇಮ್ಮಡಿ : ____________
11. ಬ್ರಹ್ಮಾಸ್ತ್ರ : ಸವರ್ಣದೀರ್ಘಸಂಧಿ : : ಪಂಚೇಂದ್ರಿಯ : ____________
12. ಮಾಂಸವನ್ನು : ದ್ವಿತೀಯವಿಭಕ್ತಿ : : ಹುಲಿಯಲ್ಲಿ : ____________
13. ನಾಮಪ್ರಕೃತಿ : ನಾಮಪದ : : ಧಾತು : ____________

**ಉತ್ತರಗಳು :**

**1. ಸಿ. ನಾಮಪ್ರಕೃತಿ 2. ಡಿ. ಅನ್ವರ್ಥನಾಮ 3. ಡಿ) ಹಿರಿಮೆ 4. ಎ) ಕೃದಂತಭಾವನಾಮ 5. ಬಿ) ಆತ್ಮಾರ್ಥಕ 6. ಎ) ದಿಗ್ವಾಚಕ 7. ಬಿ) ಅಂಕಿತನಾಮ 8. ಎ) ಉತ್ತಮಪುರುಷ 9. ಡಿ) ಕೃದಂತಾವ್ಯಯ 10. ಸಿ) ನಿಷೇಧ ಕೃದಂತ**

**1. ದಮ್ಮ 2. ಹರಣ 3. ಮೂಗು 4. ಗುರುತು 5. ಸಂಖ್ಯೇಯವಾಚಕ 6. ನೆನಪು 7. ವರ್ತಮಾನಕೃದಂತ 8. ಅನ್ವರ್ಥನಾಮ 9. ಪ್ರಶ್ನಾರ್ಥಕ ಸರ್ವನಾಮ 10. ದ್ವಿಗುಸಮಾಸ 11. ಗುಣಸಂಧಿ 12. ಸಪ್ತಮಿವಿಭಕ್ತಿ 13. ಕ್ರಿಯಾಪದ**

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಕಂದಾಯದ ವಿವರವನ್ನು ಒಳಗೊಂಡ ಪುಸ್ತಕವೇ ಖಿರ್ದಿಪುಸ್ತಕ.
2. ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಖಜಾನೆಗೆ ಸಲ್ಲಿಸುವುದನ್ನು ಇರಸಾಲು ಎನ್ನುವರು.
3. ಬೆಕ್ಕು ರೂಪಿನಿಂದ ಹುಲಿಯ ಜಾತಿಗೆ ಸೇರಿದ ಪ್ರಾಣಿಯಾಗಿದೆ.
4. ಹುಲಿಯು ಮಾಂಸವನ್ನೇ ತಿಂದು ಬದುಕುವ ಪ್ರಾಣಿಯಾದ್ದರಿಂದ ಹುಲಿ ಮಾಂಸವನ್ನು ತಿನ್ನುವುದು ಅಪರಾಧವಲ್ಲ.
5. ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು.
6. 'ಭಗವದ್ಗೀತೆ' ಭಾರತೀಯರ ಪೂಜ್ಯ ಗ್ರಂಥ.
7. ಜನಪ್ರಿಯ ಜನಪದ ಕಥನಕಾವ್ಯ 'ಗೋವಿನಹಾಡು'.
8. ಖಿರ್ದಿಪುಸ್ತಕ 'ರಾಜಭಕ್ತಿಯ' ಲಾಂಛನವಾಗಿತ್ತು.
9. ಮದಲಿಂಗನ ಕಣಿವೆ 'ತುಮಕೂರು' ಜಿಲ್ಲೆಯಲ್ಲಿದೆ.
10. ಹುಲಿಯು ರಸ್ತೆಗೆ ಸ್ವಲ್ಪ ದೂರದಲ್ಲೆ ಇದ್ದ ಗುಹೆಯಲ್ಲಿ ಮಲಗಿತ್ತು.
11. ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಹಿತು.
12. ರಸ್ತೆಯ ಬದಿಯಲ್ಲಿ ಹುಲಿಯು ಶಾನುಬೋಗರನ್ನು ನೋಡಿತು.
13. ಹುಲಿಗೆ ಹಸುವು ' ಖಂಡವಿದಿಕೋ ಮಾಂಸವಿದೆಕೋ ಗುಂಡಿಗೆಯ ಬಿಸಿರಕ್ತವಿದೆಯೋ' ಎಂದು ಕರೆಕೊಟ್ಟಿತು.
14. ಹುಲಿಯು ಭಗವದ್ಗೀತೆಯ 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಸಾಲನ್ನು ನೆನಪು ಮಾಡಿಕೊಂಡಿತು.
15. ಶಾನುಭೋಗರು ಮಡಿಯಲೇಬೇಕಾದರೆ 'ಮಾಡಿಯೇ ಮಡಿಯುತ್ತೇನೆಂದು' ನಿಶ್ಚಯಿಸಿಕೊಂಡರು.
16. ಶಾನುಭೋಗರ ಬ್ರಹ್ಮಾಸ್ತ್ರ 'ಖಿರ್ದಿಪುಸ್ತಕ'.
17. ಶಾನುಭೋಗರು ದೇವರನ್ನು ' ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು' ಎಂದು ಪ್ರಾರ್ಥಿಸಿದರು.
18. ಶಾನುಭೋಗರು ಹುಲಿಯೊಂದಿಗಿನ ಹೋರಾಟದಲ್ಲಿ ಕುಲಾಲ ಚಕ್ರದಂತೆ ತಿರುಗುತ್ತಾ ತಿರುಗುತ್ತಾ ದಣಿದರು ಇದರಿಂದ ಇವರ ತಲೆಸುತ್ತಲಾರಂಭಿಸಿತು.
19. ಹಸಿದು ಮಲಗಿದ್ದ ಹುಲಿಯು 'ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ' ಎಂದು ಯೋಚಿಸಿತು.
20. ಶಾನುಭೋಗರು ನೈಜವಾಗಿ ಉಳಿದಿದ್ದು ಖಿರ್ದಿಪುಸ್ತಕದಿಂದಲ್ಲ 'ಹುಲಿಯ ಧರ್ಮಶ್ರದ್ಧೆಯಿಂದ '

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿದ್ದು, ವಾಪಸ್ಸು ಹೊರಡಲು ಸಂಜೆಯಾಯಿತು. ಅವರು ಹಳ್ಳಿ ತಲುಪಬೇಕಾದರೆ ಮದಲಿಂಗನ ಕಣಿವೆ ದಾಟಿ ಹೋಗಬೇಕಾಯಿತು. ಅದು ಕಾಡುದಾರಿ ಆದರೂ ಬೆಳದಿಂಗಳ ದಿನ: ಸ್ವಲ್ಪದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರುಸೇರಬಹುದು ಎಂದು ಭಯದಿಂದಲೇ ಕಾಲನ್ನು ಚುರುಕುಗೊಳಿಸುತ್ತಾ ಯೋಚಿಸಿದರು.
2. ಭರತಖಂಡದ ಹುಲಿಗಳು ಹಿಂದಿನಿಂದ ಹಾರಿಕೊಲ್ಲುವುದಿಲ್ಲ ಶತ್ರುವನ್ನಾದರೂ ಸರಿಯೇ, ಆತ ಬೆನ್ನು ತಿರುಗಿಸಿದಾಗ ಕೊಲ್ಲುವುದು ಧರ್ಮವಲ್ಲವೆಂದು ತಿಳಿದು ಕೊಂಡಿರುತ್ತವೆ. ಈ ಭರತಭೂಮಿಯಲ್ಲಿ ಪುಣ್ಯಕೋಟಿ ಖಂಡವಿದಿಕೋ ಮಾಂಸವಿದಿಕೋ ಎಂದು ಕರೆಕೊಟ್ಟಾಗ ಬಾಯಿಚಪ್ಪರಿಸಿಕೊಂಡು ತಿನ್ನದೇ ತನ್ನಪ್ರಾಣವನ್ನೇ ಬಿಟ್ಟಿರುವಾಗ ಅದರ ಮೊಮ್ಮಗ ಹೀಗೆ ಹಿಂದಿನಿಂದ ಕೊಲ್ಲುವುದಿಲ್ಲ.
3. ಶಾನುಭೋಗರು ಬಿದ್ದ ಪೆಟ್ಟಿಗೆ ಪ್ರಜ್ಞೆ ತಪ್ಪಿದರು. ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದುರುಗುತ್ತಿದ್ದಾಗ ಶಾನುಭೋಗರು ಬಿದ್ದ ಸ್ಥಳಕ್ಕೆ ಹರದಾರಿ ಎನ್ನುವಾಗ ಎತ್ತುಗಳು ಏನು ಮಾಡಿದರೂ ಮುಂದೆ ಹೋಗದೇ ಕಣಿ ಹಾಕಿಕೊಂಡವು. ಸ್ವಲ್ಪ ಸಮಯದಲ್ಲಿಯೇ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಶಬ್ದ ಹಾಗೂ ರೈತರ ಮಾತುಗಳನ್ನು ಕೇಳಿ ಹುಲಿ ನಿರಾಶೆಯಿಂದ ಪಲಾಯನ ಮಾಡಿತ್ತು. ನಂತರ ರೈತರು ಕೋವಿಯಿಂದ ಒಂದೆರಡು ತೋಟ ಹಾರಿಸಿ ಗಲಭೆಮಾಡುತ್ತಾ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಬಂದು, ಶಾನುಭೋಗರನ್ನು ಕಂಡು ಮುಖದ ಮೇಲೆ ನೀರುಹಾಕಿ ಎಚ್ಚರಿಸಿದರು.
4. ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನುವುದಾದರೇ ಹುಲಿಯು ಮಾಂಸಹಾರವನ್ನೇ ತಿಂದು ಬದುಕುವುದಾದ್ದರಿಂದ ಹುಲಿಯು ತನ್ನ ಆಹಾರಕ್ಕಾಗಿ ಪ್ರಾಣಿಗಳನ್ನು ಕೊಂದು ತಿನ್ನುವುದರಲ್ಲಿ ತಪ್ಪಿಲ್ಲವೆಂದು ಲೇಖಕರು ಅಭಿಪ್ರಾಯ ಪಡುತ್ತಾರೆ.

**ಸಂದರ್ಭಗಳು : (ಸೂಚನೆ : ಒಂದು ಸಂದರ್ಭಕ್ಕೆ ಮಾತ್ರ ಮಾದರಿ ಉತ್ತರವನ್ನು ನೀಡಿದ್ದು ಉಳಿದವುಗಳಿಗೆ ಮಾದರಿಂತೆ ಉತ್ತರಿಸುವುದು )**

ಈ ವಾಕ್ಯವನ್ನು ಎ.ಎನ್.ಮೂರ್ತಿರಾವ್ ವಿರಚಿತ ' ಸಮಗ್ರ ಲಲಿತ ಪ್ರಬಂಧಗಳು' ಸಂಕಲನದಿಂದ ಆಯ್ಕೆಮಾಡಲಾದ 'ವ್ಯಾಘ್ರಗೀತೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲವುದಿಲ್ಲವೇಕೆಂದು ವಿವರಿಸುತ್ತಾ ಲೇಖಕರು ಓದುಗರಿಗೆ ಈ ಮಾತನ್ನು ಹೇಳುತ್ತಾರೆ. ಶ್ಯಾನುಭೋಗರ ಮೇಲೆ ಹುಲಿ ಹಾರಿ ಮುಂದೆ ಬಂದು ನಿಂತಾಗ ಶ್ಯಾನುಭೋಗರು ಪುನಃ ವಿರುದ್ಧದಿಕ್ಕಿನಲ್ಲಿ ನಡೆಯತೊಡಗಿದರು, ಏಕೆಂದರೆ ಈ ಹುಲಿಯು ಸದ್ವಂಶದಲ್ಲಿ ಜನಿಸಿದ್ದು ಹಿಂದೆ ಖಂಡವಿದೀಕೋ ಮಾಂಸವಿದೀಕೋ, ಗುಂಡಿಗೆಯ ಬಿಸಿರಕ್ತವಿದೀಕೋ' ಎಂದು ಹಸು ಆಹ್ವಾನ ಕೊಟ್ಟಾಗ ಅದರ ಸತ್ಯಕ್ಕೆ ಮೆಚ್ಚಿ ತನ್ನ ಪ್ರಾಣವನ್ನೇ ಅರ್ಪಿಸಿದ ಹುಲಿಯ ಮೊಮ್ಮಗನಾಗಿದ್ದು ಅಧರ್ಮಕ್ಕೆ ಕೈಹಾಕುವುದಿಲ್ಲ ಎಂದು ವಿವರಿಸುವ ಸಂದರ್ಭದ ಸ್ವಾರಸ್ಯವಿದು.

## ವ್ಯಾಘ್ರಗೀತೆ ಪಾಠದಲ್ಲಿ ಬರುವ ಪ್ರಮುಖ ವ್ಯಾಕರಣಾಂಶಗಳು :

**ಅರ್ಥಗಳು :**

- ❖ **ಲಾಂಛನ** – ಗುರುತು, ಚಿಹ್ನೆ. **ಘ್ರಾಣೇಂದ್ರಿಯ** – ಮೂಗು
- ❖ **ಖಿರ್ದಿ** – ಕಂದಾಯದ ವಿವರದ ಪುಸ್ತಕ. **ಪಂಜಾ** – ಹುಲಿಯ ಅಂಗಾಲು.
- ❖ **ಗಂಧ** – ವಾಸನೆ. **ಜಡ** – ಮಂದ.

**ತತ್ಸಮ– ತದ್ಭವಗಳು :**

| | | | | | |
|---|---|---|---|---|---|
| – ಕವಿ | – ಕಬ್ಬಿಗ | **ಜಾತಿ** | – ಜಾದಿ | **ವಸ್ತ್ರ** | – ವಸನ / ಬಟ್ಟೆ |
| – ಧರ್ಮ | – ದಮ್ಮ | **ಪುಸ್ತಕ** | – ಹೊತ್ತಗೆ | **ಕೀರ್ತಿ** | – ಕೀರುತಿ |
| – ವಂಶ | – ಬಂಚ | **ಹಳ್ಳಿ** | – ಪಳ್ಳಿ | **ಗುಹೆ** | – ಗವಿ. |
| – ವಿಧಿ | – ಬಿದಿ | **ಮುಖ** | – ಮೊಗ | **ಕ್ಷಣ** | – ಚಣ |
| – ಅಜ್ಜ | – ಆರ್ಯ | **ಅಕ್ಷರ** | – ಅಕ್ಕರ | **ವೇಗ** | – ಬೇಗ |
| – ಘಂಟೆ | – ಘಂಟಾ | **ಹೃದಯ** | – ಎದೆ, ಹೆದೆಯ | | |

**ಸಂಧಿಪದಗಳು :**

1. **ಘ್ರಾಣೇಂದ್ರಿಯ** – ಘ್ರಾಣ + ಇಂದ್ರಿಯ = ಗುಣಸಂಧಿ.
2. **ಪಂಚೇಂದ್ರಿಯ** – ಪಂಚ + ಇಂದ್ರಿಯ = ಗುಣಸಂಧಿ.
3. **ಬ್ರಹ್ಮಾಸ್ತ್ರ** – ಬ್ರಹ್ಮ + ಅಸ್ತ್ರ = ಸವರ್ಣಧೀರ್ಘಸಂಧಿ.
4. **ವದನಾರವಿಂದ** – ವದನ + ಅರವಿಂದ = ಸವರ್ಣಧೀರ್ಘಸಂಧಿ.
5. **ಶಾಖಾಹಾರ** – ಶಾಖ + ಆಹಾರ = ಸರ್ವಧೀರ್ಘಸಂಧಿ.
6. **ಧರ್ಮಾಧರ್ಮ** – ಧರ್ಮ + ಅಧರ್ಮ = ಸವರ್ಣಧೀರ್ಘಸಂಧಿ.
7. **ಮತ್ತೊಂದು** – ಮತ್ತೆ + ಒಂದು = ಲೋಪಸಂಧಿ.
8. **ಸದ್ವಂಶ** – ಸತ್ + ವಂಶ = ಜಸ್ತ್ವಸಂಧಿ.
9. **ಮೈಯಲ್ಲಿ** – ಮೈ + ಅಲ್ಲಿ = ಆಗಮಸಂಧಿ.

**ಸಮಾಸಪದಗಳು :**

1. **ಆ ಹುಲಿ** – ಅದು + ಹುಲಿ = ಗಮಕಸಮಾಸ.
2. **ಆ ಭರತ** – ಅವನು + ಭರತ = ಗಮಕಸಮಾಸ.
3. **ಆ ಹಸು** – ಅದು + ಹಸು = ಗಮಕಸಮಾಸ.
4. **ದೇವರರಕ್ಷಣೆ** – ದೇವರ + ರಕ್ಷಣೆ = ತತ್ಪುರುಷಸಮಾಸ
5. **ಧರ್ಮಶ್ರದ್ಧೆ** – ಧರ್ಮದಲ್ಲಿ + ಶ್ರದ್ಧೆ = ತತ್ಪುರುಷಸಮಾಸ.
6. **ರಾಜಭಕ್ತಿ** – ರಾಜನಲ್ಲಿ + ಭಕ್ತಿ = ತತ್ಪುರುಷಸಮಾಸ.
7. **ಮದಲಿಂಗಕಣಿವೆ** – ಮದಲಿಂಗನ + ಕಣಿವೆ = ತತ್ಪುರುಷಸಮಾಸ.
8. **ನಾಲ್ಕೈದು** – ನಾಲ್ಕು + ಐದು = ದ್ವಿಗುಸಮಾಸ
9. **ಪಂಚೇಂದ್ರಿಯ** – ಪಂಚಗಳಾದ + ಇಂದ್ರಿಯ = ದ್ವಿಗುಸಮಾಸ.
10. **ನೀರುಚುಮುಕಿಸು** – ನೀರನ್ನು + ಚುಮುಕಿಸು = ಕ್ರಿಯಾಸಮಾಸ.
11. **ಕತ್ತನೆತ್ತಿ** – ಕತ್ತನ್ನು + ಎತ್ತಿ = ಕ್ರಿಯಾಸಮಾಸ.
12. **ಮೈಮುರಿದು** – ಮೈಯನ್ನು + ಮುರಿದು = ಕ್ರಿಯಾಸಮಾಸ.
13. **ಕಲ್ಲನ್ನೆಡವಿ** – ಕಲ್ಲನ್ನು + ಎಡವಿ = ಕ್ರಿಯಾಸಮಾಸ.

**ದ್ವಿರುಕ್ತಿಗಳು :**

1. ಬೇಗಬೇಗ
2. ದುಂಡುದುಂಡು
3. ಮೆಲ್ಲಮೆಲ್ಲನೆ.
4. ಸಲಸಲ
5. ಹೊಸಹೊಸ

**ಸಂಬಂಧಾರ್ಥಕ ಅವ್ಯಯಗಳು**

1. ಆದರೆ
2. ಆದುದರಿಂದ
3. ಆನಂತರ
4. ಮತ್ತು

**ಕೃದಂತಭಾವನಾಮ**

1. ನೆನಪು
2. ನೋಟ
3. ಅರಿವು
4. ಮೆಚ್ಚಿಕೆ

## ಪದ್ಯಭಾಗ : 1. ಎಮ್ಮನುಡಿಗೇಳ್

– ಆದಿಕವಿ – ಪಂಪ

**ಕವಿ– ಕಾವ್ಯ–ಪರಿಚಯ :** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಆದಿಕವಿ ಎಂದು ಹೆಸರಾದವನು ಪಂಪಕವಿ. ಇವನ ಕಾಲ ಕ್ರಿ.ಶ. 941. ಇವನ ಸ್ಥಳ ವೆಂಗಿಮಂಡಳದ ವೆಂಗಿಪಳು. ಪ್ರಮುಖವಾಗಿ ಆದಿ ಪುರಾಣ ಮತ್ತು ವಿಕ್ರಮಾರ್ಜುನ ವಿಜಯ (ಪಂಪ ಭಾರತ) ಕೃತಿಗಳನ್ನು ರಚಿಸಿದ್ದಾನೆ. ಇವನ ಆಶ್ರಯದಾತ ಅರಿಕೇಸರಿ (ಚಾಲುಕ್ಯ ಅರಸ) ಬಿರುದು – ಕವಿತಾ ಗುಣಾರ್ಣವ, ಸರಸ್ವತಿ ಮಣಿಹಾರ.

### ಭಾಗ – ಎ

**ಒಂದು ವಾಕ್ಯದಲ್ಲಿ ಉತ್ತರಿಸಿ ( ಒಂದು ಅಂಕದ ಪ್ರಶ್ನೆಗಳು)**

1. ಭೀಮನಿಗೆ 'ಪವನ ನಂದನ' ಎಂಬ ಹೆಸರು ಬರಲು ಕಾರಣವೇನು?
2. ಘಟ ಸಂಭೂತ ಯಾರು?
3. ದುರ್ಯೋಧನನು ಧೃತರಾಷ್ಟ್ರನ ಕಾಲಿಗೆ ಎರಗಿದಾಗ ಅವನ ಪ್ರತಿಕ್ರಿಯೆ ಏನು?
4. ಕಲಹಕ್ಕೆ ಕಾರಣ ಯಾರೆಂದು ಧೃತರಾಷ್ಟ್ರನು ತಿಳಿಸಿದನು?
5. ದ್ವೇಷ ಮತ್ತು ಸ್ನೇಹಕ್ಕೆ ಕಾರಣವೇನು?
6. ದುರ್ಯೋಧನ ಒಬ್ಬನಾದರೂ ಬದುಕಲಿ ಎನ್ನುವುದಕ್ಕೆ ದೃತರಾಷ್ಟ್ರ ಕೊಟ್ಟ ಹೋಲಿಕೆ ಏನು?
7. ಗಾಂಡೀವಿ ಎಂದು ಅರ್ಜುನನ್ನು ಏಕೆ ಕರೆಯುತ್ತಾರೆ?
8. ಪಂಪ ಭಾರತಕ್ಕೆ ಇರುವ ಇನ್ನೊಂದು ಹೆಸರೇನು?
9. ದುರ್ಯೋಧನನ ತಾಯಿಯ ಹೆಸರೇನು?
10. ಅರ್ಜುನನ ತಂದೆಯ ಹೆಸರೇನು?
11. ದುರ್ಯೋಧನನ ತಂದೆಯ ಹೆಸರೇನು?

**ಎರಡು ಅಂಕದ ಪ್ರಶ್ನೆಗಳು**

1. ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಹೇಗೆ ಸಮರ್ಥಿಸಿದನು?
2. ದುರ್ಯೋಧನನಿಗೆ ಗಾಂಧಾರಿ ಹೇಳಿದ ಉಪದೇಶವೇನು?

**ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.**

1. " ಎನಗಂ ಪಾಂಡುಗಮಿಲ್ಲ ಭೇದಂ ".
2. " ಈ ಕಲಹಮುಂ ನಿನ್ನಿಂದವಮಾಯ್ತೆಂದೊಡಿಂ ಮುನಿವೈ".
3. " ಪಗೆಗೆ ಕಣಿಯೊಂದುಂಟೆ " ?
4. " ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ. "
5. " ಪಗಲೆನಿತಾನುಂ ದೀವಿಗೆಗಳುರಿದೊಡೇಂ."
6. " ಪೆರ್ಮರನುಟಿವಂತೆ ನೀನುಟಿದೆ. "

**ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿ.**

ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ
ದನರುಂ ನೈದರೆ ನಿನ್ನೊಳೀ ಕಲಹಮುಂ ನಿನ್ನಿಂದ ವಾಯ್ತೆಂದೊಡಿಂ ।
ಮುನಿವೈ ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗ ಸಾ
ಧ್ಯನೊಳಾ ಗಾಂಡಿವಿಯೊಳ್ ಕಱುತ್ತಿಜೀವರಾರಿಂ ಮಾಡುವಂ ಸಂಧಿಯಂ ॥

1. ಸಂಧಿ ಮಾಡಿಕೊ ಎಂಬ ವಿಚಾರವನ್ನು ಯಾರು ಯಾರಿಗೆ ತಿಳಿಸಿದರು?
2. ಘಟಸಂಭೂತ ಎಂದರೆ ಯಾರು?
3. ಅರ್ಜುನನು ಯಾರು ಯಾರಿಗೆ ಅಸಾಧ್ಯನಾದನು?
4. ಸಂಧಿ ಮಾಡಿಕೊ ಎಂದು ತಿಳಿಸಿರುವುದು ಸೂಕ್ತವೆ?

## ಭಾಗ – ಬಿ

I] ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ.

1. ' ಪವನ ನಂದನ ' – ಈ ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ.
   ಎ) ರೂಢನಾಮ   ಬಿ) ಅಂಕಿತನಾಮ   ಸಿ) ಭಾವನಾಮ   ಡಿ) ಅನ್ವರ್ಥಕ ನಾಮ
2. 'ಕಾರ್ಯ ' ಎಂಬ ಪದವು ಈ ವ್ಯಾಕರಣಾಂಶಕ್ಕೆ ಸೇರುತ್ತದೆ.
   ಎ) ತತ್ಸಮ   ಬಿ) ತದ್ಭವ   ಸಿ) ಸಜಾತಿಯ ಒತ್ತಕ್ಷರ   ಡಿ) ದ್ವಿರುಕ್ತಿ
3. 'ಪೆರ್ಮಗ' ಎಂಬುದು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಎ) ಕರ್ಮಧಾರೆಯಸಮಾಸ   ಬಿ) ದ್ವಿಗುಸಮಾಸ   ಸಿ) ಬಹುವ್ರೀಹಿಸಮಾಸ   ಡಿ) ಕ್ರಿಯಾಸಮಾಸ
4. 'ಮದಾಂಧ– ಇಲ್ಲಿರುವ ಸಂಧಿ
   ಎ) ಸವರ್ಣದೀರ್ಘಸಂಧಿ   ಬಿ) ಗುಣಸಂಧಿ   ಸಿ)ವೃದ್ಧಿಸಂಧಿ   ಡಿ) ಯಣ್‌ಸಂಧಿ
5. 'ಭೇದಮ್' ಪದದಲ್ಲಿರುವ ವಿಭಕ್ತಿ ಪ್ರತ್ಯಯ
   ಎ) ಪ್ರಥಮ   ಬಿ) ದ್ವಿತೀಯ   ಸಿ) ತೃತೀಯ   ಡಿ) ಸಪ್ತಮಿ
6. 'ಗಾಂಡಿವಿಯೊಳ್ ' – ಪದದ ಹೊಸಗನ್ನಡ ರೂಪ
   ಎ) ಗಾಂಡೀವಿಯಲ್ಲಿ   ಬಿ) ಗಾಂಡೀವಿಯ   ಸಿ) ಗಾಂಡೀವಿಗೆ   ಡಿ) ಗಾಂಡೀವಿಯಿಂದ
7. ಖ್ಯಾತ ಕರ್ನಾಟಕಗಳ ಸಂಖ್ಯೆ
   ಎ) 6   ಬಿ) 8   ಸಿ) 7   ಡಿ) 5
8. 'ಘಟ' ಪದದ ಅರ್ಥ
   ಎ) ಗಡಿಗೆ   ಬಿ) ಘಂಟೆ   ಸಿ) ಗೃಹ   ಡಿ) ಗಜ
9. ಗುರು ಲಘು ಮೊದಲ್ಲಿ ಬರಲು
   ಎ) ಭ–ಯ ಗಣ   ಬಿ) ಜ–ರ ಗಣ   ಸಿ) ಸ–ತ ಗಣ   ಡಿ) ಮ–ನ ಗಣ
10. ಪ್ರಾಸಾಕ್ಷರದ ಹಿಂದಿನ ಅಕ್ಷರ ಹ್ರಸ್ವವಾಗಿದ್ದರೆ ಇದನ್ನು ಈ ಆದಿಪ್ರಾಸವೆನ್ನುವರು :
    ಎ) ಗಜಪ್ರಾಸ   ಆ) ಹಯಪ್ರಾಸ   ಇ) ವೃಷಭಪ್ರಾಸ   ಈ) ಸಿಂಹಪ್ರಾಸ
11. ಕಾವ್ಯವನ್ನು ಓದುವಾಗ ಅರ್ಥಕ್ಕೆ ಲೋಪ ಬಾರದಂತೆ ಉಸಿರು ನಿಲ್ಲಿಸುವುದಕ್ಕೆ :
    ಎ) ಪ್ರಾಸ   ಬಿ) ಯತಿ   ಸಿ) ಗಣ   ಡಿ) ಅಲಂಕಾರ
12. ಪದ್ಯದ ಪ್ರತಿ ಸಾಲಿನ ಒಂದು ಮತ್ತು ಎರಡನೆ ಸ್ವರಗಳ ನಡುವೆ ಒಂದೇ ಜಾತಿಯ ವ್ಯಂಜನ ಬರುವುದು :
    ಎ) ಒಳಪ್ರಾಸ   ಬಿ) ಮಧ್ಯಪ್ರಾಸ   ಸಿ) ಆದಿಪ್ರಾಸ   ಡಿ) ಮಧ್ಯಪ್ರಾಸ
13. ' ನಜಭಜಜಜರ ' ಗಣ ವಿನ್ಯಾಸ ವಿರುವ ವೃತ್ತ :
    ಎ) ಮತ್ತೇಭವಿಕ್ರೀಡಿತ   ಬಿ) ಉತ್ಪಲಮಾಲೆ   ಸಿ) ಚಂಪಕಮಾಲೆ   ಡಿ) ಸ್ರಗ್ದರೆ
14. ' ದೀವಿಗೆ ' ಪದದ ತದ್ಭವ ರೂಪ :
    ಎ) ದೀಪ   ಬಿ) ಪಂಜು   ಸಿ) ದೀಪಿಕಾ   ಡಿ) ದೇವಿಗೆ

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಸಿದ ನಾಲ್ಕನೇ ಪದವನ್ನು ಬರೆಯಿರಿ :

1. ಕಂದ ಪದ್ಯ : ಮಾತ್ರಾ ಗಣ : : ಖ್ಯಾತಕರ್ನಾಟಕಗಳು : ________
2. ಗುರು ಮೊದಲ್ ಮೂರಾಗೆ : ಶಾರ್ದೂಲಮ್ : : ಗುರು ನಾಲ್ಕಾಗಿರಲಂತು : ________
3. ಪಗಗೆ : ನಗಣ : : ಅನ್ನೆಗಂ : ________
4. ಕಣಿ : ಗಣಿ : : ಅಮೃತ : ________
5. ಗುರು ಕೊನೆಯಲಿ ಬರಲು : ' ಸ 'ಗಣ : : ಲಘು ಕೊನೆಯಲಿಬರಲು : ________
6. ಬಾನು : ಆಕಾಶ : : ಭಾನು : ________
7. ಗಾಂಡೀವಿ : ' ತ 'ಗಣ : : ಪೆರ್ಮಗಂ : ________

**ಉತ್ತರಗಳು :** 1. ಅನ್ವರ್ಥನಾಮ 2. ತತ್ಸಮ 3. ಕರ್ಮಧಾರೆಯ 4. ಸವರ್ಣದೀರ್ಘ ಸಂಧಿ 5. ಪ್ರಥಮ 6. ಗಾಂಡೀವಿಯಲ್ಲಿ 7. 06 8. ಗಡಿಗೆ 9. ಭ–ಯ ಗಣ 10. ಸಿಂಹಪ್ರಾಸ 11. ಬಿ. ಯತಿ 12. ಆದಿಪ್ರಾಸ 13. ಚಂಪಕಮಾಲೆ 14. ದೀಪಿಕಾ.

**ಉತ್ತರಗಳು :** 1) ಅಕ್ಷರ ಗಣ 2) ಸ್ರಗ್ಧರೆ 3) ' ರ 'ಗಣ 4) ಅಮರ್ದು 5) 'ತ'ಗಣ 6) ಸೂರ್ಯ 7. 'ಜ'ಗಣ

**ಒಂದು ಅಂಕದ ಪ್ರಶ್ನೆಯ ಉತ್ತರಗಳು**

1. ವಾಯುವಿನ ವರ ಬಲದಿಂದ ಜನಿಸಿದ ಕಾರಣ ಭೀಮನಿಗೆ ಪವನನಂದನ ಎಂಬ ಹೆಸರು ಬಂದಿತು.
2. ಘಟಸಂಭೂತ ಎಂದು ದ್ರೋಣನನ್ನು ಕರೆಯಲಾಗುತ್ತದೆ.(ಕುಂಭದಲ್ಲಿ ಜನಿಸಿದವನು)
3. ದುರ್ಯೋಧನನು ಧೃತರಾಷ್ಟ್ರನ ಕಾಲಿಗೆ ಎರಗಿದಾಗ ಅವನ ಅಂಗಾಂಗಗಳನ್ನು ತಡವರಿಸಿ ಪುತ್ರವಾತ್ಸಲ್ಯದಿಂದ ಅಪ್ಪಿಕೊಂಡನು.
4. ಕಲಹಕ್ಕೆ ದುರ್ಯೋಧನನೇ ಕಾರಣ ಎಂದು ಧೃತರಾಷ್ಟ್ರನು ಅಭಿಪ್ರಾಯ ಪಟ್ಟನು.
5. ದ್ವೇಷ ಮತ್ತು ಸ್ನೇಹಕ್ಕೆ ನಾವು ಕೈಗೊಳ್ಳುವ ಕೆಲಸ ಕಾರಣ ಎಂದನು.
6. ದುರ್ಯೋಧನನು ಒಬ್ಬನಾದರೂ ಬದುಕಲಿ ಎನ್ನುವುದಕ್ಕೆ ಧೃತರಾಷ್ಟ್ರ ಕೊಟ್ಟ ಹೋಲಿಕೆ ಎಂದರೆ ಸೂರ್ಯನ ಎದುರಿನಲ್ಲಿ ಹಲವಾರು ದೀಪಗಳನ್ನು ಹಗಲಿನಲ್ಲಿ ಹಚ್ಚಿದರೇನು? ಎಂಬ ಹೋಲಿಕೆಯನ್ನು ನೀಡುತ್ತಾನೆ.
7. ಗಾಂಡೀವ ಎಂಬ ಧನುಸ್ಸನ್ನು ಅರ್ಜುನನು ಹೊಂದಿರುವುದರಿಂದ ಅವನಿಗೆ ಗಾಂಡೀವಿ ಎಂಬ ಹೆಸರು ಬಂದಿತು.
8. ಪಂಪ ಭಾರತದ ಮತ್ತೊಂದು ಹೆಸರು ವಿಕ್ರಮಾರ್ಜುನ ವಿಜಯ.
9. ದುರ್ಯೋಧನನ ತಾಯಿಯ ಹೆಸರು ಗಾಂಧಾರಿ.
10 ಅರ್ಜುನನ ತಂದೆಯ ಹೆಸರು ಪಾಂಡುರಾಜ.
11. ದುರ್ಯೋಧನನ ತಂದೆಯ ಹೆಸರು ಧೃತರಾಷ್ಟ್ರ.

**ಎರಡು ಅಂಕದ ಪ್ರಶ್ನೆಯ ಉತ್ತರಗಳು**

1. ಪಾಂಡುವಿಗೂ ನನಗೂ ಭೇದವಿಲ್ಲದೆ ಈ ಭೂಮಿಯನ್ನು ಹಂಚಿ ಆಳಿದೆವು. ಆ ಪಾಂಡುವಿನ ಮಕ್ಕಳು ಎಲ್ಲರೊಂದಿಗೂ ಹೊಂದಿಕೊಳ್ಳುವರು. ನಿನ್ನಿಂದ ಕಲಹ ಪ್ರಾರಂಭವಾಯಿತು. ನೀನು ಕಳುಹಿಸಿದ ಭೀಷ್ಮ, ದ್ರೋಣ, ಕರ್ಣರೆಲ್ಲ ಸೋತರು ಅರ್ಜುನನ ಎದುರಿನಲ್ಲಿ ನಿನಗೆ ಹೋರಾಡಲು ಸಾಧ್ಯವೇ ಸಂಧಿ ಮಾಡಿಕೊ ಎಂದನು.
2. ಕುರುಕುಲವೆಂಬ ಪರಿಮಳಪೂರಿತ ಹೂದೋಟಕ್ಕೆ ಮದದಿಂದ ಕುರುಡಾದ ಆನೆಯಂತಿರುವ ಭೀಮನು ನುಗ್ಗಿ ಎಲ್ಲಾ ಧ್ವಂಸ ಮಾಡಿದಾಗ ನಮ್ಮ ಪುಣ್ಯದಿಂದ ಹೆಮ್ಮರ ಉಳಿಯುವಂತೆ ನೀನು ಉಳಿದೆ. ಹಾಗಾಗಿ ನಿನ್ನ ತಂದೆಯ ಮಾತನ್ನು ಕೇಳು ಎಂದು ತಿಳಿಸುವಳು.

**ಸಂದರ್ಭ ಸ್ವಾರಸ್ಯ ( ಸೂಚನೆ:– ಒಂದು ಸಂದರ್ಭಕ್ಕೆ ಮಾತ್ರ ಮಾದರಿ ಉತ್ತರ ನೀಡಿದ್ದು ಉಳಿದವುಗಳಿಗೆ ಮಾದರಿಯಂತೆ ಉತ್ತರಿಸುವುದು.)**

1. ಈ ಮಾತನ್ನು ಆದಿಕವಿ ಪಂಪ ಬರೆದಿರುವ 'ವಿಕ್ರಮಾರ್ಜುನ ವಿಜಯ' ಎಂಬ ಕೃತಿಯ 'ಎಮ್ಮ ನುಡಿಗೇಳ್' ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದನು.
ಸಂದರ್ಭ : ಸಂಧಿಯನ್ನು ಮಾಡಿಕೊಳ್ಳುವುದು ಉತ್ತಮ ಎಂದು ದುರ್ಯೋಧನನಿಗೆ ಬುದ್ಧಿವಾದವನ್ನು ಹೇಳುತ್ತ ಈ ಮಾತನ್ನು ಹೇಳುತ್ತಾನೆ. ಸ್ವಾರಸ್ಯ: ನಾನು ಹಾಗೂ ಪಾಂಡುರಾಜ ಈ ಭೂಮಿಯನ್ನು ಭೇದವಿಲ್ಲದಂತೆ ಹಂಚಿ ಆಳಿದೆವು ಎಂಬ ಸಹೋದರ ವಾತ್ಸಲ್ಯವು ಇಲ್ಲಿ ವ್ಯಕ್ತವಾಗಿದೆ.

**ಪದ್ಯಭಾಗವನ್ನು ಅರ್ಥೈಸಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವುದು.**

1. ಸಂಧಿಮಾಡಿಕೊ ಎಂಬ ವಿಚಾರವನ್ನು ದುರ್ಯೋಧನನಿಗೆ ಧೃತರಾಷ್ಟ್ರನು ತಿಳಿಸಿದನು.
2. ಘಟಸಂಭೂತ ಎಂದರೆ ದ್ರೋಣ.
3. ಅರ್ಜುನನು ಭೀಷ್ಮನಿಗೆ, ದ್ರೋಣನಿಗೆ ಹಾಗೂ ಕರ್ಣನಿಗೆ ಅಸಾಧ್ಯನಾದನು.
4. ಅರ್ಜುನನ ಎದುರಿಗೆ ದುರ್ಯೋಧನನು ಕಳುಹಿಸಿದ ಎಲ್ಲರೂ ಪರಾಭವಗೊಂಡಾಗ ನಿನಗೂ ಅಸಾಧ್ಯನಾಗುವನು ಹಾಗಾಗಿ ಸಂಧಿಯೇ ಸೂಕ್ತ ಎಂದನು.

**ಕಂಠಪಾಠ ಪದ್ಯ ಭಾಗ**

ನೀನುಳ್ಳೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ।
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ॥

2. ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧೂರಮ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ
ರ್ಮರನುಳಿವಂತೆ ನೀನುಳಿದೆಯಿನ್ನಿರವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ॥

## ಎಮ್ಮನುಡಿಗೇಳ್ ಪದ್ಯಭಾಗದ ವ್ಯಾಕರಣಾಂಶಗಳು

➢ **ಪದಗಳ ಅರ್ಥ :**

**ಎಯ್ದೆ** – ಸಮೀಪ, **ಪಿತೃದ್ವಂದ್ವ** – ತಂದೆ ತಾಯಿ, **ಸೈದರೆ** – ಹೊಂದಿಕೊಂಡರೆ **ಅಣ್ಕೆರು** – ಪ್ರೀತಿ, **ನಣ್ಪು** – ನಂಟು **ಆಗರ** – ಮನೆ **ಅನ್ನೆಗಮ್** – ಅಷ್ಟರಲ್ಲಿ **ಕರುತ್ತು** – ಕೋಪಗೊಂಡು. **ನೆಗಳ್** – ಮಾಡು **ಅನುಬಲ** – ಬೆಂಬಲ ( ಸಹಾಯಕ ) **ಸಿಂಧುರ** – ಆನೆ. **ಬಾಷ್ಪವಾರಿ** – ಕಣ್ಣೀರು **ಮುತ್ತರ್** – ಮುದುಕರು.

➢ **ಇತರರ ಹೆಸರು**

**ಗಂಗೆಯಪೆರ್ಮಗ** – (ಗಾಂಗೇಯ) = ಭೀಷ್ಮ, **ಗಾಂಡೀವಿ** – ಅರ್ಜುನ **ಮಹೀಭುಜ** – ಧೃತರಾಷ್ಟ್ರ **ಘಟಸಂಭೂತ** – ದ್ರೋಣ **ಕುರುಕುಲನಂದನ** – ದುರ್ಯೋಧನ **ಪವನನಂದನ** – ಭೀಮ.

➢ **ತತ್ಸಮ– ತದ್ಭವಗಳು :**

1. **ಅಮೃತ** – ಅಮರ್ದು 2. **ಕಾರ್ಯ** – ಕಜ್ಜ 3. **ದೀವಿಗೆ** – ದೀಪಿಕಾ 4. **ಪುಣ್ಯ** – ಪುನ್ನೆ 5. **ಕಣಿ** – ಖನಿ(ಗಣಿ)

➢ **ವಿಭಕ್ತಿ ಪ್ರತ್ಯಯಗಳು :**

| ಉದಾಹರಣೆ | ಹಳೆಗನ್ನಡ ಪ್ರತ್ಯಯ | ಹೊಸಗನ್ನಡ ಪ್ರತ್ಯಯ | ವಿಭಕ್ತಿ ಹೆಸರು |
|---|---|---|---|
| 1. ಭೇದಮ್ | ಮ್ | ಉ | ಪ್ರಥಮ |
| 2. ಕಾರಕಮೆಂಬುದಂ | ಅಂ | ಅನ್ನು | ದ್ವಿತೀಯಾ |
| 3. ಘಟಸಂಭೂತಂಗೆ | ಗೆ | ಗೆ | ಚತುರ್ಥಿ |
| 4. ಗಂಗೆಯ | ಅ | ಅ | ಷಷ್ಠಿ |
| 5. ಗಾಂಡಿವಿಯೊಳ್ | ಒಳ್ | ಅಲ್ಲಿ | ಸಪ್ತಮಿ |

➢ **ಸಮಾಸ ಪದಗಳು**

1. **ಪೆರ್ಮಗ** = ಪಿರಿಯ (ಹಿರಿಯ ) + ಮಗ = ಕರ್ಮಧಾರಯಸಮಾಸ
2. **ಪೆರ್ಮರ** = ಪಿರಿಯ (ಹಿರಿಯ) + ಮರ = ಕರ್ಮಧಾರೆಯಸಮಾಸ
3. **ಮದಾಂಧ** = ಮದದಿಂದ + ಅಂಧ = ತತ್ಪುರುಷಸಮಾಸ
4. **ಘಟಸಂಭೂತ** = ಘಟ(ಗಡಿಗೆ)ದಲ್ಲಿ ಸಂಭವಿಸಿದವನು (ದ್ರೋಣ ) = ಬಹುವ್ರೀಹಿಸಮಾಸ
5. **ಗಾಂಡೀವಿ** = ಗಾಂಡೀವ ಎಂಬ ಧನುಸ್ಸನ್ನು ಹೊಂದಿರುವವನು (ಅರ್ಜುನ) = ಬಹುವ್ರೀಹಿಸಮಾಸ
6. **ಪವನನಂದನ** = ಪವನ(ವಾಯು)ನಿಗೆ ನಂದನನಾದವನು(ಮಗನಾದವನು) (ಭೀಮ) = ಬಹುವ್ರೀಹಿಸಮಾಸ

➢ **ಕೊಟ್ಟಿರುವ ಪದ್ಯದ ಸಾಲುಗಳಿಗೆ ಗಣ ವಿಭಾಗ ಮಾಡಿ ಪ್ರಸ್ತಾರ ಹಾಕಿ ಛಂದಸ್ಸಿನ್ನು ಹೆಸರಿಸಿ ಲಕ್ಷಣ ಬರೆಯಿರಿ**

| | ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|---|
| | **UU–** | **– U U** | **– U –** | **U U U** | **– – –** | **U – –** | **U –** |
| **1.** | ಎನಗಂ | ಪಾಂಡುಗ | ಮಿಲ್ಲ ಭೇ | ದ ಮಿಳೆ | ಯಂ ಪಜ್ಚಾ | ಳ್ವಮಾ ಪಾಂ | ಡುನಂ |

**ಛಂದಸ್ಸಿನ ಹೆಸರು :** ಇದು ಮತ್ತೇಭವಿಕ್ರೀಡಿತ ವೃತ್ತ

**ಲಕ್ಷಣ : ಪ್ರತಿ ಪಾದದಲ್ಲೂ 20 ಅಕ್ಷರಗಳಿರುತ್ತವೆ . ಅಕ್ಷರಗಳ ಸಂಖ್ಯೆ ಹಾಗೂ ಗಣಗಳು ಪ್ರತಿಪಾದವೂ ಸಮನಾಗಿರುತ್ತದೆ. ಪ್ರತಿ ಪಾದದ ಗಣವಿನ್ಯಾಸವು " ಸ,ಭ,ರ,ನ,ಮ,ಯ " ಹಾಗೂ ಒಂದು ಲಘು ಮತ್ತು ಒಂದು ಗುರುವಿನಿಂದ ಕೂಡಿರುತ್ತದೆ. ಜೊತೆಗೆ ಆದಿ ಪ್ರಾಸವಿರುತ್ತದೆ. – ಈ ನಿಯಮಕ್ಕೆ ಅನುಗುಣವಾಗಿರುವ ವೃತ್ತವೇ ಮತ್ತೇಭವಿಕ್ರೀಡಿತ.**

| | ನ | ಜ | ಭ | ಜ | ಜ | ಜ | ರ |
|---|---|---|---|---|---|---|---|
| | **U U U** | **U – U** | **– U U** | **U – U** | **U – U** | **U – U** | **– U –** |
| **2.** | ಕುರುಕು | ಳನಂದ | ನಂ ಪವ | ನನಂದ | ನನೆಂಬ | ಮದಾಂಧ | ಗಂಧಸಿಂ |

**ಛಂದಸ್ಸಿನ ಹೆಸರು :** ಚಂಪಕಮಾಲಾ ವೃತ್ತ

**ಲಕ್ಷಣ : ಪ್ರತಿ ಪಾದದಲ್ಲೂ 21 ಅಕ್ಷರಗಳಿರುತ್ತವೆ . ಅಕ್ಷರಗಳ ಸಂಖ್ಯೆ ಹಾಗೂ ಗಣಗಳು ಪ್ರತಿಪಾದವೂ ಸಮನಾಗಿರುತ್ತದೆ. ಪ್ರತಿ ಪಾದದ ಗಣವಿನ್ಯಾಸವು " ನ,ಜ,ಭ,ಜ,ಜ,ಜ,ರ " ದಿಂದ ಕೂಡಿರುತ್ತದೆ. ಜೊತೆಗೆ ಆದಿ ಪ್ರಾಸವಿರುತ್ತದೆ. – ಈ ನಿಯಮಕ್ಕೆ ಅನುಗುಣವಾಗಿರುವ ವೃತ್ತವೇ ಚಂಪಕಮಾಲಾವೃತ್ತ.**

## ಪದ್ಯ : 2. ಹಕ್ಕಿ ಹಾರುತಿದೆ ನೋಡಿದಿರಾ

– ದ.ರಾ.ಬೇಂದ್ರೆ

**ಕವಿ ಕಾವ್ಯ ಪರಿಚಯ :** ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರು, ಹಾಗೂ ಅಂಬಿಕಾತನಯದತ್ತ ಕಾವ್ಯನಾಮದಿಂದ ಪ್ರಖ್ಯಾತರಾದವರು ದ.ರಾ.ಬೇಂದ್ರೆಯವರು. ಇವರು ಧಾರವಾಡದವರು. ಕಾಲ ಕ್ರಿ.ಶ. ೧೮೯೬ (1896). ಗರಿ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಗಂಗಾವತರಣ, ಅರಳು–ಮರಳು ನಾಕುತಂತಿ ಮೊದಲಾದವು ಕೃತಿಗಳು. ಇವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

**ಒಂದು ವಾಕ್ಯದ ಪ್ರಶ್ನೆಗಳು**

1. ಹಕ್ಕಿ ಯಾವ ವೇಗದಲ್ಲಿ ಹಾರುತಿದೆ?
2. ಕಾಲಗತಿಯಿಂದ ಪ್ರತಿದಿನ ಆಗುವ ಬದಲಾವಣೆ ಏನು?
3. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?
4. ಪುಚ್ಚಗಳು ಯಾವ ಬಣ್ಣದಲ್ಲಿವೆ?
5. ಹಕ್ಕಿಯ ರೆಕ್ಕೆಗಳೆರಡೂ ಯಾವ ಬಣ್ಣದಲ್ಲಿವೆ?
6. ಹಕ್ಕಿಯ ಕಣ್ಣುಗಳು ಯಾವುವು?
7. ಹಕ್ಕಿಯು ಯಾವ ಸಮಬಣ್ಣವನ್ನು ಹೊಂದಿದೆ?
8. ಹಕ್ಕಿಯ ರೆಕ್ಕೆಗಳು ಯಾವುದಕ್ಕೆ ಹೊಡೆದಿವೆ?
9. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
10. ಕಾಲವೆಂಬ ಪಕ್ಷಿ ಯಾವುದನ್ನು ಮುಳುಗಿಸಿದೆ?
11. ಕಾಲವೆಂಬ ಪಕ್ಷಿ ಯಾವುದನ್ನು ಮುಕ್ಕಿದೆ?
12. ಕಾಲ ಯಾವುದರ ಹಣೆ ಬರಹವನ್ನು ಅಳಿಸಿ ಹಾಕುತ್ತದೆ.?
13. ಹಕ್ಕಿ ಯಾರನ್ನು ಹರಸಿದೆ ?
14. ಹಕ್ಕಿ ಯಾವುದರ ಸಂಕೇತವಾಗಿದೆ?
15. ಹಕ್ಕಿಯು ಏನನ್ನು ಸೆಕ್ಕಿಸಿಕೊಂಡು ಹಾರುತ್ತಿದೆ?
16. ಕಾಲವು ಯಾವುದರ ಭಾಗ್ಯವನ್ನು ತೆರೆಸಿದೆ?

**ಎರಡು ಅಂಕದ ಪ್ರಶ್ನೆಗಳು**

1. ಕವಿ ಹಕ್ಕಿಯ ಹಾರಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
2. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
3. ಕಾಲಪಕ್ಷಿಯ ಭೌತಿಕ ವರ್ಣನೆಯನ್ನು ಕವಿ ಹೇಗೆ ಮಾಡಿದ್ದಾರೆ?
4. ಕಾಲ ಪಕ್ಷಿಯ ಹಾರುವ ವೇಗವನ್ನು ಕವಿ ಹೇಗೆ ವರ್ಣಿಸಿದ್ದಾರೆ?
5. ಕಾಲಪಕ್ಷಿ ಯಾವುದೆನ್ನೆಲ್ಲಾ ನಾಶ ಮಾಡಿಕೊಂಡು ಮುನ್ನಡೆಯುತ್ತದೆ ಎಂದು ಕವಿ ವರ್ಣಿಸಿದ್ದಾರೆ?

**ಸಂದರ್ಭದೊಂದಿಗೆ ಸ್ವಾರಸ್ಯವನ್ನು ಬರೆಯಿರಿ :**

1. " ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ"
2. "ಸಾರ್ವಭೌಮರಾ ನೆತ್ತಿಯ ಕುಕ್ಕಿ"
3. "ಮನ್ವಂತರಗಳ ಭಾಗ್ಯವ ತೆರೆಸಿ".
4. "ಹೊಸಗಾಲದ ಹಸುಮಕ್ಕಳ ಹರಸಿ"

**ಕಂಠಪಾಠದ ಪದ್ಯಗಳು :**

ನೀಲಮೇಘ ಮಂಡಲ–ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ– ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ ?

ಯುಗ – ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ ?

## ಭಾಗ - ಬಿ

**ಬಹುಆಯ್ಕೆ ಪ್ರಶ್ನೆಗಳು;-**

**1. 'ಸೂರ್ಯ' ಇದರ ಸಮಾನಾರ್ಥಕ ಪದ :**
ಅ) ಚಂದ್ರ ಆ) ಆಕಾಶ ಇ) ನೇಸರ ಈ) ಭೂಮಿ

**2. 'ಕೆನ್ನ' ಇದರ ಸಮಾನಾರ್ಥಕ ರೂಪ :**
ಅ) ಚಿನ್ನ ಆ) ಚೆನ್ನ ಇ) ಹಳದಿ ಈ) ಕೆಂಪು

**3. 'ಹಕ್ಕಿ' ಇದರ ತತ್ಸಮ ರೂಪ :**
ಅ) ಪ್ರಾಣಿ ಆ) ಪಕ್ಷಿ ಇ) ಗಿಳಿ ಈ) ಪಂಜರ

**4. 'ಹೊಸಗಾಲ' ಪದದಲ್ಲಿರುವ ಸಂಧಿ :**
ಅ) ಲೋಪಸಂಧಿ ಆ) ಆದೇಶಸಂಧಿ ಇ) ಆಗಮಸಂಧಿ ಈ) ಗುಣಸಂಧಿ

**5. 'ತೆರೆದಿಕ್ಕುವ' ಪದದಲ್ಲಿರುವ ಸಂಧಿ :**
ಅ) ಯಣ್‌ಸಂಧಿ ಆ) ಗುಣಸಂಧಿ ಇ) ಲೋಪಸಂಧಿ ಈ) ಆದೇಶಸಂಧಿ

**6. 'ಇರುಳಿರುಳಳಿದು' ಪದದಲ್ಲಿರುವ ವ್ಯಾಕರಣಾಂಶ :**
ಅ) ಜೋಡಿಪದ ಆ) ಅನುಕರಣಾವ್ಯಯ ಇ) ದ್ವಿರುಕ್ತಿ ಈ) ಸಮಾರ್ಥಕಪದ

**7. ನಾಮಪದ ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪ ಭೇದ ಹೊಂದದೆ ಏಕರೂಪವಾಗಿರುವ ಪದಗಳೇ**
ಅ) ಕ್ರಿಯಾಪದಗಳು ಆ) ಕೃದಂತಗಳು ಇ) ದ್ವಿರುಕ್ತಿಗಳು ಈ) ಅವ್ಯಯಗಳು

**8. ' ಮೆಲ್ಲಗೆ ' ಇದು ಈ ಅವ್ಯಯ ಪದವಾಗಿದೆ :**
ಅ) ಸಾಮಾನ್ಯ ಆ) ಅನುಕರಣ ಇ) ಭಾವಸೂಚಕ ಈ) ಸಂಬಂಧಾರ್ಥಕ

**9. ಧಗಧಗ, ಕರಕರ, ರೊಯ್ಯನೆ , ದಡದಡ ಇವು ಈ ಅವ್ಯಯಕ್ಕೆ ಉದಾಹರಣೆಗಳು :**
ಅ) ಭಾವಸೂಚಕ ಆ) ಸಾಮಾನ್ಯ ಇ) ಅನುಕರಣ ಈ) ಸಂಬಂಧಾರ್ಥಕ

**10. ಆಹಾ! ಅಯ್ಯೋ! ಓಹೋ! ಭಲರೆ! – ಇವು ಈ ಅವ್ಯಯಕ್ಕೆ ಉದಾಹರಣೆಗಳು :**
ಅ) ಸಾಮಾನ್ಯ ಆ) ಸಂಬಂಧಾರ್ಥಕ ಇ) ಭಾವಸೂಚಕ ಈ) ಅನುಕರಣ

**11. ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ – ಇಲ್ಲಿರುವ ಅಲಂಕಾರ :**
ಅ) ಉಪಮ ಆ) ಉತ್ಪ್ರೇಕ್ಷೆ ಇ) ರೂಪಕ ಈ) ದೃಷ್ಟಾಂತ

**12. 'ಸೂರ್ಯಚಂದ್ರರು' – ಇಲ್ಲಿರುವ ಸಮಾಸ :**
ಅ) ತತ್ಪುರುಷಸಮಾಸ ಆ) ದ್ವಂದ್ವಸಮಾಸ ಇ) ದ್ವಿಗುಸಮಾಸ ಈ) ಗಮಕಸಮಾಸ

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

1. ಧಗಧಗ : ಅನುಕರಣಾವ್ಯಯ : : ನೆರೆಹೊರೆ : ______________
2. ಗಡ : ಸಣ್ಣಕೋಟೆ : : ಎವೆ : ______________
3. ಹೊಸಗಾಲ : ಆದೇಶ ಸಂಧಿ : : ಮನ್ವಂತರ : ______________
4. ಖಂಡಖಂಡ : ದ್ವಿರುಕ್ತಿ : : ಸುತ್ತಮುತ್ತ : ______________
5. ಸಾಕು : ಕ್ರಿಯಾರ್ಥಕ ಅವ್ಯಯ : : ಅವನೇ : ______________
6. ಅವನು : ಏಕವಚನ : : ಅವರು : ______________
7. ರೆಕ್ಕೆಯ : ಷಷ್ಠಿವಿಭಕ್ತಿ : : ಮಕ್ಕಳನ್ನು : ______________

**ಉತ್ತರಗಳು: 1. ಇ) ನೇಸರ . 2 .ಈ) ಕೆಂಪು 3. ಆ) ಪಕ್ಷಿ. 4. ಆ) ಆದೇಶಸಂಧಿ 5. ಇ)ಲೋಪಸಂಧಿ 6. ಇ) ದ್ವಿರುಕ್ತಿ 7. ಈ) ಅವ್ಯಯಗಳು 8. ಅ)ಸಾಮಾನ್ಯಾವ್ಯಯ 9. ಇ) ಅನುಕರಣಾವ್ಯಯ 10. ಇ) ಭಾವಸೂಚಕಾವ್ಯಯ 11. ಆ) ಉತ್ಪ್ರೇಕ್ಷೆ 12. ಆ) ದ್ವಂದ್ವಸಮಾಸ .**

**ಉತ್ತರಗಳು : 1) ಜೋಡಿಪದ 2) ಕಣ್ಣರೆಪ್ಪೆ 3) ಯಣ್‌ಸಂಧಿ 4) ಜೋಡಿಪದ 5) ಅವಧಾರಣಾರ್ಥಕಾವ್ಯಯ 6) ಬಹುವಚನ 7) ದ್ವಿತೀಯ ವಿಭಕ್ತಿ**

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಕಣ್ಣು ಮುಚ್ಚಿ ಬಿಡುವ ವೇಗದಲ್ಲಿ ಹಕ್ಕಿಹಾರುತಿದೆ.
2. ಹಗಲು ಮತ್ತು ರಾತ್ರಿಗಳೇ ಪ್ರತಿದಿನ ಆಗುವ ಬದಲಾವಣೆಗಳು.
3. ಬಿಳಿ–ಹೊಳೆ ಬಣ್ಣದ ಗರಿಗಳುಂಟು.
4. ಕರಿ ನರೆ ಬಣ್ಣದಲ್ಲಿ ಪುಚ್ಚಗಳಿವೆ.
5. ಕೆಂಪು–ಹಳದಿ ಬಣ್ಣದಲ್ಲಿ ಹಕ್ಕಿಯ ರೆಕ್ಕೆಗಳಿವೆ.
6. ಹಕ್ಕಿಯ ಕಣ್ಣುಗಳು 'ಸೂರ್ಯ–ಚಂದ್ರ'
7. ನೀಲ–ಮೇಘ ಮಂಡಲದ ಸಮ ಬಣ್ಣವನ್ನು ಹೊಂದಿದೆ.
8. ಹಕ್ಕಿಯ ರೆಕ್ಕೆಗಳು ಮುಗಿಲಿಗೆ ಹೊಡೆದಿವೆ.
9. ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.
10. ಕಾಲವೆಂಬ ಪಕ್ಷಿ ಖಂಡ–ಖಂಡಗಳನ್ನು ಮುಳುಗಿಸಿದೆ.
11. ಕಾಲವೆಂಬಪಕ್ಷಿ ಮಂಡಲ–ಗಿಂಡಲಗಳ ಮುಕ್ಕಿದೆ.
12. ಕಾಲ ಯುಗ –ಯುಗಗಳ ಹಣೆ ಬರಹವನ್ನು ಅಳಿಸಿ ಹಾಕುತ್ತದೆ.
13. ಹಕ್ಕಿ ಹೊಸಗಾಲದ ಹಸು ಮಕ್ಕಳನ್ನು ಹರಸಿದೆ.
14. ಹಕ್ಕಿ ಕಾಲದ ಸಂಕೇತವಾಗಿದೆ.
15. ಹಕ್ಕಿಯು ಚಿಕ್ಕಿಯ ಮಾಲೆಯನ್ನು ಸೆಕ್ಕಿಸಿಕೊಂಡು ಹಾರುತ್ತದೆ.
16. ಕಾಲವು ಮನ್ವಂತರಗಳ ಭಾಗ್ಯವನ್ನು ತೆರೆಸಿದೆ.

**ಎರಡು –ಮೂರು ವಾಕ್ಯದ ಪ್ರಶ್ನೆಗಳು**

1. ಕಾಲವೆಂಬ ಪಕ್ಷಿ ನೀಲಿ ಬಣ್ಣದ ಆಕಾಶಕ್ಕೆ ಸಮನಾಗಿ, ಸೂರ್ಯ ಚಂದ್ರರನ್ನೇ ಕಣ್ಣನ್ನಾಗಿಸಿಕೊಂಡು, ನಕ್ಷತ್ರಪುಂಜಗಳನ್ನೇ ಮಾಲೆಯನ್ನಾಗಿ ಸೆಕ್ಕಿಸಿಕೊಂಡು, ಮುಗಿಲಿನಲ್ಲಿ ತನ್ನ ಎರಡೂ ರೆಕ್ಕೆಗಳನ್ನು ಬಡಿಯುತ್ತ ಸ್ವಚ್ಛಂದವಾಗಿ ಹಾರುತ್ತಿದೆ ಎಂದು ವರ್ಣಿಸಿದ್ದಾರೆ.
2. ಯುಗ ಯುಗಗಳ ಹಣೆ ಬರಹವನ್ನು ಅಳಿಸಿ ಹಾಕಿ, ಪರಿವರ್ತನೆಯಮೂಲಕ ಹೊಸ ಭಾಗ್ಯೋದಯ ವಾಗುವಂತೆ ಮಾಡಿ, ರೆಕ್ಕೆಯನ್ನು ಬೀಸುತ್ತ ನವಯುಗದ ನಾಗರಿಕರನ್ನು ಚೈತನ್ಯಯುಕ್ತರನ್ನಾಗಿಸಿ ಮಕ್ಕಳನ್ನು ಹರಸಿದೆ.
3. ಕಪ್ಪು ಮತ್ತು ಬಿಳಿ ಬಣ್ಣದ ಪುಕ್ಕಗಳನ್ನು, ಬೆಳ್ಳಗೆ ಹೊಳೆಯುವಂತಹ ಗರಿಗಳನ್ನು, ಕೆಂಪಾದ ಮತ್ತು ಬಂಗಾರದ ಬಣ್ಣದ ರೆಕ್ಕೆಗಳನ್ನು ಹೊಂದಿದೆ – ಎಂದು ಕವಿ ವರ್ಣಿಸಿದ್ದಾರೆ.
4. ರಾತ್ರಿಗಳು ಉರುಳಿ ಬೆಳಗಾಗುವುದರೊಳಗಾಗಿ ಸುತ್ತಮುತ್ತ, ಮೇಲೆ ಕೆಳಗೆ, ಮೈಲು ಮೈಲುಗಳ ವೇಗದಲ್ಲಿ ಕಣ್ಣು ಮುಚ್ಚಿ ತೆರೆಯುವುದರ ಒಳಗಾಗಿ ಹಕ್ಕಿ ವೇಗವಾಗಿ ಹಾರುತ್ತಿದೆ ಎಂದು ವರ್ಣಿಸಿದ್ದಾರೆ.
5. ರಾಜ್ಯ ಸಾಮ್ರಾಜ್ಯವನ್ನು ಆಳ್ವಿಕೆ ಮಾಡುವ ಮಂಡಲಾಧಿಪತಿಗಳನ್ನು ತೆನೆಯಿಂದ ಕಸ ಕಡ್ಡಿಗಳನ್ನು ಬೇರ್ಪಡಿಸು ವಂತೆ ಬೇರ್ಪಡಿಸಿ, ಭೂಮಂಡಲದ ಮೇಲೆ ಇರುವ ಕೋಟೆ–ಕೊತ್ತಲಗಳನ್ನು ಗಬಗಬನೆ ತಿಂದು, ಖಂಡ–ಖಂಡ ಗಳನ್ನೆಲ್ಲ ತೇಲಿಸಿ ಮುಳುಗಿಸಿ ಸಾರ್ವಭೌಮರ ನೆತ್ತಿಯನ್ನು ಕುಕ್ಕುವುದರ ಮೂಲಕ ಕಾಲವೆಂಬ ಪಕ್ಷಿಯು ಮುನ್ನುಗ್ಗುತ್ತಿದೆ.

**<u>ಸಂದರ್ಭಸಹಿತ ವಿವರಿಸಿ;–</u>**

ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆ ರಚಿಸಿರುವ 'ಗರಿ' ಎಂಬ ಕವನ ಸಂಕಲನದಿಂದ ಆಯ್ದ ' ಹಕ್ಕಿ ಹಾರುತಿದೆ ನೋಡಿದಿರಾ'ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮೇಲಿನ ವಾಕ್ಯವು ಕಾಲಕ್ಕೆ ಇಡೀ ಭೂಮಂಡಲವನ್ನು ಸರ್ವನಾಶ ಮಾಡುವ ಶಕ್ತಿ ಇದೆ ಎಂದು ಹೇಳುವ ಸಂದರ್ಭದಲ್ಲಿ ಬರುತ್ತದೆ. ರಾಜ್ಯ ಸಾಮ್ರಾಜ್ಯದ ಅಳ್ವಿಕೆ ಮಾಡುವ ಮಂಡಲಾಧಿಪತಿಗಳನ್ನು ತೆನೆಯಿಂದ ಕಸಕಡ್ಡಿಗಳನ್ನು ಬೇರ್ಪಡಿಸುವಂತೆ ಕಾಲವೆಂಬ ಪಕ್ಷಿಯು ಬೇರ್ಪಡಿಸಿ, ಭೂಮಂಡಲದ ಮೇಲಿರುವ ಕೋಟೆ–ಕೊತ್ತಲಗಳನ್ನು ಗಬಗಬನೆ ತಿಂದು ಮುಕ್ಕುತ್ತದೆ ಎಂದು ಕಾಲಗತಿಯನ್ನು ವಿವರಿಸುವ ಸಂದರ್ಭದ ಸ್ವಾರಸ್ಯವಿದು.

## ' ಹಕ್ಕಿಹಾರುತಿದೆ ನೋಡಿದಿರಾ ' – ಪದ್ಯದ ವ್ಯಾಕರಣಾಂಶಗಳು :

➢ **ಪದಗಳ ಅರ್ಥ :**

**ನರೆ** – ಬಿಳಿಬಣ್ಣ , **ಹೊನ್ನ**– ಹಳದಿ, **ಮಂಡಲ** – ಭೂಮಂಡಲ , **ಪುಚ್ಛ** – ರೆಕ್ಕೆ, ಪುಕ್ಕ.
**ಮನ್ವಂತರ** –ಪರಿವರ್ತನೆಯ ಕಾಲ. **ಎವೆ** – ಕಣ್ಣ ರೆಪ್ಪೆ

➢ **ಸಮಾನಾರ್ಥಕ ಪದಗಳು :**

**ಸೂರ್ಯ** – ರವಿ, ಭಾನು, ಬಾಸ್ಕರ. **ಎದೆ** – ಹೃದಯ, **ಮೇಘ** – ಮೋಡ **ಗಡ** – ಸಣ್ಣಕೋಟೆ.
**ಹರಸು** – ಆಶೀರ್ವದಿಸು. **ಒಕ್ಕಿ** – ತೆನೆಯಿಂದ ಕಸಕಡ್ಡಿ ಬೇರ್ಪಡಿಸು. **ಕೆನ್ನ** – ಕೆಂಪು

➢ **ತತ್ಸಮ –ತದ್ಭವಗಳು :**

**ಪಕ್ಷಿ(ನ್)** – ಪಕ್ಕಿ/ಹಕ್ಕಿ, **ಬ್ರಹ್ಮ** – ಬೊಮ್ಮ, **ಚಂದ್ರ** – ಚಂದಿರ, **ವರ್ಣ** – ಬಣ್ಣ,
**ಮಂಡಲ** – ಮಂಡಳ, **ಯುಗ** – ಜುಗ, **ಕಾವ್ಯ** – ಕಬ್ಬ, **ಧ್ವನಿ** – ದನಿ, **ಮಾಲಾ** – ಮಾಲೆ.

➢ **ಸಂಧಿ ಪದಗಳು :**

1. **ಇರುಳಳಿದು** – ಇರುಳು+ ಅಳಿದು = ಲೋಪಸಂಧಿ ('ಉ'ಕಾರ ಲೋಪ)
2. **ತೆರೆದಿಕ್ಕುವ** – ತೆರೆದು+ ಇಕ್ಕುವ = ಲೋಪಸಂಧಿ, ('ಉ'ಕಾರ ಲೋಪ)
3. **ಹೊಸಗಾಲ** – ಹೊಸ+ ಕಾಲ = ಆದೇಶಸಂಧಿ
4. **ಗರಿಯುಂಟು** – ಗರಿ +ಉಂಟು = ಆಗಮಸಂಧಿ ('ಯ' ಕಾರಾಗಮ)
5. **ಮನ್ವಂತರ** – ಮನು +ಅಂತರ = ಯಣ್ ಸಂಧಿ
6. **ಇರುಳಿರುಳು** – ಇರುಳು+ಇರುಳು = ಲೋಪಸಂಧಿ, ('ಉ'ಕಾರ ಲೋಪ)

➢ **ದ್ವಿರುಕ್ತಿಗಳು :**

ದಿನದಿನ, ಇರುಳಿರುಳು, ಗಾವುದ ಗಾವುದ, ಬಣ್ಣಬಣ್ಣ , ಯುಗಯುಗ

➢ **ವ್ಯಾಕರಣಾಂಶಗಳು (ಅವ್ಯಯಗಳು) :**

❖ **ಸಾಮಾನ್ಯಾವ್ಯಯಗಳು** :– ಬೇಗನೆ, ಮೆಲ್ಲಗೆ, ಸೊಗಸಾಗಿ, ಸುಮ್ಮನೆ, ತಟ್ಟನೆ, ತರುವಾಯ, ಹಾಗೆ, ಅಂತು, ಬೇರೆ, ಬಳಿಕ, ಕೂಡಲೆ, ಚೆನ್ನಾಗಿ.

❖ **ಅನುಕರಣಾವ್ಯಯ** :– ಚಟಚಟ, ಕರಕರ, ಚುರುಚುರು, ಧಗಧಗ, ರೊಯ್ಯನೆ, ಸುಯ್ಯನೆ, ಘುಳುಘುಳು, ದಡದಡ.

❖ **ಭಾವಸೂಚಕಾವ್ಯಯ** :– ಆಹಾ! ಭಳಿರೆ! ಅಯ್ಯೋ! ಹೋ.! ಆಃ!, ಓ!

❖ **ಕ್ರಿಯಾರ್ಥಕಾವ್ಯಯ** :– ಅಹುದು, ಸಾಕು, ಅಲ್ಲ, ಹೌದು, ಬೇಡ, ಉಂಟು.

❖ **ಸಂಬಂಧಾರ್ಥಕಾವ್ಯಯ** :– ಮತ್ತು, ಅಥವಾ, ಆದ್ದರಿಂದ, ಊ,ಊಂ, ಅಲ್ಲದೆ.

❖ **ಅವಧಾರಣಾರ್ಥಕಾವ್ಯಯ** :– ಅವನೇ, ಅದುವೇ, ನೀನೇ, ಅವಳೇ, ಅವರೇ.

## ಪದ್ಯಭಾಗ : 3. ಹಲಗಲಿಯ ಬೇಡರು ( ಕಥನಗೀತೆ )

– ಜನಪದ ಸಾಹಿತ್ಯ

**ಕೃತಿ ಪರಿಚಯ :** ಇದು ಜನಪದ ಸಾಹಿತ್ಯದ ವಿಶಿಷ್ಟ ಪ್ರಕಾರಗಳಲ್ಲಿ ಒಂದಾದ ಲಾವಣಿಯಾಗಿದೆ. ಲಾವಣಿಗಳು ವೀರತನ ಸಾಹಸವನ್ನು ವರ್ಣಿಸುವುದರಿಂದ ವೀರಗೀತೆಗಳೆಂದೂ ಸಹ ಕರೆಯುತ್ತಾರೆ. ಲಾವಣಿಗಳು ಗದ್ಯದ ಹೊಳಪನ್ನು ಹಾಗೂ ಭಾವಗೀತೆಯ ಸತ್ವವನ್ನು ಒಳಗೊಂಡಿವೆ. ಪ್ರಸ್ತುತ ಲಾವಣಿಯನ್ನು ಡಾ॥ ಗದ್ದಗಿಮಠರವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು '** ಕೃತಿಯಿಂದ ಆಯ್ಕೆಮಾಡಿಕೊಳ್ಳಲಾಗಿದೆ.

### ಭಾಗ – ಎ

**ಒಂದು ಅಂಕದ ಪ್ರಶ್ನೆಗಳು**

1. ಹಲಗಲಿಗೆ ಕುದುರೆ ಮಂದಿ ಬರಲು ಕಾರಣವೇನು ?
2. ಶಿಷ್ಟ ಸಾಹಿತ್ಯಕ್ಕೆ ಯಾವ ಸಾಹಿತ್ಯವು ಮೂಲ ಪ್ರೇರಣೆಯಾಗಿದೆ ?
3. ಐತಿಹಾಸಿಕ ವಿವರಗಳನ್ನು ಅಭಿವ್ಯಕ್ತಿಸುವಲ್ಲಿ ಯಾವುದಕ್ಕೆ ಪ್ರಮುಖ ಸ್ಥಾನವಿದೆ ?
4. ಕುಂಪಣಿ ಸರ್ಕಾರ ಹೊರಡಿಸಿದ ಆದೇಶವೇನು ?
5. ಹಲಗಲಿಯ ನಾಲ್ವರು ಪ್ರಮುಖರು ಯಾರು ?
6. ಹಲಗಲಿ ಗುರುತು ಉಳಿಯದಂತಾದುದು ಏಕೆ ?
7. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ ?
8. ಹಲಗಲಿ ಬೇಡರು ಬ್ರಿಟೀಷರ ಯಾವ ಕಾಯ್ದೆಯನ್ನು ವಿರೋಧಿಸಿದರು ?
9. ಹಲಗಲಿ ಗ್ರಾಮ ಎಲ್ಲಿದೆ ?
10. ಹಲಗಲಿಯ ಜನರಿಗೆ ಬುದ್ಧಿಮಾತನ್ನು ಯಾರು ಹೇಳಿದರು ?
11. ಸೈನಿಕರು ಹಲಗಲಿಯ ಊರಿಗೆ ಏನು ಮಾಡಿದರು ?
12. ಅಗಸಿಗೆ ಬಂದ ಹೆಬಲಕ ಸಾಹೇಬ ಯಾವ ಮಾತು ಹೇಳಿದ ?
13. ಹಲಗಲಿಯು ಯಾವ ಸಂಸ್ಥಾನಕ್ಕೆ ಸೇರಿತ್ತು ?
14. ಹಲಗಲಿಯ ಭಂಟರ ಕದನ ಯಾವ ರಸ ಪ್ರಧಾನವಾದ ಲಾವಣಿ ?
15. ಲಾವಣಿಕಾರ ಅಂಕಿತಗೊಳಿಸಿರುವ ದೈವ ಯಾರು ?
16. ಪ್ರಥಮ ಸ್ವತಂತ್ರ ಸಂಗ್ರಾಮ ನಡೆದದ್ದು ಯಾವಾಗ ?
17. ಬೆಂಕಿ ಚೂರಾದ ಬ್ರಿಟೀಷ್ ಅಧಿಕಾರಿ ಯಾರು ?
18. ಹಲಗಲಿ ಬೇಡರಿಂದ ಹತ್ಯೆಗೊಳಗಾದ ಬ್ರಿಟೀಷ್ ಅಧಿಕಾರಿ ಯಾರು ?
19. ಒಳಗಿನ ಮಂದಿ ಗುಂಡನ್ನು ಹೇಗೆ ಹೊಡೆದರೆಂದು ವರ್ಣಿಸಲಾಗಿದೆ ?
20. ಬ್ಯಾಡರೆಲ್ಲ ಕಲೆತು ಏನೆಂದು ವಚನ ಕೊಟ್ಟರು ?

**ಎರಡು ಅಂಕದ ಪ್ರಶ್ನೆಗಳು**

1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?
2. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗುತ್ತದೆ ?
3. ಹಲಗಲಿಗೆ ದಂಡು ಬರಲು ಕಾರಣವೇನು ?
4. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?
5. ಹೆಬಲಕ ಸಾಹೇಬನ ಬುದ್ಧಿಮಾತಿಗೆ ಜಡಗ ಏನೆಂದು ಹೇಳುತ್ತಾನೆ ?
6. ಕಂಪನಿಯ ಸೈನಿಕರು ಹಲಗಲಿಯಲ್ಲಿ ಏನನ್ನೆಲ್ಲ ದೋಚಿದರು ?

**ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ.**

1. " ಎಲ್ಲ ಜನರಿಗೆ ಚೋರ ಮಾಡಿ ಕಸಿದು ಕೊಳ್ಳಿರಿ ಹತಾರ "
2. " ಜೀವ ಸತ್ತು ಹೋಗುವದು ಗೊತ್ತ "
3. " ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ "
4. " ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು "

## ಭಾಗ – ಬಿ

**ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸೂಕ್ತವಾದ ಉತ್ತರವನ್ನು ಆಯ್ದು ಬರೆಯಿರಿ**

**1. 'ವಿಲಾತಿ' ಪದದ ಸಮಾರ್ಥಕ ಪದ :**
ಎ) ಆಯುಧ ಬಿ) ವಿಹಾರ ಸಿ) ವಿಲಂತಿ ಡಿ) ವಿಲಾಯಿತಿ.

**2. ' ಸಕ್ಕರೆ ' ಪದದ ತದ್ಭವರೂಪ :**
ಎ) ಸಂಕರೆ ಬಿ) ಶರ್ಕರಾ ಸಿ) ಶಬ್ದ ಡಿ) ಸಂಬಂಧ

**3. ' ಚಟೇಕಾರ ' – ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :**
ಎ) ಕೃದಂತನಾಮ ಬಿ) ಅವ್ಯಯ ಸಿ) ನಾಮಪದ ಡಿ) ತದ್ಧಿತಾಂತನಾಮ.

**4. 'ಮಂಗಳಸೂತ್ರ ' – ಪದವು ಈ ಸಮಾಸಕ್ಕೆ ಉದಾಹರಣೆ :**
ಎ) ದ್ವಿಗುಸಮಾಸ ಬಿ) ಅಂಶಿಸಮಾಸ ಸಿ) ತತ್ಪುರುಷಸಮಾಸ ಡಿ) ದ್ವಂದ್ವಸಮಾಸ

**5. ' ಗುಡದಾಗ ' ಪದದ ಗ್ರಾಂಥಿಕ ರೂಪ :**
ಎ) ಗುಡ್ಡದಲ್ಲಿ ಬಿ) ಗುಡ್ಡದಮೇಲೆ ಸಿ) ಗುಡ್ಡದೊಳಗೆ ಡಿ) ಗುಡ್ಡದಕೆಳಗೆ

**6. ' ನಡುರಾತ್ರಿ ' ಪದವು ಈ ಸಮಾಸವಾಗಿದೆ :**
ಎ) ಗಮಕಸಮಾಸ ಬಿ) ಅಂಶಿಸಮಾಸ ಸಿ) ತತ್ಪುರುಷಸಮಾಸ ಡಿ) ಕರ್ಮಧಾರೆಯಸಮಾಸ

**7. ' ಕಬುಲ ' ಪದದ ಅರ್ಥ :**
ಎ) ಕಪ್ಪಕಾಣಿಕೆ ಬಿ) ಅನುಮತಿ ಸಿ) ಪಿತೂರಿ ಡಿ) ಸೈನ್ಯ

**8. 'ವಿದ್ಯಾಧರ ' ಪದದ ತದ್ಭವ ರೂಪ :**
ಎ) ವಿದ್ಯಾವಂತ ಬಿ) ಬುದ್ಧಿವಂತ ಸಿ) ಬಿಜ್ಜೋದರ ಡಿ) ವಿದ್ಯೆಹೀನ

**9. 'ಅಂಕುಶ' ಪದದ ತತ್ಸಮ ರೂಪವಿದು :**
ಎ) ಅಂಕುಸ ಬಿ) ಅಂಕಶ ಸಿ) ಶೂಲ ಡಿ) ಬರ್ಜಿ

**10. ' ದಮ್ಮಡಿ ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ.**
ಎ) ಗ್ರೀಕ್ ಮತ್ತು ರೋಮನ್ ಬಿ) ಉರ್ದು ಸಿ) ಹಿಂದೂಸ್ಥಾನಿ ಡಿ) ಪರ್ಷಿಯನ್

**11. ' ಅಬಕಾರಿ ' ಪದವು ಈ ಭಾಷೆಯ ಪದವಾಗಿದೆ :**
ಎ) ಹಿಂದೂಸ್ಥಾನಿ ಬಿ) ಫಾರ್ಸಿ ಸಿ) ಪೋರ್ಚಗೀಸ್ ಡಿ) ಅರಬ್ಬೀ

**12. ' ಹುಕುಂ ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ :**
ಎ) ಇಂಗ್ಲೀಷ್ ಬಿ) ಪರ್ಷಿಯನ್ ಸಿ) ಹಿಂದೂಸ್ಥಾನಿ ಡಿ) ಉರ್ದು

**13. ' ಬಂದೂಕು ' ಪದವು ಈ ಭಾಷೆಯ ಶಬ್ದವಾಗಿದೆ :**
ಎ) ಉರ್ದು ಬಿ) ಪರ್ಷಿಯನ್ ಸಿ) ಅರಬ್ಬೀ ಡಿ) ಹಿಂದೂಸ್ಥಾನಿ

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ :**

1. ನಾನು – ನೀನು : ಸರ್ವನಾಮಗಳು : : ತಿನ್ನು – ಹೋಗು : ______________
2. ದರ್ಬಾರು : ಹಿಂದೂಸ್ಥಾನಿ : : ಅನಾನಸು : ______________
3. ದೀನಾರ : ಗ್ರೀಕ್ : : ಕಾಲೇಜು : ______________
4. ಕಲಶ : ಕಳಸ : : ಶಿರ : ______________
5. ಪಾದುಕಾ : ಹಾವುಗೆ : : ವೈಶಾಖ : ______________
6. ಕಳುವಾರೆ : ಕಳುಹಿಸಿದ್ದಾರೆ : : ಇಸವಾಸ : ______________
7. ಹತಾರ : ದೇಶಿಯ ಪದ : : ಸಾಹೇಬ : ______________
8. ಮುಂಗೈ : ಅಂಶಿಸಮಾಸ : : ಮೋಸಮಾಡು : ______________
9. ಕಾರಕೂನ : ಗುಮಸ್ತ : : ಅಗಸಿ : ______________

**ಉತ್ತರಗಳು : 1. ಡಿ.ವಿಲಾಯಿತಿ 2. ಬಿ. ಶರ್ಕರಾ 3. ಡಿ. ತದ್ಧಿತಾಂತನಾಮ 4. ಸಿ. ತತ್ಪುರುಸಮಾಸ 5. ಎ. ಗುಡ್ಡದಲ್ಲಿ 6. ಬಿ.ಅಂಶಿಸಮಾಸ 7. ಬಿ.ಅನುಮತಿ 8. ಸಿ. ಬಿಜ್ಜೋದರ 9. ಎ.ಅಂಕುಸ 10. ಗ್ರೀಕ್ ಮತ್ತು ರೋಮನ್ 11. ಬಿ. ಫಾರ್ಸಿ 12. ಸಿ) ಹಿಂದೂಸ್ಥಾನಿ 13. ಎ. ಉರ್ದು**

**ಉತ್ತರಗಳು : 1. ಧಾತುಗಳು 2. ಪೋರ್ಚುಗೀಸ್ 3. ಇಂಗ್ಲೀಷ್ 4. ಸಿರ 5. ಬೇಸಗೆ 6. ವಿಶ್ವಾಸ 7. ಅನ್ಯದೇಶಿಯಪದ 8. ಕ್ರಿಯಾಸಮಾಸ 9. ಹೆಬ್ಬಾಗಿಲು**

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ಹಲಗಲಿಯಲ್ಲಿ ಆಯುಧವನ್ನು ವಶಪಡಿಸಿಕೊಳ್ಳಲು ಬಂದ ಸಿಪಾಯಿಯು ಸತ್ತನೆಂದು ಕೇಳಿದ ಅಧಿಕಾರಿಯು ಅಲ್ಲಿಗೆ ಕುದುರೆ ಮಂದಿಯನ್ನು ಕಳಿಸಿದನು.
2. ಶಿಷ್ಟ ಸಾಹಿತ್ಯಕ್ಕೆ 'ಜನಪದ ಸಾಹಿತ್ಯವೇ' ಮೂಲ ಪ್ರೇರಣೆಯಾಗಿದೆ.
3. ಐತಿಹಾಸಿಕ ವಿವರಗಳನ್ನು ಅಭಿವ್ಯಕ್ತಿಸುವಲ್ಲಿ ಲಾವಣಿಗಳಿಗೆ ಪ್ರಮುಖ ಸ್ಥಾನವಿದೆ.
4. ದೇಶೀಯ ಜನರ ಹತ್ತಿರವಿರುವ ಆಯುಧಗಳನ್ನು ಹೆದರಿಸಿ ಕಸಿದುಕೊಳ್ಳಿರಿ ಎಂದು ಕುಂಪಣಿ ಸರ್ಕಾರ ಆದೇಶವನ್ನು ಹೊರಡಿಸಿತು.
5. ಪೂಜಾರಿ ಹನುಮ, ಬೇಡರ ಬಾಲ, ಜಡಗ, ರಾಮ ಇವರು ಹಲಗಲಿಯ ನಾಲ್ವರು ಪ್ರಮುಖರು.
6. ಕುಂಪಣಿ ಸರ್ಕಾರದ ಸೈನಿಕರು ಹಲಗಲಿಯನ್ನು ಲೂಟಿ ಮಾಡಿ ಬೆಂಕಿಹಚ್ಚಿ ಸುಟ್ಟು ಊರಿನ ಗುರುತು ಉಳಿಯದಂತೆ ಮಾಡಿದರು.
7. ಹಲಗಲಿಯ ನಾಲ್ವರು ವೀರರು ಕಂಪನಿಯ ಸರ್ಕಾರದ ದೌರ್ಜನ್ಯವನ್ನು ವಿರೋಧಿಸಿ ಹುತಾತ್ಮರಾದ ಘಟನೆಯೇ ಹಲಗಲಿ ಲಾವಣಿಗೆ ಕಾರಣವಾಗಿದೆ.
8. ಹಲಗಲಿಯ ಬೇಡರು ಬ್ರಿಟಿಷರ 'ನಿಶ್ಯಸ್ತ್ರೀಕರಣ' ಕಾಯಿದೆಯನ್ನು ವಿರೋಧಿಸಿದರು.
9. ಹಲಗಲಿ ಗ್ರಾಮವು ಬಾಗಲಕೋಟೆ ಜಿಲ್ಲೆಯ ಕಲಾದಗಿಯಿಂದ ಉತ್ತರಕ್ಕೆ ಐದಾರು ಕಿಲೋಮೀಟರ್ ದೂರದಲ್ಲಿದೆ.
10. ಹಲಗಲಿಯ ಜನರಿಗೆ ' ಹೆಬಲಕ' ಸಾಹೇಬನು ಬುದ್ಧಿಮಾತನ್ನು ಹೇಳಿದನು.
11. ಕಂಪನಿಯ ಸೈನಿಕರು ಹಲಗಲಿಯಲ್ಲಿ ಸಿಕ್ಕಿದೆಲ್ಲವನ್ನು ಲೂಟಿ ಮಾಡಿ ಬೆಂಕಿಹಚ್ಚಿ ಊರನ್ನು ಸುಟ್ಟು ಊರಿನ ಗುರುತು ಉಳಿಯದಂತೆ ಮಾಡಿದರು.
12. ಅಗಸಿಗೆ ಬಂದ 'ಹೆಬಲಕ' ಸಾಹೇಬನು ಕೊಡುತೀವಿ ಕಬೂಲ(ಕಬುಲ) ಕೇಳಿರಿ ಮಾತ ಹೋಗಬೇಡಿರೋ ಸತ್ತು ಎಂದು ಬುದ್ಧಿಮಾತನ್ನು ಹೇಳುತ್ತಾನೆ.
13. ಹಲಗಲಿಯು ಮುಧೋಳ ಸಂಸ್ಥಾನಕ್ಕೆ ಸೇರಿತ್ತು.
14. ಹಲಗಲಿ ಬೇಡರ ಕಥನವು 'ವೀರರಸ' ಪ್ರಧಾನವಾಗಿದೆ.
15. ಲಾವಣಿಕಾರ ಅಂಕಿತಗೊಳಿಸಿರುವ ದೈವ 'ಕುರ್ತಕೋಟಿ ಕಲ್ಮೇಶ'
16. ಪ್ರಥಮ ಸ್ವಾತಂತ್ರ ಸಂಗ್ರಾಮವು 1857 ರಲ್ಲಿ ನಡೆಯಿತು.
17. 'ಕಾರ ಸಾಹೇಬ' ಬೆಂಕಿ ಚೂರಾದ ಬ್ರಿಟಿಷ್ ಅಧಿಕಾರಿ.
18. ಹಲಗಲಿ ಬೇಡರಿಂದ ಹತ್ಯೆಗೊಳಗಾದ ಬ್ರಿಟಿಷ್ ಅಧಿಕಾರಿ ' ಹೆಬಲಕ' ಎಂಬುವನು.
19. ಒಳಗಿನ ಮಂದಿ 'ಮುಂಗಾರಿನ ಸಿಡಿಲು ಸಿಡಿದ್ಹಾಂಗ' ಗುಂಡನ್ನು ಸುರಿಸಿದರು ಎಂದು ವರ್ಣಿಸಲಾಗಿದೆ.
20. ಜಗಳ ಹೊಡಿರಿ ನಮ್ಮ ಬೆಂಬಲ (ಕುಮ್ಮಕ್ಕು) ನಿಮಗೆ ಯಾವಾಗಲು ಇದೆ 'ಎಂದು ಬ್ಯಾಡರೆಲ್ಲ ಕಲೆತು ವಚನ ನೀಡುತ್ತಾರೆ.

**ಎರಡು ಅಂಕದ ಪ್ರಶ್ನೆಗಳು :**

1. ಬ್ರಿಟೀಷ್ ಕಂಪನಿ ಸರ್ಕಾರವು ನಿಶ್ಯಸ್ತ್ರೀಕರಣದ ಆದೇಶ ಹೊರಡಿಸಿ ಎಲ್ಲರೂ ತಾವು ಬಳಸುತ್ತಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಸಬೇಕೆಂದರು. ಇದು ಹಲಗಲಿ ಬೇಡರರಿಗೆ ಸರಿ ಕಾಣಲಿಲ್ಲ ಏಕೆಂದರೆ ಇವರು ಬೇಡರಾಗಿದ್ದು, ಬೇಟೆಗೆ ಮುಖ್ಯ ಆಯುಧಗಳು, ಆಯುಧಗಳೇ ಇವರ ಜೀವಾಳವಾದ್ದರಿಂದ ಆಯುಧಗಳನ್ನು ಬ್ರಿಟೀಷರಿಗೆ ಒಪ್ಪಿಸಬಾರದೆಂದು ಹೀಗೆ ಮಾಡುವುದರಿಂದ ಅವರ ಗುಲಾಮಗಿರಿಯನ್ನು ಒಪ್ಪಿಕೊಂಡಂತೆ ಆಗುವುದೆಂದು ತಿಳಿದು ದಂಗೆ ಎದ್ದರು.
2. ಪರಕೀಯರ ದಾಳಿ ದಂಗೆಗಳನ್ನು ಮೆಟ್ಟಿನಿಂತು ಕನ್ನಡನಾಡಿನ ಗೌರವವನನ್ನು ಉಳಿಸಲು ತ್ಯಾಗ ಬಲಿದಾನಗಳನ್ನು ಮಾಡಿದ ಕನ್ನಡನಾಡಿನ ವೀರರ ವೀರಸಾಹಸ, ಉಜ್ವಲ ಜೀವನವನ್ನು ವರ್ಣಿಸುವ ಕಥನಾತ್ಮಕ ಕಾವ್ಯಗಳೇ ಲಾವಣಿಗಳಾಗಿದ್ದು, ಈ ಲಾವಣಿಗಳ ಮೂಲಕ ನಾಡಿನ ರಕ್ಷಣೆಗಾಗಿ ಜನತೆಯನ್ನು ಹುರಿದುಂಬಿಸಲು ಗೀತೆಗಳನ್ನು ಕಟ್ಟಿಹಾಡುತ್ತಿದ್ದುದರಿಂದ ಲಾವಣಿಗಳನ್ನು ವೀರ ಗೀತೆಗಳೆನ್ನುತ್ತಾರೆ.
3. ಬ್ರಿಟೀಷ್ ಕಂಪನಿಯ ಆದೇಶದಂತೆ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಲು ನಿರಾಕರಿಸಿ ಅಲ್ಲಲ್ಲಿ ದಂಗೆಗಳಾದವು. ಹಲಗಲಿ ಬೇಡರ ಪ್ರಮುಖರಾದ ಹನುಮ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲೊಪ್ಪದೆ ದಂಗೆ ಎದ್ದು ಇವರು 'ಹೆಬಲಕ ' ಎಂಬ ಬ್ರೀಟಿಷರ ಅಧಿಕಾರಿಯನ್ನು ಹತ್ಯೆಮಾಡುತ್ತಾರೆ. ಇದರಿಂದ ಕೋಪಗೊಂಡ ಕಾರ ಸಾಹೇಬನ ಆದೇಶದಂತೆ ಕಲಾದಗಿಯಲ್ಲಿದ್ದ ದಂಡು ಹಲಗಲಿಗೆ ಬರುತ್ತದೆ.
4. ಬ್ರಿಟೀಷ್ ಕಂಪನಿಯ ವಿರುದ್ಧ ದಂಗೆ ಎದ್ದ ಹಲಗಲಿ ಬೇಡರು ಹೆಬಲಕ ಎಂಬ ಸಾಹೇಬನನ್ನು ಹತ್ಯೆಮಾಡುತ್ತಾರೆ. ಇದರಿಂದ ಕೋಪಗೊಂಡ ಕಾರ ಸಾಹೇಬ ಕಲದಗಿಯಲ್ಲಿದ್ದ ದಂಡನ್ನು ಕಳುಹಿಸಿ ಇಡೀ ಊರನ್ನೆ ಲೂಟಿ ಮಾಡುವಂತೆ ಆದೇಶಿಸುತ್ತಾನೆ. ದಂಡು ಹಲಗಲಿಯನ್ನು ಮುತ್ತಿ ಸಿಟ್ಟಿನಿಂದ ಸಿಡಿಲು ಸಿಡಿಯುವಂತೆ ಗುಂಡಿನ ದಾಳಿಮಾಡುತ್ತಾರೆ. ಈ ದಂಡನ್ನು ಎದುರಿಸಿ ಹೋರಾಡಿದ ಹನುಮ, ಬಾಲ, ರಾಮ ಜಡಗ ಎಲ್ಲಾರು ಹೋರಾಡಿ ಮಡಿಯುತ್ತಾರೆ. ಸೈನಿಕರು ಹಲಗಲಿಯಲ್ಲಿ ಸಿಕ್ಕಿದ ಕಬ್ಬಿಣದ ಹತಾರಗಳು ನಿತ್ಯದ ಆಹಾರ ಪದಾರ್ಥಗಳು, ಪಾತ್ರೆ ಸಾಮಗ್ರಿಗಳನ್ನು ಜೊತೆಗೆ ಹೆಂಗಸರ ಮಂಗಳಸೂತ್ರವನ್ನು ದೋಚಿ ಇಡೀ ಊರಿಗೆ ಕೊಳ್ಳಿ ಇಟ್ಟು ಏನು ಗುರುತು ಉಳಿಯದಂತೆ ಸುಟ್ಟುಹಾಕುತ್ತಾರೆ.
5. ಕಂಪನಿಯ ಸರ್ಕಾರದವರು ದ್ರೋಹಿಗಳು, ವಿಶ್ವಾಸಘಾತಕರು, ಅವರ ಮಾತನ್ನು ನಂಬುವಂತಿಲ್ಲ, ಮೋಸ ಮಾಡಿ ನಮ್ಮ ದೇಶ ಗೆಲ್ಲುತ್ತಾರೆ. ಅವರಿಗೆ ಹೊಡೆಯಿರಿ, ಎಂದು ಜಡಗ ಹೆಬಲಕ ಸಾಹೇಬನ ಮಾತನ್ನು ಕೇಳಿ ತನ್ನವರಿಗೆ ಹೇಳುತ್ತಾನೆ.

6. ಹಲಗಲಿಯ ಬೇಡರು ಹೋರಾಡಿ ಸತ್ತ ಮೇಲೆ ಕಂಪನಿಯ ಸೈನಿಕರು ಮನೆ ಮನೆಗಳಿಗೆ ನುಗ್ಗಿ ಆಹಾರ ಪದಾರ್ಥಗಳನ್ನು, ಆಯುಧಗಳನ್ನು , ಪಾತ್ರೆ ಪಗಡಗಳನ್ನು ಒಡವೆಗಳನ್ನು, ಹೆಂಗಸರ ಕೊರಳಿನ ಮಾಂಗಲ್ಯ, ಬೀಸುವ ಕಲ್ಲಿನಂಥ ಉಪಕರಣ ಗಳನ್ನು ಸಹ ಬಿಡದೆ ಲೂಟಿಮಾಡಿದರು.

**ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ**

1. ಈ ವಾಕ್ಯವನ್ನು ಡಾ|| ಬಿ.ಎಸ್.ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ಕೆಮಾಡಲಾದ ಲಾವಣಿ "ಹಲಗಲಿ ಬೇಡರು" ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಕಂಪನಿ ಸರ್ಕಾರ ' ನಿಶ್ಯಸ್ತ್ರೀಕರಣ' ಕಾಯಿದೆ ಹೊರಡಿಸಿ ಎಲ್ಲಾ ಜನರ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನು ಕಸಿದುಕೊಳ್ಳ ತೊಡಗಿದರು. ಕೊಡಲು ಒಪ್ಪದಿದ್ದವರನ್ನು ಬಗ್ಗು ಬಡಿದು ಕಸಿದುಕೊಳ್ಳಲಾಯಿತು. ಹಲಗಲಿಯಲ್ಲಿ ನಡೆದ ನಿಶ್ಯಸ್ತ್ರೀಕರಣ ಕಾಯಿದೆಯ ಪರಿಣಾಮವನ್ನು ಹೇಳುವ ಮಾತಿದು. ಅಂದರೆ ಬೇಡ ಜನಾಂಗದವರಿಗೆ ಆಯುಧಗಳೇ ಜೀವನಾಧಾರ ಇವುಗಳನ್ನು ಕೊಡಲೊಪ್ಪದ ಹಲಗಲಿ ಬೇಡರು ದಂಗೆ ಎದ್ದರು. ಇವರನ್ನು ಬಗ್ಗು ಬಡಿದು ಕಂಪನಿ ಸರ್ಕಾರವು ಆಯುಧಗಳನ್ನು ವಶಪಡಿಸಿ ಕೊಂಡರೆಂಬ ಭಾವವನ್ನು ವ್ಯಕ್ತಪಡಿಸುವ ಸಂದರ್ಭವಿದು.

**ಹಲಗಲಿ ಬೇಡರು ಲಾವಣಿಯಲ್ಲಿ ಬರುವ ಮುಖ್ಯ ವ್ಯಾಕರಣಾಂಶಗಳು :**

➢ **ಹೊಸಪದಗಳ ಅರ್ಥ**

1. **ವಿಲಾತಿ** – ವಿಲಾಯಿತಿ ( ವಿದೇಶ )
2. **ಹುಕುಂ** – ಆದೇಶ
3. **ಕಾರಕೂನ** – ಗುಮಾಸ್ತ
4. **ಕುಮಕಿ** – ಸಹಾಯ
5. **ಅಗಸಿ** – ಹೆಬ್ಬಾಗಿಲು
6. **ದಂಡು** – ಸೈನ್ಯ
7. **ಚರಿಗೆ** – ತಂಬಿಗೆ
8. **ಮಸಲತ್ತು** – ಪಿತೂರಿ
9. **ಹತಾರ** – ಆಯುಧ
10. **ಕಬುಲ** – ಒಪ್ಪಿಗೆ, ಅನುಮತಿ.

–

–

**ಗ್ರಾಮ್ಯ ಪದಗಳಿಗೆ ಗ್ರಾಂಥಿಕ ರೂಪ**

1. **ಹಿಂಗೆ** – ಹೀಗೆ
2. **ಮ್ಯಾಗ** – ಮೇಲೆ
3. **ಕಳಿವ್ಯಾರೆ** – ಕಳುಹಿಸಿದ್ದಾರೆ.
4. **ಇಲ್ಲದ್ಹಂಗ** – ಇಲ್ಲದ ಹಾಗೆ
5. **ಇಸವಾಸ** – ವಿಶ್ವಾಸ
6. **ಸಕ್ಕಾರಿ** – ಸಕ್ಕರೆ
7. **ಕುಂಪಣಿ** – ಕಂಪನಿ
8. **ಹೋಯ್ತು** – ಹೋಯಿತು.
9. **ಸಿಡಿದ್ಹಾಂಗ** – ಸಿಡಿದ ಹಾಗೆ.
10. **ಮಾಡ್ಯಾರೊ** – ಮಾಡಿದರು.
11. **ಗುಡದಾಗ** – ಗುಡ್ಡದಲ್ಲಿ
12. **ಬ್ಯಾಡಿರಿ** – ಬೇಡಿರಿ.

➢ **ಸಮಾಸಪದಗಳು :**

1. **ಮುಂಗೈ** -- ಕೈಯ + ಮುಂದು = ಅಂಶಿಸಮಾಸ.
2. **ನಡುರಾತ್ರಿ** -- ರಾತ್ರಿಯ + ನಡು = ಅಂಶಿಸಮಾಸ.
3. **ಮುಂಗಾರು** -- ಕಾರಿನ + ಮುಂದು = ಅಂಶಿಸಮಾಸ.
4. **ಮಂಗಳಸೂತ್ರ** -- ಮಂಗಳದ + ಸೂತ್ರ = ತತ್ಪುರುಷಸಮಾಸ.
5. **ಬುದ್ಧಿಮಾತು** -- ಬುದ್ಧಿಯ + ಮಾತು = ತತ್ಪುರಷಸಮಾಸ
6. **ಮೋಸಮಾಡು** -- ಮೋಸವನ್ನು + ಮಾಡು = ಕ್ರಿಯಾಸಮಾಸ.
7. **ಬೆನ್ಹತ್ತು** -- ಬೆನ್ನನ್ನು + ಹತ್ತು = ಕ್ರಿಯಾಸಮಾಸ.
8. **ಐನೂರಮಂದಿ** -- ಐದುನೂರು + ಮಂದಿ = ದ್ವಿಗುಸಮಾಸ
9. **ನಾಲ್ಕುಮಂದಿ** -- ನಾಲ್ಕು + ಮಂದಿ = ದ್ವಿಗುಸಮಾಸ
10. **ಹನುಮಭೀಮರಾಮ** -- ಹನುಮನೂ + ಭೀಮನೂ + ರಾಮನೂ = ದ್ವಂದ್ವಸಮಾಸ.

➢ **ತತ್ಸಮ – ತದ್ಭವ**

1. ದುಃಖ – ದುಗುಡ (ದುಕ್ಕ)
2. ಸಕ್ಕರೆ – ಶರ್ಕರಾ
3. ರಕ್ತ – ರಕುತ

➢ **ತದ್ಧಿತಾಂತ ನಾಮ --** ಚಟೇಕಾರ

ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ. ಹಾಸನ

# ಎಸ್.ಎಸ್.ಎಲ್.ಸಿ

# ವಿದ್ಯಾರ್ಥಿ ಜ್ಞಾನ ದೀವಿಗೆ

## ಪ್ರಥಮ ಭಾಷೆ ಕನ್ನಡ

ಹಾಸನ ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘ (ರಿ)

# ಪದ್ಯ : 4. ವಚನ ಸೌರಭ

**- ಜೇಡರ ದಾಸಿಮಯ್ಯ ಮತ್ತು ಬಸವಣ್ಣ**

**ಕವಿ ಕೃತಿ ಪರಿಚಯ: 1. ಜೇಡರ ದಾಸಿಮಯ್ಯ:** ಈತನು ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿದ್ದನು. ಈತನ ಕಾಲ ಕ್ರಿ.ಶ. **1150**. ಯಾದಗಿರಿಯ ಸಮೀಪದ ಮುದೇನೂರಿನವನು. ಈತ ಮೊದಲನೆಯ ವಚನಕಾರರನೆಂದು ಹೆಸರಾಗಿದ್ದಾನೆ. ರಾಮನಾಥ ಈತನ ವಚನಗಳ ಅಂಕಿತ. ಈತನು ರಚಿಸಿರುವ ಸುಮಾರು 150 ವಚನಗಳು ದೊರೆತಿವೆ.

**2. ಬಸವಣ್ಣ :** ಹನ್ನೆರಡನೆಯ ಶತಮಾನದ ಪ್ರಸಿದ್ಧ ವಚನಕಾರರಲ್ಲಿ ಇವರು ಅಗ್ರಗಣ್ಯರು. ಇವರ ಕಾಲ ಕ್ರಿ.ಶ.**1260**. ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯವರಾದ ಬಸವಣ್ಣನವರು ಕಳಚುರಿ ವಂಶದ ಬಿಜ್ಜಳನ ಆಸ್ಥಾನದಲ್ಲಿ ರಾಜ್ಯದ ಮಹಾಭಂಡಾರಿಯಾಗಿ ಸೇವೆಸಲ್ಲಿಸಿದ್ದಾರೆ. ಕೂಡಲಸಂಗಮದೇವ ಇವರ ವಚನಗಳು ಅಂಕಿತ. ಇವರು ಸಮಾಜ ಸುಧಾರಣೆ, ಸಮಾನತೆ, ಸರ್ವೋದಯ, ಸ್ವಾತಂತ್ರ್ಯ, ಭಕ್ತಿ - ಮೊದಲಾದ ವಿಷಯಗಳನ್ನು ಒಳಗೊಂಡಂತೆ ರಚಿಸಿರುವ ಸಾವಿರಾರು ವಚನಗಳು ದೊರೆತಿವೆ.

**ಭಾಗ - ಎ**

**ಒಂದು ಅಂಕದ ಪ್ರಶ್ನೆಗಳು**

1. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?
2. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಏನೆನಿಸುತ್ತದೆ?
3. ವಚನಕಾರರು ಯಾವುದನ್ನು ಮರವನೇರಿದ ಮರ್ಕಟ ಎಂದಿದ್ದಾರೆ?
4. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?
5. ಕೂಡಲಸಂಗಮದೇವ ಯಾವಾಗ ಒಲಿಯುವುದಿಲ್ಲ?
6. ಜೇಡರ ದಾಸಿಮಯ್ಯನ ಅಂಕಿತನಾಮ ಯಾವುದು?
7. ಸತಿಪತಿಗಳೊಂದಾಗದವನ ಭಕ್ತಿ ಯಾವುದರಂತೆ ಆಗುವುದು?
8. ಬಸವಣ್ಣನವರ ಅಂಕಿತನಾಮ ಯಾವುದು?
9. ಮನೆಯೊಡೆಯ ಮನೆಯೊಳಗಿಲ್ಲ ಎಂಬುದು ಹೇಗೆ ತಿಳಿಯುವುದು?
10. ಸತಿಪತಿಗಳೊಂದಾದ ಭಕ್ತಿ ಯಾರಿಗೆ ಹಿತವೆನಿಸುವುದು?

**ಎರಡು ಅಂಕದ ಪ್ರಶ್ನೆಗಳು**

1. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರ ದಾಸಿಮಯ್ಯನ ಅಭಿಪ್ರಾಯವೇನು?
2. ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.
3. ಮಾತಿಮ ಮಹತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?

**ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿರಿ:**

1. " ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ನಟ್ಟಡವಿ "
2. " ಸುಡು! ಸುಡು! ಮನವಿದು ವಿಷಯಕ್ಕೆ ಹರಿವುದು "
3. " ಹಲವು ಕೊಂಬೆಗೆ ಹಾಯುತಲಿದೆ "
4. " ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು"

**ಪದ್ಯ ಪೂರ್ಣಗೊಳಿಸಿ:**

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು
ಅದು ಪಟ್ಟಣವೆಂದೆನಿಸುವುದು
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ
ಅದು ನಟ್ಟಡವಿ ಕಾಣಾ ರಾಮನಾಥ

ನುಡಿದರೆ ಮುತ್ತಿನ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೊಂತೊಲಿವನಯ್ಯಾ?

**ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ:**

" ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆತಂತೆ "

ಭಾಗ - ಬಿ

**ಬಹು ಅಂಶ ಆಯ್ಕೆ ಪ್ರಶ್ನೆಗಳು**

1. " ಶಿವಂಗೆ" ಈ ಪದದಲ್ಲಿರುವ ವಿಭಕ್ತಿ :
   ಎ) ಪ್ರಥಮಾ ಬಿ) ದ್ವಿತೀಯ ಸಿ) ತೃತೀಯ ಡಿ) ಚತುರ್ಥಿ
2. " ನಿಷ್ಠೆಯುಳ್ಳ" ಪದದಲ್ಲಿರುವ ಸಂಧಿ :
   ಎ) ಲೋಪಸಂಧಿ ಬಿ) ಆಗಮ ಸಂಧಿ ಸಿ) ಆದೇಶ ಸಂಧಿ ಡಿ) ಗುಣ ಸಂಧಿ
3. " ಅಂದಣ" ಈ ಪದದ ಅರ್ಥ
   ಎ) ಅಂದ ಬಿ) ಪಲ್ಲಕ್ಕಿ ಸಿ) ಅಂಕಣ ಡಿ) ಸೌಂದರ್ಯ
4. " ನಟ್ಟಡವಿ" ಈ ಪದದಲ್ಲಿರುವ ಸಮಾಸ
   ಎ) ಅಂಶಿ ಸಮಾಸ ಬಿ) ಗಮಕ ಸಮಾಸ ಸಿ) ತತ್ಪುರುಷ ಸಮಾಸ ಡಿ) ಕರ್ಮಧಾರಯ
5. " ಬೆಂದಮನ" ಈ ಪದದಲ್ಲಿರುವ ಸಮಾಸ-
   ಎ) ಅಂಶಿ ಸಮಾಸ ಬಿ) ಗಮಕ ಸಮಾಸ ಸಿ) ತತ್ಪುರುಷ ಸಮಾಸ ಡಿ) ಕರ್ಮಧಾರಯ
6. " ಸುಡು ಸುಡು" ಈ ಪದದಲ್ಲಿರುವ ವ್ಯಾಕರಣಾಂಶ :
   ಎ) ದ್ವಿರುಕ್ತಿ ಬಿ) ನುಡಿಗಟ್ಟು ಸಿ) ಜೋಡುನುಡಿ ಡಿ) ಅನುಕರಣಾವ್ಯಯ
7. ಶಬ್ದ ಅಥವಾ ಪದಗಳ ಜೋಡಣೆಯ ಮೂಲಕ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಇದು ಈ ಅಲಂಕಾರ :
   ಎ) ಉಪಮಾ ಬಿ) ಶಬ್ದಾಲಂಕಾರ ಸಿ) ಅರ್ಥಾಲಂಕಾರ ಡಿ) ಉತ್ಪ್ರೇಕ್ಷೆ
8. ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಅಥವಾ ಅರ್ಥದ ಸೌಂದರ್ಯ ಹೆಚ್ಚಿದರೆ ಆಗುವ ಅಲಂಕಾರ :
   ಎ) ಉಪಮಾ ಬಿ) ಶಬ್ದಾಲಂಕಾರ ಸಿ) ಅರ್ಥಾಲಂಕಾರ ಡಿ) ಉತ್ಪ್ರೇಕ್ಷೆ
9. ಎಳಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು. ಇಲ್ಲಿರುವ ಶಬ್ದಾಲಂಕಾರ :
   ಎ) ವೃತ್ಯನುಪ್ರಾಸ ಬಿ) ಛೇಕಾನುಪ್ರಾಸ ಸಿ) ಅನುಪ್ರಾಸ ಡಿ) ಯಮಕ
11. ಹಾಡುತ್ತಾ ಹಾಡುತ್ತಾ ರಾಗ ; ಉಗುಳ್ತಾ ಉಗುಳ್ತಾ ರೋಗ- ಇಲ್ಲಿರುವ ಅಲಂಕಾರ :
   ಎ) ಛೇಕಾನುಪ್ರಾಸ ಬಿ) ವೃತ್ಯನುಪ್ರಾಸ ಸಿ) ಅನುಪ್ರಾಸ ಡಿ) ಯಮಕ
12. ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬದಂತೆ ಭಾವವು ತೋರಿಬಂದರೆ ಅದು :
   ಎ) ಉಪಮಾ ಬಿ) ರೂಪಕ ಸಿ) ಅರ್ಥಾಲಂಕಾರ ಡಿ) ದೃಷ್ಟಾಂತ
13. ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ :
   ಎ) ಉಪಮಾ ಬಿ) ದೃಷ್ಟಾಂತ ಸಿ) ಶ್ಲೇಷೆ ಡಿ) ಉತ್ಪ್ರೇಕ್ಷೆ

**ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ :**

1. ಹುಸಿ : ಸುಳ್ಳು : : ವಿಷಯ : ________
2. ಮನೆಯೊಳಗೆ : ಆಗಮ ಸಂಧಿ : : ತನುವಿನೊಳಗೆ : ________
3. ಮೃಡ : ಶಿವ : : ರಜ : ________
4. ಎನ್ನೊಡೆಯ : ಲೋಪಸಂಧಿ : : ನಿಷ್ಠೆಯಿಲ್ಲದ : ________
5. ಅಟವಿ : ಅಡವಿ : : ಅಮೃತ : ________
6. ಅಲ್ಲಮಪ್ರಭು : ಗುಹೇಶ್ವರಾ : : ಜೇಡರದಾಸಿಮಯ್ಯ : ________
7. ಹುಸಿ : ನನ್ನಿ : : ಮಿಥ್ಯ : ________
8. ದ್ಯೂತ : ಜೂಜು : : ಶುನಕ : ________

ಉತ್ತರಗಳು : 1. ಡಿ) ಚತುರ್ಥಿ **2. ಬಿ) ಆಗಮ ಸಂಧಿ 3. ಬಿ) ಪಲ್ಲಕ್ಕಿ 4. ಎ) ಅಂಶಿ ಸಮಾಸ 5. ಬಿ) ಗಮಕ ಸಮಾಸ 6.ಎ) ದ್ವಿರುಕ್ತಿ 7.ಬಿ) ಶಬ್ದಾಲಂಕಾರ 8. ಸಿ) ಅರ್ಥಾಲಂಕಾರ 9. ಎ) ವೃತ್ಯನುಪ್ರಾಸ 10. ಬಿ) ಛೇಕಾನುಪ್ರಾಸ 11. ಡಿ) ದೃಷ್ಟಾಂತಾಲಂಕಾರ 12 . ಡಿ) ಉತ್ಪ್ರೇಕ್ಷಾಲಂಕಾರ**

**ಉತ್ತರಗಳು : 1. ಕಾಮನೆ 2. ಲೋಪಸಂಧಿ 3. ಧೂಳು 4. ಆಗಮಸಂಧಿ 5. ಅಮರ್ದು 6. ರಾಮನಾಥ 7. ಸತ್ಯ 8. ಸೊಣಗ**

ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು

1. ಶಿವನಿಗೆ ಸತಿಪತಿಯರ ಭಕ್ತಿ ಹಿತವೆನಿಸುತ್ತದೆ.
2. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಪಟ್ಟಣವೆನಿಸುತ್ತದೆ.
3. ವಚನಕಾರರು ಮನುಷ್ಯನ ಮನಸ್ಸನ್ನು ಮರವನೇರಿದ ಮರ್ಕಟ ಎಂದಿದ್ದಾರೆ.
4. ಮಾನವನ ಸ್ವಭಾವವನ್ನು ವಚನಕಾರರು ಶುನಕ(ನಾಯಿ) ನಿಗೆ ಹೋಲಿಸಿದ್ದಾರೆ.
5. ನುಡಿದಂತೆ ನಡೆಯದಿದ್ದಾಗ ಕೂಡಲಸಂಗಮದೇವ ಒಲಿಯುವುದಿಲ್ಲ.
6. ಜೇಡರ ದಾಸಿಮಯ್ಯನ ಅಂಕಿತನಾಮ -ರಾಮನಾಥ
7. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆತಂತೆ ಆಗುವುದು.
8. ಬಸವಣ್ಣನವರ ಅಂಕಿತನಾಮ ಕೂಡಲಸಂಗಮದೇವ.
9. ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ಧೂಳು ತುಂಬಿದ್ದಾಗ ಮನೆಯೊಡೆಯನು ಮನೆಯೊಳಗಿಲ್ಲ ಎಂದು ತಿಳಿಯುವುದು.
10. ಸತಿ ಪತಿಗಳೊಂದಾದ ಭಕ್ತಿ ಶಿವನಿಗೆ ಹಿತವೆನಿಸುತ್ತದೆ.

ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು :

1. ಸತಿ ಪತಿಗಳೊಂದಾಗಿ ಮಾಡುವ ಭಕ್ತಿ ಶಿವನಿಗೆ ಪ್ರಿಯವೆಂದು, ಅದು ಅಮೃತಕ್ಕೆ ಸಮವೆಂದು ಹೇಳುತ್ತಾರೆ. ಸತಿ ಪತಿಗಳೊಂದಾಗದ ಭಕ್ತಿ ಶಿವನಿಗೆ ಪ್ರಿಯವಾಗುವುದಿಲ್ಲ. ಏಕೆಂದರೆ ಅದು ಅಮೃತಕ್ಕೆ ವಿಷ ಬೆರೆಸಿದಂತಾಗುವುದು ಎಂದು ಜೇಡರ ದಾಸಿಮಯ್ಯ ಭಕ್ತಿಯ ಬಗ್ಗೆ ಹೇಳಿದ್ದಾರೆ. ನಿಷ್ಠೆಯುಳ್ಳ ಭಕ್ತನು ಕಾಡಿನ ಮಧ್ಯದಲ್ಲಿದ್ದರೂ ಅದು ಆತನಿಗೆ ಪಟ್ಟಣದಂತೆ ಅಂತೆಯೇ ನಿಷ್ಠೆ ಇಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಕಾಡಿನಲ್ಲಿದ್ದಂತೆ ಎಂದು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯ ಹೇಳಿದ್ದಾನೆ.
2. ನಮ್ಮ ಮನಸ್ಸು ಮರವನ್ನು ಏರಿದ ಮರ್ಕಟದಂತೆ ಚಂಚಲವಾದುದು. ಭಗವಂತನಲ್ಲಿ ನಮ್ಮ ಮನಸ್ಸನ್ನು ದೃಢಪಡಿಸಲಾಗುವುದಿಲ್ಲ. ಅಂತೆಯೇ ಮನುಷ್ಯನ ಸ್ವಭಾವ ಶುನಕದಂತೆ. ಅದನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿದರೂ ಅದು ಹೊಲಸು ಕಂಡೊಡನೆ ನೆಗೆದು ಬರುವಂತೆ ಕಾಮ ಭೋಗಗಳೆಡೆ ಮನಸಿಟ್ಟಿರುವ ಮನುಷ್ಯನನ್ನು ಎಷ್ಟೇ ರೀತಿಯಲ್ಲಿ ಆಧ್ಯಾತ್ಮಿಕದ ಕಡೆಗೆ ಒಲೈಸಿದರೂ ಸಾಧ್ಯವಾಗುವುದಿಲ್ಲ ಎಂದು ಬಸವಣ್ಣನವರು ತಮ್ಮ ವಚನದಲ್ಲಿ ಚಂಚಲ ಮನಸ್ಸನ್ನು ಮರವೇರಿದ ಮರ್ಕಟಕ್ಕೂ ಮನಸ್ಸನ್ನು ಶುನಕ(ನಾಯಿ)ಕ್ಕೂ ಹೋಲಿಸಿದ್ದಾರೆ.
3. ನಾವು ಆಡುವ ಮಾತು ಮುತ್ತಿನ ಹಾರದಂತಿರಬೇಕೆಂದು ಮಾಣಿಕ್ಯದ ಹೊಳಪಿನಿಂದಲೂ, ನುಡಿದರೆ ಎಲ್ಲರನ್ನೂ ಆಕರ್ಷಿಸುವ ಸ್ಪಟಿಕದ ಮಣಿಯಂತಿರಬೇಕು. ನಾವು ನುಡಿದರೆ ಭಗವಂತನು ಕೂಡ ಮೆಚ್ಚಿ ಹೌದು-ಹೌದು ಎಂದು ಹೇಳುವಂತಿಬೇಕು ಎಂದು ಹೇಳುತ್ತಾ ನುಡಿದಂತೆ ನಡೆಯುವುದು ಬಹಳ ಮುಖ್ಯ ನುಡಿದಂತೆ ನಡೆಯದಿದ್ದರೆ ಆ ಶಿವನು ಮೆಚ್ಚುವುದಿಲ್ಲ ಎಂಬುದಾಗಿ ಬಸವಣ್ಣನವರು ಮಾತಿನ ಮಹತ್ವವನ್ನು ವರ್ಣಿಸಿದ್ದಾರೆ.

ಉತ್ತರಗಳು:

1. ಈ ವಾಕ್ಯವನ್ನು ಜೇಡರದಾಸಿಮಯ್ಯನವರ ವಚನಗಳಿಂದ ಆರಿಸಿರುವ 'ವಚನ ಸೌರಭ' ಪದ್ಯಭಾಗದಿಂದ ಆರಿಸಿಕೊಂಡಿದೆ.

ಭಕ್ತಿಯ ಸಾಗರಕ್ಕೆ ನಿಷ್ಠೆ ಮುಖ್ಯ ಎಂಬುದನ್ನು ದಾಸಿಮಯ್ಯನವರು ಹೇಳುವಾಗ ಈ ಮಾತು ಬಂದಿದೆ.

ಭಕ್ತನಿಗೆ ಭಗವಂತನಲ್ಲಿ ನಿಷ್ಠೆಯಿದ್ದರೆ ಆತ ಕಾಡಿನ ಮಧ್ಯದಲ್ಲಿದ್ದರೂ ಪಟ್ಟಣದಲ್ಲಿದ್ದಂತೆ ಅನುಭವವಾಗುತ್ತದೆ. ಅಂತೆಯೇ ಭಗವಂತನಲ್ಲಿ ನಿಷ್ಠೆಯಿಲ್ಲದ ಭಕ್ತನಿಗೆ ಪಟ್ಟಣದಲ್ಲಿ ಇದ್ದರೂ ಅದು ಕಾಡಿನಲ್ಲಿ ಇದ್ದಂತೆ ಅನಿಸುತ್ತದೆ.

ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ:

1. **" ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆತಂತೆ "**

| | |
|---|---|
| ಅಲಂಕಾರ | : ಉಪಮಾಲಂಕಾರ |
| ಉಪಮೇಯ | : ಸತಿಪತಿಗಳೊಂದಾಗದವನ ಭಕ್ತಿ |
| ಉಪಮಾನ | : ಅಮೃತದೊಳು ವಿಷ |
| ಉಪಮಾವಾಚಕ ಶಬ್ದ | : ಅಂತೆ |
| ಸಮಾನ ಗುಣಧರ್ಮ | : ಬೆರೆಯುವುದು |
| ಸಮನ್ವಯ | : ಸತಿಪತಿಗಳೊಂದಾಗದವನ ಭಕ್ತಿಯನ್ನು ಅಮೃತದೊಳು ವಿಷ ಬೆರೆತಿರುವುದಕ್ಕೆ ಹೋಲಿಸಿದೆ |

## ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ:

- 1. "ಮರನನೇರಿದ ಮರ್ಕಟನಂತೆ"

ಅಲಂಕಾರ : ಲುಪ್ತೋಪಮಾಲಂಕಾರ

ಉಪಮೇಯ : ಬೆಂದ ಮನಸ್ಸು ಉಪಮಾನ : ಮರವೇರಿದ ಮರ್ಕಟ ಉಪಮಾವಾಚಕ : ಅಂತೆ

ಸಮಾನ ಗುಣಧರ್ಮ : ಚಂಚಲತೆ

ಸಮನ್ವಯ: ಬೆಂದ ಮನಸ್ಸಿನ ಚಂಚಲತೆಯನ್ನು ಮರವನ್ನು ಏರಿದ ಮರ್ಕಟಕ್ಕೆ ಹೋಲಿಸಲಾಗಿದೆ.

- 2. " ಅಂದಣವನೇರಿದ ಸೊಣಗನಂತೆ"

ಅಲಂಕಾರ : ಲುಪ್ತೋಪಮಾಲಂಕಾರ

ಉಪಮೇಯ : ಮನುಷ್ಯನ ಮನಸ್ಸು ಉಪಮಾನ : ಅಂದಣವನೇರಿದ ಸೊಣಗ ಉಪಮಾವಾಚಕ : ಅಂತೆ

ಸಮಾನ ಗುಣಧರ್ಮ : ಚಂಚಲತೆ

ಸಮನ್ವಯ : ಮನುಷ್ಯನ ಮನಸ್ಸನ್ನು ಅಂದಣವನೇರಿದ ಸೊಣಗನ ಮನಸ್ಸಿಗೆ ಹೋಲಿಸಲಾಗಿದೆ.

- 3. " ನುಡಿದರೆ ಮುತ್ತಿನ ಹಾರದಂತಿರಬೇಕು " .

ಅಲಂಕಾರ : ಉಪಮಾಲಂಕಾರ

ಉಪಮೇಯ : ನುಡಿ. ಉಪಮಾನ : ಮುತ್ತಿನ ಹಾರ ಉಪಮಾವಾಚಕ ಶಬ್ದ : ಅಂತೆ

ಸಮಾನ ಗುಣಧರ್ಮ : ಪೋಣಿಸಿರುವುದು

ಸಮನ್ವಯ : ನುಡಿಗಳು ಮುತ್ತಿನಹಾರದಂತೆ ಜೋಡಿಸಿರಬೇಕೆಂದು ಹೋಲಿಸಲಾಗಿದೆ.

- 4. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು

ಅಲಂಕಾರ : ಉಪಮಾಲಂಕಾರ

ಉಪಮೇಯ : ನುಡಿ. ಉಪಮಾನ : ಮಾಣಿಕ್ಯದ ದೀಪ್ತಿ ಉಪಮಾವಾಚಕಶಬ್ದ : ಅಂತೆ

ಸಮಾನ ಗುಣಧರ್ಮ : ಪ್ರಕಾಶ

ಸಮನ್ವಯ : ನುಡಿಯನ್ನು ಮಾಣಿಕ್ಯದ ದೀಪ್ತಿಗೆ ಹೋಲಿಸಲಾಗಿದೆ.

- 5. ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು.

ಅಲಂಕಾರ : ಉಪಮಾಲಂಕಾರ

ಉಪಮೇಯ : ನುಡಿ. ಉಪಮಾನ : ಸ್ಪಟಿಕದ ಶಲಾಕೆ ಉಪಮಾವಾಚನ ಶಬ್ದ : ಅಂತೆ

ಸಮಾನ ಗುಣಧರ್ಮ : ಸ್ವಚ್ಛತೆ

ಸಮನ್ವಯ : ನುಡಿಗಳು ಸ್ಪಟಿಕದ ಶಲಾಕೆಯಂತೆ ಸ್ವಚ್ಛವಾಗಿರಬೇಕೆಂದು ಹೋಲಿಸಲಾಗಿದೆ.

- 7. ಅಚ್ಛೋದ ಸರೋವರ ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

ಅಲಂಕಾರ : ಉತ್ಪ್ರೇಕ್ಷಾಲಂಕಾರ. ಉಪಮೇಯ : ಅಚ್ಛೋದ ಸರೋವರ. ಉಪಮಾನ : ರನ್ನಗನ್ನಡಿ

ಸಮನ್ವಯ : ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಕಲ್ಪಸಿರುವುದರಿಂದ ಇದು ಉತ್ಪ್ರೇಕ್ಷಾಲಂಕಾರವಾಗಿದೆ.

- 8. ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ:

ಅಲಂಕಾರ : ದೃಷ್ಟಾಂತಾಲಂಕಾರ.

ಉಪಮೇಯ : ಮಾತು ಬಲ್ಲವನ ಜಗಳ. ಉಪಮಾನ : ಊಟ ಬಲ್ಲವನ ರೋಗ

ಸಮನ್ವಯ: ಬಿಂಬದ ಪ್ರತಿರೂಪವೇ ಪ್ರತಿಬಿಂಬಿತವಾಗಿರುವಂತೆ ಇಲ್ಲಿ ಉಪಮೇಯವಾದ ಜಗಳ ಹಾಗೂ ಉಪಮಾನವಾದ ರೋಗ ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಒಂದೇ ಎಂಬುದು ಪ್ರತಿಪಾದಿತವಾಗಿದೆ.

# ಪದ್ಯಪಾಠ : 5. ಸಂಕಲ್ಪಗೀತೆ

**ಡಾ.ಜಿ.ಎಸ್.ಶಿವರುದ್ರಪ್ಪ**

**ಕವಿ ಕೃತಿ ಪರಿಚಯ :** ಆಧುನಿಕ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರು ಡಾ.ಜಿ.ಎಸ್.ಶಿವರುದ್ರಪ್ಪನವರು. ಇವರು **ಕ್ರಿ.ಶ. ೧೯೨೬ (1926)** ರಲ್ಲಿ **ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ** ಜನಿಸಿದರು. ಇವರ ಪೂರ್ಣ ಹೆಸರು ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ. ಇವರ ಪ್ರಮುಖ ಕೃತಿಗಳೆಂದರೆ, **ಸಾಮಗಾನ, ಚೆಲುವು-ಒಲವು, ದೇವಶಿಲ್ಪಿ, ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವ ಪಶ್ಚಿಮ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯ ಸಮೀಕ್ಷೆ** ಮೊದಲಾದವು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ನಾಡೋಜ ಪುರಸ್ಕಾರ, ರಾಷ್ಟ್ರಕವಿ ಅಭಿದಾನ - ಮೊದಲಾದ ಪುರಸ್ಕಾರಗಳಿಗೆ ಬಾಜನರಾಗಿದ್ದಾರೆ. ಇವರು **22.12.2013** ರಲ್ಲಿ ವಿಧಿವಶರಾದರು.

## ಭಾಗ - ಎ

### ಒಂದು ಅಂಕದ ಪ್ರಶ್ನೆಗಳು :

1. ಕವಿ ಜಿ.ಎಸ್.ಶಿವರುದ್ರಪ್ಪನವರು ಕವಿಯುವ ಕತ್ತಲೆಯೊಳಗೆ ಏನನ್ನು ಹಚ್ಚಬೇಕೆಂದಿದ್ದಾರೆ?
2. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು?
3. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?
4. ಕಾಡುಮೇಡುಗಳ ಸ್ಥಿತಿ ಹೇಗಿದೆ?
5. ಮನುಜರ ನಡುವೆ ಏನಿದೆ?
6. ಯಾವ ಎಚ್ಚರದೊಳು ಬದುಕಬೇಕು?
7. ಕಣ್ಣುಗಳು ಹೇಗೆ ಕಂದಿವೆ?

### ಎರಡು ಅಂಕದ ಪ್ರಶ್ನೆಗಳು :

1. ಪರಿಸರ ಮಾಲಿನ್ಯದ ಬಗ್ಗೆ ಕವಿಯ ಸಂಕಲ್ಪವೇನು?
2. ಏಳು-ಬೀಳು ಮತ್ತು ಮಾನವರ ನಡುವಿನ ಅಡ್ಡಗೋಡೆಗಳನ್ನು ನಿವಾರಿಸುವುದು ಹೇಗೆ?
3. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?
4. ಕತ್ತಲೆಯನ್ನು ಹೋಗಲಾಡಿಸಿ ಮುನ್ನಡೆಯುವ ಬಗ್ಗೆ ಕವಿಯ ಸಲಹೆ ಏನು?

### ಸಂದರ್ಭಸಹಿತ ವಿವರಿಸಿ:

1. "ಪ್ರೀತಿಯ ಹಣತೆಯ ಹಚ್ಚೋಣ"
2. "ಹೊಸ ಎಚ್ಚರದೊಳು ಬದುಕೋಣ"
3. "ಮನುಜರ ನಡುವಿನ ಅಡ್ಡಗೋಡೆಗಳ ಕೆಡವುತ ಸೇತುವೆಯಾಗೋಣ"

### ಪದ್ಯಭಾಗವನ್ನು ಪೂರ್ಣಗೊಳಿಸಿ

| | | |
|---|---|---|
| ಕಲುಷಿತವಾದೀ ನದೀಜಲಗಳಿಗೆ | | ಮತಗಳೆಲ್ಲವೂ ಪಥಗಳು ಎನ್ನುವ |
| ಮುಂಗಾರಿನ ಮಳೆಯಾಗೋಣ | ಅಥವಾ | ಹೊಸ ಎಚ್ಚರದೊಳು ಬದುಕೋಣ |
| ಬರಡಾಗಿರುವೀ ಕಾಡುಮೇಡುಗಳ | | ಭಯ - ಸಂಶಯದೊಳು ಕಂದಿದ ಕಣ್ಣೊಳು |
| ವಸಂತವಾಗುತ ಮುಟ್ಟೋಣ. | | ನಾಳಿನ ಕನಸನು ಬಿತ್ತೋಣ |

## ಭಾಗ - ಬಿ

ಕೆಳಗೆ ಕೊಟ್ಟಿರುವ ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆ:

1. ಸಕರ್ಮಕ ಧಾತುಗಳು ಮೇಲೆ 'ಅಲ್ಪಡು' ಪ್ರತ್ಯಯ ಸೇರಿ ಆಗುವ ಕ್ರಿಯಾಪದದ ಪ್ರಯೋಗ :
   ಎ) ಕರ್ತರಿ ಬಿ) ಕರ್ಮಣಿ ಸಿ) ವಿಧ್ಯರ್ಥಕ ಡಿ) ನಿಷೇಧಾರ್ಥಕ
2. ಈ ಕೆಳಗಿನವುಗಳಲ್ಲಿ ವಿಧ್ಯರ್ಥಕ ಕ್ರಿಯಾಪದಕ್ಕೆ ಉದಾಹರಣೆ :
   ಎ) ಮಾಡನು ಬಿ) ಓದರು ಸಿ) ಮಾಡಿಯಾನು ಡಿ) ಮಾಡಲಿ
3. ಇಲ್ಲಿರುವ ಕ್ರಿಯಾರೂಪಗಳಲ್ಲಿ ಸಂಭವನಾರ್ಥಕ ಕ್ರಿಯಾಪದ :
   ಎ) ತಿಂದಾರು ಬಿ) ಓದನು ಸಿ) ಮಾಡನು ಡಿ) ಕೇಳಲಿ
4. ' ಬಿರುಗಾಳಿಗೆ ಹೊಯ್ದಾಡುವ ಹಡಗನು ಎಚ್ಚರಲಿ ಮುನ್ನಡೆಸೋಣ' ಇಲ್ಲಿ ಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯ :
   ಎ) ಪ್ರಥಮಾ ಬಿ) ದ್ವಿತೀಯಾ ಸಿ) ತೃತೀಯಾ ಡಿ) ಚತುರ್ಥಿ
5. 'ಕಲುಷಿತವಾದೀ ನದೀಜಲಗಳಿಗೆ ಮುಂಗಾರಿನ ಮಳೆಯಾಗೋಣ' ಈ ವಾಕ್ಯದಲ್ಲಿ ಷಷ್ಠೀ ವಿಭಕ್ತಿ ಪ್ರತ್ಯಯ ಹೊಂದಿರುವ ಪದ :
   ಎ) ಕಲುಷಿತವಾದೀ ಬಿ) ನದೀಜಲಗಳಿಗೆ ಸಿ) ಮುಂಗಾರಿನ ಡಿ) ಮಳೆಯಾಗೋಣ
6. 'ಹೊಸ ಎಚ್ಚರದೊಳು ಬದುಕೋಣ' ಈ ವಾಕ್ಯದಲ್ಲಿ ಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯ :
   ಎ) ಪಂಚಮೀ ಬಿ) ಷಷ್ಠಿ ಸಿ) ಸಪ್ತಮಿ ಡಿ) ತೃತೀಯ
7. ಒಂದು ವಿಭಕ್ತಿ ಪ್ರತ್ಯಯಕ್ಕೆ ಬದಲಾಗಿ ಬೇರೊಂದು ವಿಭಕ್ತಿ ಪ್ರತ್ಯಯವನ್ನು ಬಳಸುವುದನ್ನು ಹೀಗೆನ್ನುತ್ತಾರೆ:
   ಎ) ವಚನ ಪಲ್ಲಟ ಬಿ) ವಿಭಕ್ತಿ ಪಲ್ಲಟ ಸಿ) ವಿಭಕ್ತಿ ಪ್ರಸಾರ ಡಿ) ಅಧ್ಯಾಹಾರ
8. ದ್ವಿತೀಯಾ ವಿಭಕ್ತಿ ಪ್ರತ್ಯಯದಲ್ಲಿರುವ ಕಾರಕಾರ್ಥ :
   ಎ) ಕರ್ತ್ರರ್ಥ ಬಿ) ಕರಣಾರ್ಥ ಸಿ) ಕರ್ಮಾರ್ಥ ಡಿ) ಸಂಪ್ರದಾನ
9. ದೆಸೆಯಿಂದ, ಅತ್ತಣಿಂ- ಈ ಪ್ರತ್ಯಯಗಳನ್ನು ಹೊಂದಿರುವ ವಿಭಕ್ತಿ :
   ಎ) ಪಂಚಮೀ ಬಿ) ಷಷ್ಠಿ ಸಿ) ಸಪ್ತಮಿ ಡಿ) ತೃತೀಯ
10. 'ನಿಲ್ಲಿಸು' ಪದದಲ್ಲಿರುವ ಧಾತು :
    ಎ) ನಿಲ್ಲಿ ಬಿ) ಇಸು ಸಿ) ನಿಲ್ ಡಿ) ನಿಲ್ಲು
11. 'ಕಲುಷಿತ' ಪದದ ಸಮಾನಾರ್ಥಕ ಪದ :
    ಎ) ಮಲಿನ ಬಿ) ಕಲಕಿದ ಸಿ) ಕಲಸಿದ ಡಿ) ಸ್ವಚ್ಛವಾದ
12. 'ಕಾಡುಮೇಡು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.
    ಎ) ದ್ವಿರುಕ್ತಿ ಬಿ) ಜೋಡುನುಡಿ ಸಿ) ಅನುಕರಣಾವ್ಯಯ ಡಿ) ನುಡಿಗಟ್ಟು
13. ಮನುಜರ ನಡುವಣ ಅಡ್ಡಗೋಡೆಗಳ ಕೆಡವುತ ಸೇತುವೆಯಾಗೋಣ- ಇಲ್ಲಿ ಗೆರೆ ಎಳೆದ ಪದವು ಈ ವ್ಯಾಕರಣಾಂಶವಾಗಿದೆ :
    ಎ) ದ್ವಿರುಕ್ತಿ ಬಿ) ಜೋಡುನುಡಿ ಸಿ) ಅನುಕರಣಾವ್ಯಯ ಡಿ) ನುಡಿಗಟ್ಟು
14. 'ಸುತ್ತಲು ಕವಿಯುವ ಕತ್ತಲೆಯೊಳಗೆ ಪ್ರೀತಿಯ ಹಣತೆಯ ಹಚ್ಚೋಣ' ಈ ವಾಕ್ಯದಲ್ಲಿರುವ ಅಲಂಕಾರ :
    ಎ) ಉಪಮಾ ಬಿ) ರೂಪಕ ಸಿ) ಉತ್ಪ್ರೇಕ್ಷೆ ಡಿ) ದೃಷ್ಟಾಂತ
15. ಅಡ್ಡಗೋಡೆ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
    ಎ) ಅಂಶಿ ಬಿ) ಕರ್ಮಧಾರಯ ಸಿ) ಕ್ರಿಯಾ ಡಿ) ತತ್ಪುರುಷ
16. 'ಮುಂಗಾರು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
    ಎ) ಅಂಶಿ ಬಿ) ಕರ್ಮಧಾರಯ ಸಿ) ಕ್ರಿಯಾ ಡಿ) ತತ್ಪುರುಷ

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ :**

1. ಮಾಡಲಿ : ವಿಧ್ಯರ್ಥಕ :: ಮಾಡನು : ________
2. ಓದರು : ನಿಷೇಧಾರ್ಥಕ :: ಓದಿಯಾರು : ________
3. ಹಡಗನು : ಪ್ರಥಮಾ ವಿಭಕ್ತಿ :: ಮನುಜರ : ________
4. ಭಯದಿಂದ : ತೃತೀಯಾ ವಿಭಕ್ತಿ :: ಎಚ್ಚರದೊಳು : ________
5. ಷಷ್ಠಿ ವಿಭಕ್ತಿ : ಸಂಬಂಧಕಾರಕ :: ಚತುರ್ಥಿ ವಿಭಕ್ತಿ : ________
6. ಪ್ರಥಮಾ ವಿಭಕ್ತಿ : ಕರ್ತೃಕಾರಕ :: ಸಪ್ತಮಿ ವಿಭಕ್ತಿ : ________
7. ನಿಲ್ಲಿಸು : ನಿಲ್ಲು :: ಮುಟ್ಟೋಣ : ________
8. ಬಿರುಗಾಳಿಗೆ : ಚತುರ್ಥಿ :: ಭರವಸೆಗಳ : ________
9. ಬಿದ್ದುದನ್ನು : ದ್ವಿತೀಯಾ :: ಜಲಕ್ಕೆ : ________
10. ಅವನು ಮಲಗಿದನು : ಅಕರ್ಮಕ :: ಮನೆಯನ್ನು ಕಟ್ಟು : ________

**ಉತ್ತರಗಳು :** 1. ಬಿ) ಕರ್ಮಣಿ 2. ಡಿ) ಮಾಡಲಿ 3. ಎ) ತಿಂದಾರು. 4. ಡಿ) ಚತುರ್ಥಿ 5. ಸಿ) ಮುಂಗಾರಿನ
6. ಸಿ) ಸಪ್ತಮಿ 7. ಬಿ) ವಿಭಕ್ತಿ ಪಲ್ಲಟ 8. ಸಿ) ಕರ್ಮಾರ್ಥ 9. ಎ) ಪಂಚಮೀ 10. ಡಿ) ನಿಲ್ಲು
11. ಎ) ಮಲಿನ 12. ಬಿ) ಜೋಡುನುಡಿ 13. ಡಿ) ನುಡಿಗಟ್ಟು 14. ಬಿ) ರೂಪಕ
15. ಎ)ಕರ್ಮಧಾರೆಯಸಮಾಸ 16. ಅಂಶಿಸಮಾಸ

**ಉತ್ತರಗಳು :** 1. ನಿಷೇಧಾರ್ಥಕ 2. ಸಂಭವನಾರ್ಥಕ 3. ಷಷ್ಠಿ ವಿಭಕ್ತಿ 4. ಸಪ್ತಮಿ ವಿಭಕ್ತಿ 5. ಸಂಪ್ರದಾನ
6. ಅಧಿಕರಣ 7. ಮುಟ್ಟು 8. ಷಷ್ಠಿ 9. ಚತುರ್ಥಿ 10. ಸಕರ್ಮಕ

**ಪದ್ಯದ ವ್ಯಾಕರಣಾಂಶಗಳು :**

**ಸಮಾಸಪದಗಳು :** 1. ಬಿರುಗಾಳಿ - ಬಿರುಸಾದ + ಗಾಳಿ = ಕರ್ಮಧಾರಯಸಮಾಸ
2. ಮುಂಗಾರು - ಕಾರಿನ + ಮುಂದು = ಅಂಶಿಸಮಾಸ
3. ಮುನ್ನಡೆ - ನಡೆಯ + ಮುಂದು = ಅಂಶಿಸಮಾಸ
4. ಕಾಡುಮೇಡು – ಕಾಡೂ + ಮೇಡೂ = ದ್ವಂದ್ವಸಮಾಸ

| ನೀಡಿರುವ ಪದಗಳ ಧಾತುಗಳನ್ನು ಗುರುತಿಸಿ ಬರೆಯಿರಿ. | ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆಯಿರಿ | | |
|---|---|---|---|
| ಕ್ರಿಯಾಪದ ಧಾತು | ನಾಮಪದಗಳು | ಪ್ರತ್ಯಯಗಳು | ವಿಭಕ್ತಿಗಳು |
| 1. ನಿಲ್ಲಿಸು - ನಿಲ್ಲು. | ಪ್ರೀತಿಯ | ಅ | ಷಷ್ಠಿವಿಭಕ್ತಿ |
| 2. ನಡೆಸು - ನಡೆ | ಬಿರುಗಾಳಿಗೆ | ಇಗೆ | ಚತುರ್ಥಿವಿಭಕ್ತಿ |
| 3. ಹಚ್ಚುವುದು - ಹಚ್ಚು. | ಜಲಕ್ಕೆ | ಇಕ್ಕೆ | ಚತುರ್ಥಿವಿಭಕ್ತಿ |
| 4. ಮುಟ್ಟೋಣ - ಮುಟ್ಟು | ಬಿದ್ದುದನ್ನು | ಅನ್ನು | ದ್ವಿತೀಯವಿಭಕ್ತಿ |
| 5. ಕಟ್ಟುವುದು - ಕಟ್ಟು | ಭರವಸೆಗಳ | ಅ | ಷಷ್ಠಿವಿಭಕ್ತಿ |
| 6. ಆಗೋಣ - ಆಗು | ಹಡಗನು | ಉ | ಪ್ರಥಮವಿಭಕ್ತಿ |

**ವಿಧ್ಯರ್ಥಕ ಕ್ರಿಯಾಪದಗಳು :** 1. ಹಚ್ಚೋಣ, 2. ನಡೆಸೋಣ, 3.ಆಗೋಣ, 4.ಮುಟ್ಟೋಣ 5. ಕಟ್ಟೋಣ
6. ಬದುಕೋಣ, 7. ಬಿತ್ತೋಣ

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು:**

1. ಕವಿ ಜಿ.ಎಸ್.ಶಿವರುದ್ರಪ್ಪನವರು ಕತ್ತಲೆಯೊಳಗೆ ಪ್ರೀತಿಯ ಹಣತೆ ಹಚ್ಚಬೇಕೆಂದಿದ್ದಾರೆ.
2. ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು.
3. ಕಲುಷಿತವಾದ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.
4. ಕಾಡುಮೇಡುಗಳು ಬರಡಾಗಿವೆ.
5. ಮನುಜರ ನಡುವೆ ಅಡ್ಡಗೋಡೆಗಳಿವೆ.
6. ಮತಗಳೆಲ್ಲ ಪಥಗಳು ಎನ್ನುವ ಹೊಸ ಎಚ್ಚರದಲ್ಲಿ ಬದುಕಬೇಕು.
7. ಕಣ್ಣುಗಳು ಭಯ ಸಂಶಯದಿಂದ ಕಂದಿವೆ.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ನದೀಜಲಗಳೂ ಕಲುಷಿತವಾಗಿವೆ. ಕಾಡುಗಳು ಬರಡಾಗಿವೆ. ಆದ್ದರಿಂದ ನಾವು ನದಿಜಲಗಳಿಗೆ ಮುಂಗಾರಿನ ಮಳೆಯಾಗಬೇಕು. ಬರಡಾಗಿರುವ ಕಾಡು ಮೇಡುಗಳಿಗೆ ವಸಂತವಾಗಬೇಕೆಂದು ಕವಿ ಆಶಿಸಿದ್ದಾರೆ.
2. ಬಿದ್ದಿದ್ದನ್ನು ಮೇಲೆಬ್ಬಿಸಿ ಹೊಸ ಭರವಸೆಗಳನ್ನು ಕಟ್ಟಿ ಆ ಮೂಲಕ ಮಾನವರ ನಡುವೆ ಇರುವ ಅಂತರದ ಅಡ್ಡಗೋಡೆಗಳನ್ನು ಕೆಡವಿ ಸೇತುವೆಯಾಗಬೇಕು.
3. ಮತಗಳೆಲ್ಲವೂ ಪಥಗಳು' ಎಂಬ ಐಕ್ಯತಾ ಭಾವನೆಯಿಂದ ಹೊಸ ಎಚ್ಚರ, ಜಾಗೃತಿಯಿಂದ ಬದುಕುವುದರ ಜೊತೆಗೆ ಜನರಲ್ಲಿರುವ ಭಯ-ಸಂಶಯಗಳನ್ನು ಹೋಗಲಾಡಿಸಿ ನಾಳಿನ ಕನಸನ್ನು ಬಿತ್ತಬೇಕು.
4. ನಮ್ಮ ಸುತ್ತ ಹರಡಿರುವ ಅಂಧಕಾರವನ್ನು ಪ್ರೀತಿಯ ಹಣತೆಯನ್ನು ಹಚ್ಚಿ ಹೋಗಲಾಡಿಸಬೇಕು. ಬಿರುಗಾಳಿಗೆ ಸಿಕ್ಕಿ ನಲುಗಿರುವ ಜೀವನವೆಂಬ ಹಡಗನ್ನು ಎಚ್ಚರದಿಂದ ಮುನ್ನಡೆಸಬೇಕು.

**ಸಂದರ್ಭ ಸ್ವಾರಸ್ಯದ ಉತ್ತರ** : ( ಸೂಚನೆ : - ಒಂದು ಸಂದರ್ಭಕ್ಕೆ ಮಾತ್ರ ಮಾದರಿ ಉತ್ತರ ನೀಡಿದ್ದು ಉಳಿದ ಸಂದರ್ಭಗಳಿಗೆ ಇದೇ ಮಾದರಿಯಲ್ಲಿ ಉತ್ತರಿಸಿ )

1. ಈ ಸಾಲನ್ನು ಡಾ.ಜಿ.ಎಸ್.ಶಿವರುದ್ರಪ್ಪನವರ 'ಎದೆ ತುಂಬಿ ಹಾಡಿದೆನು' ಕವನ ಸಂಕಲನದಿಂದ ' ಸಂಕಲ್ಪಗೀತೆ ' ಕವನವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮಾನವ ಸಮಾಜದ ಸುತ್ತಲೂ ಕವಿದಿರುವ ಕತ್ತಲೆಯನ್ನು ಹೋಗಲಾಡಿಸುವ ಬಗ್ಗೆ ಈ ಸಂದರ್ಭದಲ್ಲಿ ತಿಳಿಸಿದ್ದಾರೆ. ಮಾನವ ಸಮಾಜದ ಸುತ್ತಲೂ ಅಜ್ಞಾನ ದ್ವೇಷದ ಕತ್ತಲೆ ಕವಿದಿದ್ದು ಅದನ್ನು ಪ್ರೀತಿಯ ಹಣತೆಯನ್ನು ಹಚ್ಚಿ ಹೋಗಲಾಡಿಸಬೇಕು ಎಂಬುದು ಕವಿಯ ಆಶಯವಾಗಿದೆ.

**: ಕ್ರಿಯಾಪದಗಳು :**

ಕ್ರಿಯೆ ಪೂರ್ಣಗೊಂಡಿದೆ ಎಂಬ ಅರ್ಥವನ್ನು ಸೂಚಿಸ ಬಲ್ಲ ಪದವೇ ಕ್ರಿಯಾಪದಗಳು. ಕ್ರಿಯಾರ್ಥವನ್ನು ಸೂಚಿಸುವ ಪ್ರತ್ಯವನ್ನು ಹೊಂದಿರುವ ಪದವೇ ಕ್ರಿಯಾಪ್ರಕೃತಿ ಅಥವಾ ಧಾತು. ಅಂದರೆ ಕ್ರಿಯಾಪದದ ಮೂಲ ರೂಪವೇ ಧಾತು.

ಧಾತುವಿನಲ್ಲಿ ಸಕರ್ಮಕ ಧಾತು ಮತ್ತು ಅಕರ್ಮಕಧಾತು ಎಂದು ಎರಡು ವಿಧಗಳಿವೆ.

**ಸಕರ್ಮಕಧಾತು :** ಅರ್ಥಪೂರ್ಣತೆಗೆ ಕರ್ಮಪದವನ್ನು ಬಯಸುವ ಧಾತುಗಳೇ ಸಕರ್ಮಕ ಧಾತುಗಳು.

**ಉದಾ :** ಕೊಡು, ಬಿಡು, ಉಣ್ಣು, ತಿದ್ದು, ಉಜ್ಜು, ತಿದ್ದು, ಮುಚ್ಚು ನೆಡು, ಕಟ್ಟು, ಓದು - ಇತ್ಯಾದಿ

**ಅಕರ್ಮಕಧಾತು :** ಅರ್ಥಪೂರ್ಣತೆಗೆ ಕರ್ಮಪದವನ್ನು ಬಯಸದೇ ಇರುವ ಧಾತುಗಳೇ ಸಕರ್ಮಕ ಧಾತುಗಳು.

**ಉದಾ :** ಮಲಗು, ಓಡು, ಬದುಕು, ಹೊಳೆ, ಹೋಗು, ನಾಚು - ಇತ್ಯಾದಿ

**ಕರ್ತರಿ ಪ್ರಯೋಗ :** ಧಾತು ಗಳಿಗೆ ಲಿಂಗವಾಚಕ ಮತ್ತು ವಸ್ತುವಾಚಕಗಳು ಸೇರಿ ಒಂದು ಪೂರ್ಣವಾಕ್ಯವಾದಾಗ ಅದು ಕರ್ತರಿಪ್ರಯೋಗವಾಗುತ್ತದೆ.

**ಉದಾ :** 1. ಭೀಮನು ಅನ್ನವನ್ನು ಉಂಡನು. 2. ಅಕ್ಕ ತಂಗಿಯನ್ನು ಕರೆದಳು. - ಇತ್ಯಾದಿ

**ಕರ್ಮಣಿ ಪ್ರಯೋಗ :** ಸಕರ್ಮಕ ಧಾತುಗಳ ಮೇಲೆ ಅಲ್ಪಡು ಪ್ರತ್ಯಯ ಸೇರಿ ಕಾಲಸೂಚಕ ಮತ್ತು ಆಖ್ಯಾತ ಪ್ರತ್ಯಯಗಳು ಸೇರಿದಾಗ ಕರ್ಮಣಿ ಪ್ರಯೋಗವಾಗುತ್ತದೆ. **ಉದಾ :** 1. ಅನ್ನವು ಭೀಮನಿಂದ ಉಣ್ಣಲ್ಪಟ್ಟಿತು. 2. ತಂಗಿಯು ಅಕ್ಕನಿಂದ ಕರೆಯಲ್ಪಟ್ಟಳು - ಇತ್ಯಾದಿ.

## ಪದ್ಯಪಾಠ : 6. ಕೌರವೇಂದ್ರನ ಕೊಂದೆ ನೀನು ( ಕಾವ್ಯಭಾಗ )

**– ಕುಮಾರವ್ಯಾಸ**

<u>**ಕವಿಕಾವ್ಯ ಪರಿಚಯ**</u> **:** ವ್ಯಾಸರು ಬರೆದ ಮಹಾಭಾರತವನ್ನು ಕನ್ನಡದಲ್ಲಿ ಮೊದಲ ಹತ್ತು ಪರ್ವಗಳನ್ನು ಬರೆದು ಕುಮಾರವ್ಯಾಸನೆಂದೇ ಪ್ರಸಿದ್ಧನಾದ ಕವಿ **ಗದುಗಿನ ನಾರಣಪ್ಪ**, ಈತ **ಗದುಗ ಪ್ರಾಂತದ ಕೋಳಿವಾಡದವನು.** ಈತನ ಕಾಲ **ಕ್ರಿ.ಶ. 1430 (1430).** ಈತನು ಬರೆದ ಕೃತಿ **'ಕನ್ನಡಭಾರತ '**, 'ಗದುಗಿನಭಾರತ ', ' ಕುಮಾರವ್ಯಾಸಭಾರತ 'ವೆಂದು ಹೆಸರಾಗಿದೆ. ಆದರೆ ಕವಿ ಇಟ್ಟ ಹೆಸರು **"ಕರ್ಣಾಟಭಾರತಕಥಾಮಂಜರಿ"**ಎಂದು. ಈತ **'ಐರಾವತ** 'ವೆಂಬ ಕೃತಿಯನ್ನು ಬರೆದನೆಂದು ತಿಳಿದುಬರುತ್ತದೆ. ಈತ ತನ್ನ ಕಾವ್ಯದಲ್ಲಿ ಹೆಚ್ಚು ರೂಪಕಗಳನ್ನು ಬಳಸಿ **'ರೂಪಕಸಾಮ್ರಾಜ್ಯಚಕ್ರವರ್ತಿ'** ಎಂಬ ಬಿರುದು ಪಡೆದಿದ್ದಾನೆ.

### ಭಾಗ – ಎ

ಒಂದು ಅಂಕದ ಪ್ರಶ್ನೆಗಳು.

1. ಮೂಲ ಮಹಾಭಾರತವನ್ನು ಬರೆದವರು ಯಾರು ?
2. ದಾಯಾದಿ ಮತ್ಸರಕ್ಕೆ ಉದಾರಣೆಯಾದ ಮಹಾಕಾವ್ಯ ಯಾವುದು ?
3. ಮಹಾಭಾರತದಲ್ಲಿ ಶೌರ್ಯ,ದಾನಕ್ಕೆ ಹೆಸರಾದವನು ಯಾರು?
4. 'ಇನತನಯ' ಎಂದು ಯಾರನ್ನು ಕರೆಯುತ್ತಾರೆ ?
5. ದನುಜರಿಪು ಯಾರು ?
6. 'ಮೇದಿನೀಪತಿ ನೀನು' ಎಂದು ಕೃಷ್ಣ ಯಾರನ್ನು ಉದ್ದೇಶಿಸಿ ಹೇಳುತ್ತಾನೆ ?
7. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ?
8. ಕುಮಾರವ್ಯಾಸನಿಗೆ ಇರುವ ಬಿರುದು ಯಾವುದು ?
9. ನಾರಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂತು ?
10. ಕೃಷ್ಣನ ಭೇದ ತಂತ್ರದ ಮಾತನ್ನು ಕೇಳಿ ಕರ್ಣನಲ್ಲಿ ಮೂಡಿದ ಭಾವನೆ ಏನು?
11. 'ಕೌರವೇಂದ್ರನ ಕೊಂದೆ ನೀನು' ಎಂದು ಕರ್ಣ ಯಾರಿಗೆ ಹೇಳುತ್ತಾನೆ ?
12. ನಾಳಿನ ಭಾರತವು ಯಾರಿಗೆ ಔತಣವಾಯಿತು ?
13. ಕರ್ಣನು ಯಾರನ್ನು ನೋಯಿಸುವುದಿಲ್ಲವೆಂದು ಆಣೆಮಾಡುತ್ತಾನೆ ?
14. ರವಿಸುತನ ಕಿವಿಯಲ್ಲಿ ಭಯವನ್ನು ಬಿತ್ತಿದವರು ಯಾರು ?
15. ಕುಮಾರವ್ಯಾಸನು ತನ್ನ ಕೃತಿಗೆ ಇಟ್ಟ ಹೆಸರು ಯಾವುದು ?

**ಎರಡು ಅಂಕದ ಪ್ರಶ್ನೆಗಳು :**

1. ಕೃಷ್ಣನು ಕರ್ಣನ ಮನದಲ್ಲಿ ಯಾವ ಭಯವನ್ನು ಬಿತ್ತಿದನು ?
2. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು ?
3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?
4. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣನು ಹೇಳಲು ಕಾರಣವೇನು ?
5. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?

**ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ**

1. " ರವಿಸುತನ ಕಿವಿಯಲಿ ಬಿತ್ತಿದನು ಭಯವ. "
2. "ಬಾಯ್ದಂಬುಲಕೆ ಕೈಯಾನುವರೆ. "
3. " ಜೀಯ ಹಸಾದವೆಂಬುದು ಕಷ್ಟ. "
4. " ನಿನ್ನಪದೆಸೆಯ ಬಯಸುವನಲ್ಲ. "
5. " ಮಾರಿಗೌತಣವಾಯ್ತು ನಾಳಿನ ಭಾರತವು. "

**ಪದ್ಯ ಪೂರ್ಣಗೊಳಿಸಿ**

| | | |
|---|---|---|
| ಕೊರಳ ಸೆರೆ ಹಿಗ್ಗಿದವು ದೃಗಜಲ | | ಮಾರಿಗೌತಣವಾಯ್ತ ನಾಳಿನ |
| ಉರುವಣಿಸಿ ಕಡು ನೊಂದನಕಟಾ | | ಭಾರತವು ಚತುರಂಗ ಬಲದಲಿ |
| ಕುರುಪತಿಗೆ ಕೇಡಾದುದೆಂದನು ತನ್ನ ಮನೊದೊಳಗೆ | **ಅಥವಾ** | ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು॥ |
| ಹರಿಯ ಹಗೆ ಹೊಗೆದೋರದುರುಹದೆ | | ತೀರಿಸಿಯೆ ಪತಿಯವಸರಕ್ಕೆ ಶ |
| ಬರಿದೆ ಹೋಹುದೆ ತನ್ನ ವಂಶವ | | ರೀರವನು ನೂಕುವೆನು ನಿನ್ನಯ |
| ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ | | ವೀರರೈವರ ನೋಯಿಸೆನು ರಾಜೀವಸಖನಾಣೆ ॥ |

## ಭಾಗ – ಬಿ

**ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರನ್ನು ಆರಿಸಿ ಬರೆಯಿರಿ.**

1. ಎರಡು ಮಾತ್ರೆಗಳ ಕಾಲದಲ್ಲಿ ಉಚ್ಚರಿಸುವ ಅಕ್ಷರವನ್ನು ಹೀಗೆ ಕರೆಯುತ್ತೇವೆ :
ಎ) ಪ್ಲುತ ಬಿ) ಗುರು ಸಿ) ಲಘು ಡಿ) ಗಣ

2. ಕೈಯಾನು – ಪದವು ಈ ಸಮಾಸವಾಗಿದೆ :
ಎ) ಕ್ರಿಯಾಸಮಾಸ ಬಿ) ದ್ವಂದ್ವಸಮಾಸ ಸಿ) ಬಹುವ್ರೀಹಿಸಮಾಸ ಡಿ) ತತ್ಪುರುಷಸಮಾಸ

3. ಮಾದ್ರಮಾಗಧಯಾದವರು – ಇದು ಈ ಸಮಾಸಕ್ಕೆ ಉದಾಹರಣೆಯಾಗಿದೆ :
ಎ) ಅಂಶಿಸಮಾಸ ಬಿ) ತತ್ಪುರುಷಸಮಾಸ ಸಿ) ದ್ವಿಗುಸಮಾಸ ಡಿ) ದ್ವಂದ್ವಸಮಾಸ.

4. ಹಸಾದ – ಪದದ ತತ್ಸಮ ರೂಪ :
ಎ) ವಿಷಾದ ಬಿ) ಹಸನಾದ ಸಿ) ಪಸಾದ ಡಿ) ಪ್ರಸಾದ.

5. ದೃಗುಜಲ – ಪದದ ಅರ್ಥ ಇದಾಗಿದೆ :
ಎ) ಕಣ್ಣೀರು ಬಿ) ತಿಳಿನೀರು ಸಿ) ಮೃಗಗಳನೀರು ಡಿ) ಬಿಸಿನೀರು.

6. ಬಹುವ್ರೀಹಿ ಸಮಾಸಕ್ಕೆ ಈ ಪದವು ಉದಾಹರಣೆಯಾಗಿದೆ :
ಎ) ಹೊಗೆದೋರು ಬಿ) ಕೈಯಾನು ಸಿ) ರಾಜೀವಸಖ ಡಿ) ಬಾಯ್ದಂಬುಲ

7. ಭಾಮಿನಿ ಷಟ್ಪದಿಯಲ್ಲಿನ ಒಟ್ಟು ಮಾತ್ರೆಗಳ ಸಂಖ್ಯೆ :
ಎ) 108 ಬಿ) 102 ಸಿ) 64 ಡಿ) 144

8. ದನುಜರಿಪು – ಇದು ಈ ಸಮಾಸಕ್ಕೆ ಉದಾಹರಣೆಯಾಗಿದೆ :
ಎ) ಕ್ರಿಯಾಸಮಾಸ ಬಿ)ಬಹುವ್ರೀಹಿಸಮಾಸ ಸಿ) ದ್ವಂದ್ವಸಮಾಸ ಡಿ) ತತ್ಪುರುಷಸಮಾಸ

9. ಉಪಮಾನ ಉಪಮೇಯಗಳ ನಡುವೆ ಅಭೇದ ಸಂಬಂಧ ಕಲ್ಪಿಸುವ ಅಲಂಕಾರ :
ಎ) ಉಪಮಾಲಂಕಾರ ಬಿ) ರೂಪಕಾಲಂಕಾರ ಸಿ) ದೃಷ್ಟಾಂತಾಲಂಕಾರ ಡಿ) ಉತ್ಪ್ರೇಕ್ಷಲಾಂಕಾರ

10. ಗುರು–ಲಘು ಮೂರಿರಲು ಈ ಗಣವಾಗುತ್ತದೆ :
ಎ) 'ಭ–ಯ'ಗಣ ಬಿ) 'ಜ–ರ'ಗಣ ಸಿ) 'ಮ–ನ'ಗಣ ಡಿ) 'ಸ–ತ'ಗಣ

11. ಷಟ್ಪದಿಯಲ್ಲಿರುವ ವಿಧಗಳು :
ಎ) ಆರು ಬಿ) ಎಂಟು ಸಿ) ನಾಲ್ಕು ಡಿ) ಮೂರು

12. 'ಕೌಂತೇಯ' – ಪದವು ಈ ಅಕ್ಷರಗಣಕ್ಕೆ ಉದಾಹರಣೆಯಾಗಿದೆ :
ಎ) 'ಯ'ಗಣ ಬಿ) 'ಸ'ಗಣ ಸಿ) 'ತ'ಗಣ ಡಿ) 'ಭ'ಗಣ

13. ಒಂದು ಅಕ್ಷರವನ್ನು ಉಚ್ಚರಿಸುವ ಅವಧಿಗೆ ಹೀಗೆನ್ನುತ್ತಾರೆ :
ಎ) ಗಣ ಬಿ) ಮಾತ್ರೆ ಸಿ) ಯತಿ ಡಿ) ಪ್ರಾಸ

14. ಮೂರು–ನಾಲ್ಕು ಮಾತ್ರೆಗಳಿಂದ ಗಣವಿಭಜನೆಯನ್ನು ಮಾಡುವ ಷಟ್ಪದಿ :
ಎ) ವಾರ್ಧಕ ಬಿ) ಕುಸುಮ ಸಿ) ಭೋಗ ಡಿ) ಭಾಮಿನಿ

15. ಉರವಣಿಸು – ಈ ಪದದ ಅರ್ಥ :
ಎ) ಹೆಚ್ಚಾಗು ಬಿ) ಅವಸರ ಸಿ) ಮನಸ್ಸು ಡಿ) ಕಡಿಮೆಯಾಗು.

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧ ಬರೆಯಿರಿ :**

1. ಕಂದಪದ್ಯ : ನಾಲ್ಕುಸಾಲು : : ಷಟ್ಪದಿ : ____________
2. ಋಣ : ಹಂಗು : : ರಣ : ____________
3. ಲಕ್ಷ್ಮೀಶ : ವಾರ್ಧಕಷಟ್ಪದಿ : : ಕುಮಾರವ್ಯಾಸ : ____________
4. ಷಟ್ಪದಿ : ಮಾತ್ರಾಗಣ : : ಚಂಪಕಮಾಲಾವೃತ್ತ : ____________
5. ಇನತನೂಜ : ಬಹುವ್ರೀಹಿಸಮಾಸ : : ಮಾದ್ರಮಾಗಧಯಾದವರು : ____________
6. ಲಕ್ಷ್ಮೀಶ : ಉಪಮಾಲೋಲ : : ಕುಮಾರವ್ಯಾಸ : ____________
7. ಉರ್ವಿಯೊಳ್ : ಸಪ್ತಮಿವಿಭಕ್ತಿ : : ಸುಯಾಜಿಯಂ : ____________
8. ಲಘು : ಒಂದುಮಾತ್ರೆ : : ಗುರು : ____________
9. ಮುರಾರಿ : ಕೃಷ್ಣ : : ರವಿಸುತ : ____________
10. ಹಸಾದ : ಪ್ರಸಾದ : : ದಾತಾರ : ____________

**ಉತ್ತರಗಳು : 1. ಬಿ. ಗುರು 2. ಎ. ಕ್ರಿಯಾಸಮಾಸ 3. ಡಿ. ದ್ವಂದ್ವಸಮಾಸ 4.ಡಿ. ಪ್ರಸಾದ 5. ಎ. ಕಣ್ಣೀರು 6. ಸಿ. ರಾಜೀವಸಖ 7. ಬಿ. 102 8. ಬಿ. ಬಹುವ್ರೀಹಿಸಮಾಸ 9. ಬಿ. ರೂಪಕಾಲಂಕಾರ 10. ಸಿ. ಮ–ನ ಗಣ 11. ಎ. ಆರು 12. ಸಿ. 'ತ'ಗಣ 13. ಬಿ. ಮಾತ್ರೆ 14. ಖ. ಭಾಮಿನಿ 15. ಎ. ಹೆಚ್ಚಾಗು**

**ಉತ್ತರಗಳು : 1. ಆರುಸಾಲು 2. ಯುದ್ಧ 3. ಭಾಮಿನಿಷಟ್ಪದಿ 4. ಅಕ್ಷರಗಣ 5. ದ್ವಂದ್ವಸಮಾಸ 6.ರೂಪಕಸಾಮ್ರಾಜ್ಯಚಕ್ರವರ್ತಿ 7. ದ್ವಿತೀಯ 8. ಎರಡು ಮಾತ್ರೆ 9. ಕರ್ಣ 10. ದಾತೃ**

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

**1**. ಮೂಲ ಮಹಾಭಾರತ ಕಾವ್ಯವನ್ನು ಬರೆದವರು **ವೇದವ್ಯಾಸ ಮಹರ್ಷಿಗಳು.**

**2**. ದಾಯಾದಿ ಮತ್ಸರಕ್ಕೆ ಉದಾಹರಣೆಯಾದ ಮಹಾಕಾವ್ಯ **ಮಹಾಭಾರತ**.

**3**. ಮಹಾಭಾರತದಲ್ಲಿ ಶೌರ್ಯ, ದಾನಕ್ಕೆ ಹೆಸರಾದ ವ್ಯಕ್ತಿ **ಕರ್ಣ**.

**4**. **ಕರ್ಣನನ್ನು** ಇನತನಯ ಎಂದು ಕರೆಯುತ್ತಾರೆ.

**5**. ಧನುಜರಿಪು ಎಂದರೆ **ಕೃಷ್ಣ**.

**6**. ಮೇದಿನೀಪತಿ ನೀನು ಎಂದು ಕೃಷ್ಣನು **ಕರ್ಣನನ್ನು** ಉದ್ದೇಶಿಸಿ ಹೇಳುತ್ತಾನೆ.

**7**. ಅಶ್ವಿನಿದೇವತೆಗಳ ವರಪ್ರಸಾದದಿಂದ **ನಕುಲ ಮತ್ತು ಸಹದೇವರು** ಜನಿಸಿದರು.

**8**. ಕುಮಾರವ್ಯಾಸನಿಗೆ **'ರೂಪಕಸಾಮ್ರಾಜ್ಯಚಕ್ರವರ್ತಿ'** ಎಂಬ ಬಿರುದಿತ್ತು.

**9**. **ವ್ಯಾಸರು ಬರೆದ ಮಹಾಭಾರತವನ್ನು ಕನ್ನಡದಲ್ಲಿ ಬರೆದನಾದ್ದರಿಂದ** ನಾರಣಪ್ಪನಿಗೆ ಕುಮಾರವ್ಯಾಸನೆಂಬ ಬಿರುದು ಬಂತು.

**10**. ಕೃಷ್ಣನ ಭೇದತಂತ್ರದ ಮಾತನ್ನು ಕೇಳಿ ಕರ್ಣನು **ಕುರುಪತಿಗೆ ಕೇಡಾಯ್ತು** ಎಂದು ಕೊಂಡನು.

**11**. ಕೌರವೇಂದ್ರನ ಕೊಂದೆ ನೀನು ಎಂದು ಕರ್ಣನು **ಕೃಷ್ಣನಿಗೆ** ಹೇಳುತ್ತಾನೆ.

**12**. ನಾಳಿನ ಭಾರತವು **ಮಾರಿಗೌತಣವಾಯ್ತು**.

**13**. ಕರ್ಣನು **ಪಾಂಡವರನ್ನು** ನೋಯಿಸುವುದಿಲ್ಲವೆಂದು ಆಣೆಮಾಡುತ್ತಾನೆ.

**14**. ರವಿಸುತನ ಕಿವಿಯಲ್ಲಿ ಭಯವನ್ನು ಬಿತ್ತಿದವನು **ಕೃಷ್ಣ**.

**15**. ಕುಮಾರವ್ಯಾಸನು ತನ್ನ ಕೃತಿಗಿಟ್ಟ ಹೆಸರು **' ಕರ್ಣಾಟಭಾರತಕಥಾಮಂಜರಿ '**

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರ :**

**1**. ಕೃಷ್ಣನು ಕರ್ಣನನ್ನು ರಥದಲ್ಲಿ ತನ್ನ ಸರಿಸಮನಾಗಿ ಎಳೆದು ಕುಳ್ಳಿರಿಸಿಕೊಂಡು, ಸರಸದಿಂದ ಮೈದುನ ಎಂದು ಕರೆದನು. ಆಗ ಕರ್ಣನ ಮನದಲ್ಲಿ ಸ್ವಲ್ಪಮಟ್ಟಿಗೆ ಭಯವಾವರಿಸಿತು. ಅಲ್ಲದೆ ಕೌರವರಲ್ಲಿ ಯಾದವರಲ್ಲಿ ಯಾವ ಭೇದವಿಲ್ಲ. ನೀನು ಈ ಮೇದಿನಿ (ಭೂಮಿ)ಗೆ ನಿಜವಾದ ಒಡೆಯ ಈ ವಿಷಯದ ಅರಿವು ನಿನಗಿಲ್ಲ. ಎಂದು ಕೃಷ್ಣನು ಹೇಳಿದಾಗ ಕರ್ಣನಿಗೆ ಆಶ್ಚರ್ಯಕ್ಕಿಂತ ಮನಸ್ಸಿನಲ್ಲಿ ಭಯ ಆವರಿಸಿತು.

**2**. ಕುಂತಿಯು ಸೂರ್ಯನ ಅನುಗ್ರಹದಿಂದ ಕರ್ಣನನ್ನೂ, ಯಮಧರ್ಮನ ಅನುಗ್ರಹದಿಂದ ಯುಧಿಷ್ಠಿರನನು ವಾಯುದೇವನಿಂದ ಭೀಮನನ್ನೂ, ದೇವೇಂದ್ರನಿಂದ ಅರ್ಜುನನ್ನು ಪಡೆದಳು. ಮಾದ್ರಿಯು ಅಶ್ವಿನಿದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಮಕ್ಕಳನ್ನಾಗಿ ಪಡೆದಳು.

**3**. ಕೃಷ್ಣನ ಮಾತುಗಳನ್ನು ಕೇಳಿ ಕರ್ಣನ ಗಂಟಲು ತುಂಬಿಬಂದಿತು. ಕಣ್ಣಿನಲ್ಲಿ ನೀರು ತುಂಬಿಕೊಂಡವು. ಮನನೊಂದು ಅತೀವ ವೇದನೆಯಿಂದ 'ಅಕಟಾ ಕುರುಪತಿಗೆ ಕೇಡಾದುದು', ಎಂದು ಕೊಂಡು ಕೃಷ್ಣನು ತನ್ನ ಜನ್ಮವೃತ್ತಾಂತವನ್ನು ತಿಳಿಸಿ ಪಾಂಡವರ ಮೇಲಿದ್ದ ನನ್ನ ಹಗೆತನವು ಯುದ್ಧದಲ್ಲಿ ಹೊಗೆಯಾಗುವಂತೆ ಮಾಡಿ ನನ್ನನ್ನು ಕೊಂದನು, ಎಂದು ಮನದಲ್ಲಿಯೇ ಚಿಂತಿಸಿದನು.

**4**. ಕೃಷ್ಣನು ಕರ್ಣನನ್ನು ಬಹಳ ಸಲುಗೆಯಿಂದ ತನ್ನ ರಥದಲ್ಲಿ ಬಹಳ ಹತ್ತಿರದಲ್ಲಿ ಕುಳ್ಳಿರಿಸಿಕೊಂಡು ಆತನ ಜನ್ಮವೃತ್ತಾಂತವನ್ನು ತಿಳಿಸಿ ರಾಜ್ಯದ ಆಮಿಷ ಒಡ್ಡುತ್ತಾನೆ. ಆಗ ಕರ್ಣನು ತಾನು ಈ ರಾಜ್ಯದ ಆಸೆಗೆ ಒಳಗಾಗುವುದಿಲ್ಲ, ಕುಂತಿಸುತರು ಹಾಗೂ ದುರ್ಯೋಧನಾದಿಗಳು ನನ್ನ ಸೇವೆ ಮಾಡಬೇಕೆಂಬುದನ್ನು ಬಯಸುವವನಲ್ಲ. ನನ್ನನ್ನು ಕೈಹಿಡಿದು ಕಾಪಾಡಿದ ದಾತಾರನಿಗೆ ಅವನ ಹಗೆಗಳ ಕತ್ತು ಕತ್ತರಿಸಿ ಒಪ್ಪಿಸಿ ತೃಪ್ತಿಪಡಿಸುತ್ತೇನೆಂದು ತುಂಬಾ ಉತ್ಸಾಹದಿಂದಿದ್ದೆ. ಆದರೆ ನೀನು ನನ್ನ ಜನ್ಮವೃತ್ತಾಂತವನ್ನು ತಿಳಿಸಿ ಕೌರವೇಂದ್ರನನ್ನು ಕೊಂದೆ ಎಂಬುದಾಗಿ ಮನನೊಂದು ಹೇಳುತ್ತಾನೆ. ಪರೋಕ್ಷವಾಗಿ ಕರ್ಣನ ಮನಸ್ಥೈರ್ಯವನ್ನು ಕೊಂದದ್ದರಿಂದ ಆತ್ಮೀಯ ಆತ್ಮದಂತಿದ್ದ ಕೌರವೇಂದ್ರನನ್ನು ಕೊಂದಾಯಿತು ಎಂಬುದಾಗಿದೆ.

**5**. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನ ದೃಢವಾಗಿತ್ತು. ಈ ವಿಚಾರವಾಗಿ ಕೃಷ್ಣನಿಗೆ ಹೀಗೆ ಹೇಳುತ್ತಾನೆ. ವೀರ ಕೌರವನೇ ನನ್ನ ಒಡೆಯ. ಆತನ ಶತ್ರುಗಳೇ ನನ್ನ ಶತ್ರುಗಳು. ಆತನ ಹೊಗಳಿಕೆಯೇ ನನ್ನ ಹೊಗಳಿಕೆ ಕೂಡ. ಶೌರಿಯೇ ಕೇಳು ನಾಳೆ ಪಾಂಡವರೊಡನೆ ನಡೆಯುವ ಸಮರದಲ್ಲಿ ನನ್ನ ಭುಜಬಲದ ಪರಾಕ್ರಮದ ಸಂಪನ್ನತ್ವವನ್ನು ತೋರಿಸಿ ಚದುರಂಗ ಬಲವನ್ನು ಮಾರಿಗೌತಣ ನೀಡುವೆನು. ಚದುರಂಗ ಬಲದಲ್ಲಿ ಕೌರವನ ಋಣವನ್ನು ಹಿಂಗುವಂತೆ ಹೋರಾಡುತ್ತೇನೆ. ಹೀಗೆ ಹೋರಾಡಿ ನಾನೇ ಪ್ರಾಣಾರ್ಪಣೆ ಮಾಡುತ್ತೇನೆಯೇಹೊರತೂ ಪಾಂಡವರೈವರನ್ನು ನೋಯಿಸುವುದಿಲ್ಲ. ರಾಜೀವಸಖನ ಮೇಲಾಣೆ ಎಂದು ದೃಢವಾಗಿ ಹೇಳುತ್ತಾನೆ.

( **ಸೂಚನೆ : ಸಂದರ್ಭಾನುಸಾರ ಸ್ವಾರಸ್ಯದ ಉತ್ತರ ಒಂದನ್ನು ಮಾದರಿಯಾಗಿ ನೀಡಿದೆ ಉಳಿದವುಗಳಿಗೆ ಈ ಮಾದರಿಯಲ್ಲಿ ಉತ್ತರಿಸಿ.**)

1. ಈ ವಾಕ್ಯವನ್ನು ಕವಿ ಕುಮಾರವ್ಯಾಸನ ಕಾವ್ಯ ' ಕರ್ಣಾಟ ಭಾರತ ಕಥಾ ಮಂಜರಿ' ಕೃತಿಯ ಉದ್ಯೋಗಪರ್ವದಿಂದ "ಕೌರವೇಂದ್ರನ ಕೊಂದೆ ನೀನು" ಎಂಬ ಕಾವ್ಯಭಾಗದಿಂದ ಆಯ್ಕೆಮಾಡಿಕೊಳ್ಳಲಾಗಿದೆ.
   ಈ ವಾಕ್ಯವನ್ನು ಶ್ರೀಕೃಷ್ಣನು, ಕರ್ಣನ ಮನಸ್ಸಿಗೆ ನಾಟುವಂತೆ ಅವನ ಜೀವನ ವೃತ್ತಾಂತವನ್ನು ತಿಳಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳುತ್ತಾನೆ. ಸಂಧಾನ ವಿಫಲವಾಗಿ ಕೃಷ್ಣನು ಕರ್ಣನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಮೈದುನತನದ ಸರಸದಿಂದ ಕರ್ಣನ ಜನ್ಮ ವೃತ್ತಾಂತವನ್ನು ತಿಳಿಸುವ ಪೂರ್ವ ಪೀಠಿಕೆಯಾಗಿ ಕರ್ಣನನ್ನು ಸೂರ್ಯಪುತ್ರ ಎಂದು ಕರೆದು ಅವನ ಜನ್ಮ ವೃತ್ತಾಂತವನ್ನು ಕಿವಿಯಲ್ಲಿ ಕೃಷ್ಣನು ತಿಳಿಸುವ ಸಂದರ್ಭವನ್ನು ಕವಿ ಈ ಮಾತುಗಳಲ್ಲಿ ಹೇಳುವ ಸಂದರ್ಭವಿದು.

## : ಕೌರವೇಂದ್ರನ ಕೊಂದೆ ನೀನು ಎಂಬ ಪದ್ಯಭಾಗದಲ್ಲಿ ಬರುವ ಮುಖ್ಯ ವ್ಯಾಕರಣಾಂಶಗಳು :

➢ **ಹೊಸಪದಗಳ ಅರ್ಥ :**

1. ದಾನವ ಸೂದನ – ಕೃಷ್ಣ.
2. ಲಲನೆ – ನಾರಿ.
3. ಕಿಂಕರ – ಸೇವಕ.
4. ದೃಗುಜಲ – ಕಣ್ಣೀರು.
5. ಅರುಹು – ಹೇಳು
6. ಸೂನು – ಮಗ
7. ಮರುಳ – ಹುಚ್ಚ.
8. ನೃಪತಿ – ರಾಜ.
9. ಬಾಯ್ದಂಬುಲ – ಎಂಜಲು.
10. ರಾಜೀವಸಖ – ಸೂರ್ಯ
11. ಕೈವಾರ – ಹೊಗಳಿಕೆ.

**ತತ್ಸಮ – ತದ್ಭವಗಳು**

1. ಹಸಾದ – ಪ್ರಸಾದ
2. ಬೀರ – ಬೀರ.
3. ರಾಯ – ರಾಜ
4. ಹಗೆ – ಪಗೆ
5. ದಾತಾರ – ದಾತೃ
6. ಸಿರಿ – ಶ್ರೀ

➢ **ಸಮಾಸಪದಗಳು :**

1. **ಇನತನೂಜ** = ಇನ (ಸೂರ್ಯ)ನಿಗೆ ತನೂಜ ಯಾರೋ ಆತ (ಕರ್ಣ) – ಬಹುವ್ರೀಹಿಸಮಾಸ.
2. **ಧನುಜರಿಪು** = ಧನುಜರಿಗೆ ರಿಪುವಾಗಿರುವವನು ಯಾರೋ ಆತ ( ಕೃಷ್ಣ ) – ಬಹುವ್ರೀಹಿಸಮಾಸ.
3. **ಮುರಾರಿ** = ಮುರನನ್ನು ಸಂಹರಿಸಿದವನು ಯಾರೋ ಆತ ( ಕೃಷ್ಣ ) – ಬಹುವ್ರೀಹಿಸಮಾಸ.
4. **ರಾಜೀವಸಖ** = ರಾಜೀವನಿಗೆ ಸಖನಾಗಿರುವವನು ಯಾರೋ ಆತ ( ಸೂರ್ಯ) – ಬಹುವ್ರೀಹಿಸಮಾಸ.
5. **ಕುರುಪತಿ** = ಕರುಕುಲಕ್ಕೆ ಪತಿಯಾಗಿರುವವನು ಯಾರೋ ಆತ ( ದುರ್ಯೋಧನ) – ಬಹುವ್ರೀಹಿಸಮಾಸ.
6. **ಮಾದ್ರಮಾಗಧ ಯಾದವರು** = ಮಾದ್ರರೂ + ಮಾಗದರೂ + ಯಾದವರು – ದ್ವಂದ್ವಸಮಾಸ
7. **ನಕುಲಸಹದೇವ** = ನಕುಲನೂ + ಸಹದೇವನೂ = ದ್ವಂದ್ವಸಮಾಸ.
8. **ರವಿಸುತ** = ರವಿಯ + ಸುತ = ತತ್ಪುರುಷಸಮಾಸ
9. **ಮೇದಿನಿಪತಿ** = ಮೇದಿನಿಗೆ + ಪತಿ = ತತ್ಪುರುಷಸಮಾಸ
10. **ಬಾಯ್ದಂಬುಲ** = ಬಾಯಿಯಲ್ಲಿ + ತಂಬುಲ = ತತ್ಪುರಷಸಮಾಸ.
11. **ಕೈಯಾನು** = ಕೈಯನ್ನು + ಆನು = ಕ್ರಿಯಾಸಮಾಸ.
12. **ಹೊಗೆದೋರು** = ಹೊಗೆಯನ್ನು + ತೋರು = ಕ್ರಿಯಾಸಮಾಸ.

➢ **ಸಂಧಿಪದಗಳು**

1. **ಕೌರವೇಂದ್ರ** = ಕೌರವ + ಇಂದ್ರ = ಗುಣಸಂಧಿ.
2. **ಭೇದವಿಲ್ಲ** = ಭೇದ + ಇಲ್ಲ = ಆಗಮಸಂಧಿ.
3. **ಮೊದಲೆರಡು** = ಮೊದಲು+ ಎರಡು = ಲೋಪಸಂಧಿ.
4. **ನಿನ್ನಾಣೆ** = ನಿನ್ನ + ಆಣೆ = ಲೋಪಸಂಧಿ.
5. **ಕೈಯಾನುವರೆ** = ಕೈ + ಆನುವರೆ = ಆಗಮಸಂಧಿ.
6. **ಮಾರಿಗೌತಣ** =ಮಾರಿಗೆ + ಔತಣ = ಲೋಪಸಂಧಿ.

➢ **ಕೊಟ್ಟಿರುವ ಪದ್ಯದ ಸಾಲುಗಳಿಗೆ ಗಣ ವಿಭಾಗ ಮಾಡಿ ಪ್ರಸ್ತಾರ ಹಾಕಿ ಛಂದಸ್ಸಿನ್ನು ಹೆಸರಿಸಿ ಲಕ್ಷಣ ಬರೆಯಿರಿ**

- U | - - | - U | - -
ಏನು | ಹೇಳ್ಳೈ | ಕರ್ಣ | ಚಿತ್ತ

- U | – U U | UUU | – –
ಗ್ಲಾನಿ | ಯಾವುದು | ಮನಕೆ | ಕುಂತೀ

- U | UUUU | – U | - U U | - U | - UU | -
ಸೂನು | ಗಳಬೆಸ | ಕೈ ಸಿ | ಕೊಂಬುದು | ಸೇರ | ದೇನಿನ | ಗೆ – **ಇದು ಭಾಮಿನಿ ಷಟ್ಪದಿ**

( **ಲಕ್ಷಣ :** ಷಟ್ಪದಿಯಲ್ಲಿ ಆರು ಪಾದಗಳಿದ್ದು 1, 2, 4, 5 ನೇಯ ಪಾದಗಳು ಒಂದು ಸಮನಾಗಿದ್ದು, 3 ಮತ್ತು 4 ನೇ ಪಾದಗಳು ಒಂದು ಸಮನಾಗಿರುತ್ತವೆ. ಬಾಮಿನಿ ಷಟ್ಪದಿಯಲ್ಲಿ ಮೂರು–ನಾಲ್ಕು ಮಾತ್ರೆಗಳ ಗಣವಿಭಜನೆಯಿದ್ದು, 1,2,3,4ನೇ ಸಾಲುಗಳಲ್ಲಿ ಮೂರು – ನಾಲ್ಕು ಮಾತ್ರೆಯ ಎರೆಡೆರಡು ಗಣಗಳು ಹಾಗೂ 3 ಮತ್ತು 6 ನೇ ಸಾಲುಗಳಲ್ಲಿ ಮೂರು – ನಾಲ್ಕು ಮಾತ್ರೆಯ ಮೂರು ಮೂರು ಗಣಗಳು ಹಾಗೂ ಕಡೆಯಲ್ಲಿ ಒಂದು ಗುರು ಬರುತ್ತದೆ. 1, 2 ಮತ್ತು 3 ನೇ ಪಾದಗಳು ಪೂರ್ವಾರ್ಧವೆಂತಲೂ, 4,5 ಮತ್ತು 6 ನೇ ಸಾಲುಗಳನ್ನು ಉತ್ತರಾರ್ಧವೆಂತಲೂ ಕರೆಯಲ್ಪಡುತ್ತದೆ. )

## ಪದ್ಯಪಾಠ : 7. ವೀರಲವ

### - ಲಕ್ಷ್ಮೀಶ

**ಕವಿ ಕೃತಿ ಪರಿಚಯ :** ಲಕ್ಷ್ಮೀಶನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ದೇವನೂರಿನಲ್ಲಿ ಕ್ರಿ.ಶ.1550ರಲ್ಲಿ ಜನಿಸಿದ್ದನು. ಈತನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇವೆ. ಈತನು ವಾರ್ಧಕ ಷಟ್ಪದಿಯಲ್ಲಿ 'ಜೈಮಿನಿ ಭಾರತ' ಎಂಬ ಪ್ರಸಿದ್ಧ ಕೃತಿಯನ್ನು ರಚಿಸಿದ್ದಾನೆ. ಈತನಿಗೆ ಉಪಮಾಲೋಲ, ಕರ್ಣಾಟಕ ಕವಿಚೂತವನಚೈತ್ರ ಎಂಬ ಬಿರುದುಗಳಿವೆ.

**ಈ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

1. ವಿಷ್ಣು ಮಾನವ ರೂಪವನ್ನು ಧರಿಸಿದುದು ಏಕೆ?
2. ಶ್ರೀರಾಮನು ಕೈಗೊಂಡ ಯಾಗ ಯಾವುದು?
3. ಸೀತೆಯು ಯಾರ ಆಶ್ರಮವಾಸಿಯಾಗಿದ್ದಳು?
4. ಶ್ರೀರಾಮನ ಅಶ್ವಮೇಧದ ಕುದುರೆಯ ಬೆಂಗಾವಲಿಗೆ ಬಂದವರು ಯಾರು?
5. ಪಶ್ಚಿಮ ದಿಕ್ಕಿನ ಒಡೆಯ ಎಂದು ಯಾರನ್ನು ಕರೆಯುತ್ತಾರೆ?
6. ಶ್ರೀರಾಮನ ಅಶ್ವಮೇಧದ ಕುದುರೆಯು ಯಾರ ಆಶ್ರಮವನ್ನು ಹೊಕ್ಕಿತು?
7. ಶ್ರೀ ರಾಮನ ವಂಶ ಯಾವುದು?
8. ಶ್ರೀರಾಮನ ತಂದೆ ತಾಯಿಗಳು ಯಾರು?
9. ಲವಕುಮಾರನ ತಾಯಿ ಯಾರು?
10. ಯಜ್ಞಾಶ್ವವನ್ನು ಕಟ್ಟಿ ಹಾಕಿದವರು ಯಾರು?
11. ಮುನಿಸುತರು ಹೆದರಲು ಕಾರಣವೇನು?
12. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?

**ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:**

1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

**ಸಂದರ್ಭದೊಡನೆ ವಿವರಿಸಿ:**

1. " ರಘೂದ್ವಹನ ಸೊಲ್ಗೇಳಿ ನಮಿಸಲ್ "
2. " ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೇ "
3. " ಅರಸುಗಳ ವಾಜಿಯಂ ಬಿಡು "
4. " ಜಾನಕಿಯ ಮಗನಿದಕೆ ಬೆದರುವನೆ "

**ಪದ್ಯಭಾಗ ಪೂರ್ಣಗೊಳಿಸಿ:**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ॥.

## ಭಾಗ - ಬಿ

**ಬಹು ಅಂಶ ಆಯ್ಕೆ ಪ್ರಶ್ನೆಗಳು:**

**1.' ರಗಳೆ ' ಪದದ ತದ್ಭವ ರೂಪವಿದೆ.**

ಎ) ರಘಟಾ ಬಿ) ರಗಳಾ ಸಿ) ರಾಗಟ ಡಿ) ರಂಗಗೀತೆ

**2. ಇವುಗಳಲ್ಲಿ ಬಹುಪಾದಗಳುಳ್ಳ ಪದ್ಯ :**

ಎ) ಕಂದ ಬಿ) ಷಟ್ಪದಿ ಸಿ) ವೃತ್ತ ಡಿ) ರಗಳೆ

**3. ವಾರ್ಧಕ ಷಟ್ಪದಿಯ ಒಂದು ಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ :**

ಎ) 102 ಬಿ) 140 ಸಿ) 144 ಡಿ) 64

**4. ಇವುಗಳಲ್ಲಿ ಯಾವುದು ರಗಳೆಯ ವಿಧವಾಗಿಲ್ಲ :**

ಎ) ಉತ್ಸಾಹ ಬಿ) ಲಲಿತ ಸಿ) ಸರಸಿ ಡಿ) ಮಂದಾನಿಲ

**5. ವಾರ್ಧಕ ಷಟ್ಪದಿಯಲ್ಲಿ ಪ್ರತಿ ಗಣವು ಎಷ್ಟು ಮಾತ್ರೆಗಳಿಂದ ಕೂಡಿರುತ್ತದೆ?**

ಎ) 3 ಬಿ) 6 ಸಿ) 5 ಡಿ) 4

**6. ' ನೆತ್ತಿಯೊಳ್ ' ಇದು ಈ ವಿಭಕ್ತಿಗೆ ಉದಾಹರಣೆಯಾಗಿದೆ.**

ಎ) ಪ್ರಥಮ ಬಿ) ದ್ವಿತೀಯ ಸಿ) ತೃತೀಯ ಡಿ) ಸಪ್ತಮಿ

**7. 'ಲಿಖಿತಮಂ' ಇಲ್ಲಿರುವ ವಿಭಕ್ತಿ :**

ಎ) ಪ್ರಥಮ ಬಿ) ದ್ವಿತೀಯ ಸಿ) ತೃತೀಯ ಡಿ) ಚತುರ್ಥಿ

**8. 'ಕುವರಂ' ಇಲ್ಲಿರುವ ಅಕ್ಷರಗಣ :**

ಎ) ಭ-ಗಣ ಬಿ) ಸ-ಗಣ ಸಿ) ಮ-ಗಣ ಡಿ) ತ-ಗಣ

**9. ಉರ್ವಿಯೊಳ್ – ಈ ಪದದಲ್ಲಿರುವ ಕಾರಕಾರ್ಥ :**

ಎ) ಕರ್ಮಾರ್ಥ ಬಿ) ಸಂಪ್ರದಾನ ಸಿ) ಅಪಾದಾನ ಡಿ) ಅಧಿಕರಣ

**10. ' ಅಗಡು ' ಪದದ ಹೊಸಗನ್ನಡ ರೂಪ ಇದಾಗಿದೆ :**

ಎ) ಅಡಗಿಕೋ ಬಿ) ಶೌರ್ಯ ಸಿ) ಕುದುರೆ ಡಿ) ಹಡಗು

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ:**

1. ಭಾಮಿನಿ : 102 :: ವಾರ್ಧಕ : ________
2. ವೃತ್ತಗಳು : ಅಕ್ಷರಗಣ :: ರಗಳೆ : ________
3. ಸೊಲ್ಗೇಳಿ : ಕ್ರಿಯಾ ಸಮಾಸ :: ಪೂದೋಟ : ________
4. ಬಿಲ್ದಿರುವನೇರಿಸಿ : ಕ್ರಿಯಾ ಸಮಾಸ :: ನಲ್ಗುದುರೆ : ________
5. ನೃಪ : ರಾಜ :: ಅಬ್ಧಿಪ : ________
6. ಸೊಲ್ಗೇಳಿ : ಸೊಲ್ಲನ್ನು+ಕೇಳಿ :: ನಲ್ಗುದುರೆ : ________
7. ವೀರ : ಬೀರ :: ಬಂಜೆ : ________
8. ಗಳ : ಕೊರಳು :: ವಾಜಿ : ________

**ಉತ್ತರಗಳು:** 1. ಎ) ರಘಟಾ 2. ಡಿ) ರಗಳೆ 3. ಸಿ) 144 4. ಸಿ) ಸರಸಿ 5. ಸಿ) 5 6. ಡಿ) ಸಪ್ತಮಿ 7. ಬಿ) ದ್ವಿತೀಯ 8. ಬಿ) ಸ-ಗಣ 9. ಡಿ) ಅಧಿಕರಣ 10. ಬಿ. ಶೌರ್ಯ

**ಉತ್ತರಗಳು:** 1) 144 2) ಮಾತ್ರಾಗಣ 3) ತತ್ಪುರುಷ ಸಮಾಸ 4) ಕರ್ಮಧಾರಯ 5) ವರುಣ 6) ನಲ್ಲಿತು+ ಕುದುರೆ 7) ವಂಧ್ಯಾ 8) ಕುದುರೆ

**ಪ್ರಶ್ನೆಗಳಿಗೆ ಉತ್ತರಗಳು :**

1. ವಿಷ್ಣುವು 'ದುಷ್ಟ ಶಿಕ್ಷಣೆಗಾಗಿ ಶಿಷ್ಟ ರಕ್ಷಣೆ'ಗಾಗಿ ಮಾನವ ರೂಪವನ್ನು ಧರಿಸಿದನು.
2. ಶ್ರೀರಾಮನು ಅಶ್ವಮೇಧ ಯಾಗವನ್ನು ಕೈಗೊಂಡನು.
3. ಸೀತೆಯು ವಾಲ್ಮೀಕಿ ಮಹರ್ಷಿಗಳ ಆಶ್ರಮವಾಸಿಯಾಗಿದ್ದಳು.
4. ಶ್ರೀರಾಮನ ಅಶ್ವಮೇಧದ ಕುದುರೆಯ ಬೆಂಗಾವಲಿಗೆ ಶತ್ರುಘ್ನನು ಬಂದಿದ್ದನು.
5. ಪಶ್ಚಿಮ ದಿಕ್ಕಿನ ಒಡೆಯ ವರುಣ.
6. ಶ್ರೀರಾಮನ ಅಶ್ವಮೇಧದ ಕುದುರೆಯು ವಾಲ್ಮೀಕಿಯ ಆಶ್ರಮವನ್ನು ಹೊಕ್ಕಿತು.
7. ಶ್ರೀರಾಮನು ರಘುವಂಶದವನು.
8. ಶ್ರೀರಾಮನ ತಾಯಿ ಕೌಶಲ್ಯ, ತಂದೆ ದಶರಥ.
9. ಲವಕುಮಾರನ ತಾಯಿ ಸೀತೆ.
10. ಯಜ್ಞಾಶ್ವವನ್ನು ಲವಕುಮಾರನು ಕಟ್ಟಿಹಾಕಿದನು.
11. ನಾವು ಕುದುರೆಯನ್ನು ಕಟ್ಟಿದರೆ ಅರಸನ ಕಡೆಯವರು ನಮ್ಮನ್ನು ಬಡಿಯುವರು ಎಂದು ಮುನಿಸುತರು ಹೆದರಿದರು.
12. ಲವನು ತನ್ನ ಉತ್ತರೀಯದಿಂದ ಕುದುರೆಯನ್ನು ಕಟ್ಟಿದನು.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು :**

1. ರಾಮನು ಅಶ್ವಮೇಧಯಾಗವನ್ನು ಕೈಗೊಂಡು ಸಂಚಾರಕ್ಕೆ ತೆರಗಳಿದ ಕುದುರೆಯ ಬೆಂಗಾವಲಿಗೆ ಶತ್ರುಘ್ನನನ್ನು ಕಳುಹಿಸಿದ್ದನು. ಕುದುರೆ ದೇಶ, ಪಟ್ಟಣ, ಉಪವನಗಳನ್ನು ಸುತ್ತಾಡುತ್ತ ವಾಲ್ಮೀಕಿಯ ಆಶ್ರಮದಲ್ಲಿದ್ದ ಹುಲ್ಲಿನ ಹಸಿರನ್ನು ಕಂಡು ಆಶ್ರಮವನ್ನು ಪ್ರವೇಶಿಸಿತು.
2. ಯಜ್ಞಾಶ್ವದ ಹಣೆಪಟ್ಟಯಲ್ಲಿ ಈ ರೀತಿ ಬರೆದಿತ್ತು. ಇದು ಭೂಮಿಯ ಮೇಲೆ ಕೌಸಲ್ಯೆಯ ಮಗನಾದ ಶ್ರೀರಾಮನ ಯಜ್ಞಾಶ್ವ. ವೀರನೆನಿಸುವವನು ಇದನ್ನು ಕಟ್ಟಲಿ ಎಂಬುದಾಗಿ ಬರೆದಿತ್ತು.
3. ಯಜ್ಞಾಶ್ವನು ವಾಲ್ಮೀಕಿ ಆಶ್ರಮವನ್ನು ಹೊಕ್ಕು ಗರಿಕೆ ಹುಲ್ಲನ್ನು ಮೇಯುವುದನ್ನು ಕಂಡ ಲವನು ಮುನಿಕುಮಾರರೊಡನೆ ಕುದುರೆ ಬಳಿ ಬಂದು ಅದರ ಹಣೆಯಲ್ಲಿದ್ದ ಬರಹವನ್ನು ಓದಿದನು. ವೀರನೆನಿಸುವವನು ಇದನ್ನು ಕಟ್ಟಲಿ ಎಂಬುದನ್ನು ಓದಿ ಲವನು ಕೋಪದಿಂದ ಕುದುರೆಯನ್ನು ಹಿಡಿದು, ಆತನ ಗರ್ವವನ್ನು ಬಿಡಿಸದಿದ್ದೊಡೆ ನನ್ನ ವೀರಮಾತೆಯನ್ನು ಬಂಜೆಯೆನ್ನುವುದಿಲ್ಲವೆ? ಎಂದು ತನ್ನ ಉತ್ತರೀಯದಿಂದ ಕುದುರೆಯನ್ನು ಬಾಳೆಯ ಗಿಡಕ್ಕೆ ಕಟ್ಟಿದನು. ಇದನ್ನು ಕಂಡ ಮುನಿಕುಮಾರರು ಹೆದರಿ 'ಲವನೇ ಬೇಡ ಬೇಡ, ಇದು ಶ್ರೀರಾಮನ ಯಜ್ಞಾಶ್ವ, ಅದರ ಕಡೆಯವರು ಬಂದರೆ ನಮ್ಮನ್ನು ಬಡಿಯುತ್ತಾರೆ, ಇದನ್ನು ಬಿಟ್ಟು ಬಿಡು ಎಂದು ಹೇಳತೊಡಗಿದರು.

**ಸಂದರ್ಭದೊಡನೆ ವಿವರಿಸಿ: ಉತ್ತರಗಳು:**

1. ಈ ವಾಕ್ಯವನ್ನು ಲಕ್ಷ್ಮೀಶನು ರಚಿಸಿರುವ 'ಜೈಮಿನಿ ಭಾರತ' ಕೃತಿಯಿಂದ ತೆಗೆದುಕೊಂಡಿರುವ 'ವೀರಲವ' ಎಂಬ ಪದ್ಯದಿಂದ ಆರಿಸಿದೆ. ಈ ಮಾತನ್ನು ಕವಿ ರಾಮನ ಯಜ್ಞಾಶ್ವದ ಸದ್ದು ಕೇಳಿಯೇ ಬಂದು ಭಕ್ತಿಭಾವದಿಂದ ನಮಿಸಿ ಅದಕ್ಕೆ ಎಲ್ಲ ರಾಜರೂ ಶರಣಾಗುತ್ತಿದ್ದರೆಂದು ವಿವರಿಸಿದ್ದಾರೆ. ಯಜ್ಞಾಶ್ವವು ದೇಶ, ನಗರ, ಉಪವನಗಳೆಲ್ಲೆಡೆಯಲ್ಲಿಯೂ ಸಂಚರಿಸುತ್ತಿರಲು ಕೆಲವು ನೃಪನಿಗೆ ಹೆದರಿ ನಮಸ್ಕರಿಸುತ್ತಿದ್ದರೆಂಬ ಸಂಗತಿಯನ್ನು ಸೂಚಿಸುವ ಸಂದರ್ಭ ಇದಾಗಿದೆ.

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸಿನ ಹೆಸರನ್ನು ಬರೆಯಿರಿ**

_ _ U | U U _ U | U U U U U | _ U U U
ಬ ಲ್ಲಯ್ಯ | ನೃ ರಂ ಜಿ | ತ ಡೆ ಯ ದೆ ರ | ಘೂದ್ವಹನ

_ _ U | U U U U U | _ U U U | _ U U U
ಸೊಲ್ಗೇಳಿ | ನ ಮಿ ಸಲಿಳೆ | ಯೊಳ್ಚರಿಸು | ತ ಧ್ವ ರ ದ

_ U U U | _ U _ | _ U U U / _ U U U | U U _ U | U U U U U | _
ನ ಲ್ಗುದುರೆ | ಬಂದುವಾ | ಲ್ಮೀಕಿಯನಿ / ಜಾಶ್ರಮದ | ವಿನಿಯೋಗ | ದುಪವನದೊ | ಳು

ಛಂದಸ್ಸು: ವಾರ್ಧಕ ಷಟ್ಪದಿ

**ಲಕ್ಷಣ : ಆರು ಸಾಲುಗಳು, ಆದಿಪ್ರಾಸ, 1,2,4,5ನೇ ಸಾಲುಗಳು ಸಮವಾಗಿರುತ್ತವೆ. 5ಮಾತ್ರೆಗಳ 4 ಗಣಗಳು ಇದ್ದು 20 ಮಾತ್ರೆಗಳಿರುತ್ತವೆ. 3 ಮತ್ತು 6 ನೇ ಸಾಲಿನಲ್ಲಿ 5 ಮಾತ್ರೆಗಳ 6 ಗಣಗಳು ಬಂದು ಮೇಲೊಂದು ಗುರುವು ಬಂದಿರುತ್ತದೆ. ಒಟ್ಟು 144 ಮಾತ್ರೆಗಳಿರುತ್ತವೆ.**

## : ವೀರಲವ' ಪದ್ಯಭಾಗದಲ್ಲಿ ಬರುವ ವ್ಯಾಕರಣಾಂಶಗಳು :

➢ **ಹೊಸಪದಗಳ ಅರ್ಥ :**

**1.** ನೃಪ - ದೊರೆ, **2.** ಚರಿಸು - ಸಂಚರಿಸು, **3.** ತುರಂಗ, ವಾಜಿ, ಹಯ - ಕುದುರೆ, **4.** ಅರ್ಹರ್ - ಸಮರ್ಥರು.
**5.** ಅಬ್ಧಿಪ - ವರುಣ, **6.** ಉರ್ವಿ - ಭೂಮಿ **7.** ವಾಸಿ - ಪ್ರತಿಜ್ಞೆ, **8.** ಗಳ - ಕೊರಳು **9.** ಕದಳೀದ್ರುಮ - ಬಾಳೆಗಿಡ,
**10.** ಅಗಡು - ಶೌರ್ಯ, **11.** ಹಾರ್ವರು - ಬ್ರಾಹ್ಮಣರು. **12.** ಲಿಖಿತ - ಬರಹ ( ಬರವಣಿಗೆ)

➢ **ತತ್ಸಮ – ತದ್ಭವಗಳು :**

1. ವೀರ – ಬೀರ 2. ಯಜ್ಞ – ಜನ್ನ 3. ಬಂಜೆ – ವಂಧ್ಯಾ 4. ಕುವರ – ಕುಮಾರ 5. ಲೋಕ – ಲೋಗ

➢ **ಸಂಧಿಗಳು :**

1. ಪೂದೋಟ - ಪೂ + ತೋಟ = ಆದೇಶಸಂಧಿ.
2. ಸೋಲ್ಗೇಳಿ - ಸೊಲ್ಲು + ಕೇಳಿ = ಆದೇಶಸಂಧಿ.
3. ಚರಿಸುತದ್ವರವ - ಚರಿಸುತ + ಅಧ್ವರ = ಲೋಪಸಂಧಿ.
4. ನಿಜಾಶ್ರಮ - ನಿಜ + ಆಶ್ರಮ = ಸವರ್ಣದೀರ್ಘಸಂಧಿ.
5. ಲೇಖನವನೋದಿ - ಲೇಖನವನು + ಓದಿ = ಲೋಪಸಂಧಿ.
6. ತೆಗೆದುತ್ತರೀಯಮಂ – ತೆಗೆದು + ಉತ್ತರೀಯಮಂ = ಲೋಪಸಂಧಿ.
7. ಬೇಡಬೇಡರಸುಗಳ – ಬೇಡಬೇಡ + ಅರಸುಗಳ = ಲೋಪಸಂಧಿ.
8. ನಿಂತಿರ್ದನ್ - ನಿಂತು + ಇರ್ದನ್ = ಲೋಪಸಂಧಿ.

➢ **ಸಮಾಸಗಳು :**

1. ನಲ್ದುದುರೆ - ನಲ್ಲಿತು + ಕುದುರೆ = ಕರ್ಮಧಾರಯಸಮಾಸ
2. ಸೊಲ್ಗೇಳಿ - ಸೊಲ್ಲನ್ನು + ಕೇಳಿ = ಕ್ರಿಯಾಸಮಾಸ
3. ಲಿಖಿತವನೋದಿ – ಲಿಖಿತವನ್ನು + ಓದಿ = ಕ್ರಿಯಾಸಮಾಸ
4. ಬಿಲ್ಗೊಂಡು - ಬಿಲ್ಲನ್ನು + ಕೊಂಡು = ಕ್ರಿಯಾಸಮಾಸ.
5. ಬಿಲ್ದಿರುವನೇರಿಸಿ – ಬಿಲ್ಲಿನತಿರುವನ್ನು + ಏರಿಸಿ = ಕ್ರಿಯಾಸಮಾಸ.
6. ಪೂದೋಟ - ಪೂವಿನ + ತೋಟ = ತತ್ಪುರುಷಸಮಾಸ.
7. ಯಜ್ಞತುರುಗ - ಯಜ್ಞದ + ತುರುಗ = ತತ್ಪುರುಷಸಮಾಸ.
8. ಕದಳಿದ್ರುಮ - ಕದಳಿಯ + ದ್ರುಮ = ತತ್ಪುರುಷಸಮಾಸ.
9. ಅಬ್ಧಿಪ - ಅಬ್ಧಿಗೆ ( ಸಮುದ್ರಕ್ಕೆ) ಪತಿ (ಒಡೆಯ) ಯಾರೋ ಆತ ( ವರುಣ) = ಬಹುವ್ರೀಹಿಸಮಾಸ.

➢ **ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಂಗಡಿಸಿ ಛಂದಸ್ಸಿನ ಹೆಸರನ್ನು ಬರೆಯಿರಿ**

| | | | |
|---|---|---|---|
| _ U _ | _ U _ | U U U U U | _ _ U |
| ಉರ್ವಿಯೊಳ್ | ಕೌಸಲ್ಯೆ | ಪಡೆದ ಕುವ | ರಂರಾಮ |

| | | | |
|---|---|---|---|
| _ U _ | _ U _ | U U _ U | U U U U U |
| ನೋರ್ವನೇ | ವೀರನಾ | ತನಯಜ್ಞ | ತುರಗಮಿದು |

| | | | | | | |
|---|---|---|---|---|---|---|
| _ U U U | _ U _ | _ U _ | U U U _ | _ U _ | U U U _ | _ |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನವನೋ | ದಿ |

**ಛಂದಸ್ಸು : ವಾರ್ಧಕ ಷಟ್ಪದಿ**

**ಲಕ್ಷಣ : ಆರು ಸಾಲುಗಳು, ಆದಿಪ್ರಾಸ, 1,2,4,5ನೇ ಸಾಲುಗಳು ಸಮವಾಗಿರುತ್ತವೆ. 5ಮಾತ್ರೆಗಳ 4 ಗಣಗಳು ಇದ್ದು 20 ಮಾತ್ರೆಗಳಿರುತ್ತವೆ. 3 ಮತ್ತು 6 ನೇ ಸಾಲಿನಲ್ಲಿ 5 ಮಾತ್ರೆಗಳ 6 ಗಣಗಳು ಬಂದು ಮೇಲೊಂದು ಗುರುವು ಬಂದಿರುತ್ತದೆ. ಒಟ್ಟು 144 ಮಾತ್ರೆಗಳಿರುತ್ತವೆ.**

## ಪದ್ಯಪಾಠ : 8. ಸಂಕಟಕೆ ಗಡಿ ಇಲ್ಲ

- ದು.ಸರಸ್ವತಿ

**ಕವಿ ಕೃತಿ ಪರಿಚಯ:** ದು. ಸರಸ್ವತಿಯವರು ಕ್ರಿ.ಶ.1963 ರಲ್ಲಿ ಜನಿಸಿದರು. ಶ್ರೀಮತಿಯವರು 'ಹೆಣೆದರೆ ಜೇಡನಂತೆ' ಮತ್ತು ಜೀವನ ಸಂಪಿಗೆ ಎಂಬ ಕವನಸಂಕಲನಗಳನ್ನೂ , "ಈಗೇನ್ಮಾಡ್ತೀರಿ?" ಎಂಬ ಅನುಭವ ಕಥನವನ್ನು ಬರೆದಿದ್ದಾರೆ.

### ಭಾಗ - ಎ

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:**

1. ಮಣ್ಣಿಗೆ ಮಾಲೀಕ ಯಾರು?
2. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ?
3. ಮಾನವನ ಕಾದಾಟಕ್ಕೆ ಕಾರಣವೇನು?
4. ನೆತ್ತರು ಎಲ್ಲಿ ಹರಿಯಿತು?
5. ವೀರ ಮರಣ ಹೊಂದಿದವರು ಯಾರು?
6. ಜೀವ ತೆಗೆದವರಿಗೆ ಸಿಕ್ಕ ಖ್ಯಾತಿ ಏನು?
7. ಕವಯಿತ್ರಿಯವರ ಪ್ರಕಾರ ಯಾವುದಕ್ಕೆ ಗಡಿ ಇಲ್ಲ?
8. ಯೋಧರು ಜೀವ ತೆತ್ತದ್ದು ಯಾವ ಕಾರಣಕ್ಕಾಗಿ?

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

1. ಗಡಿಯ ಆಚೆ ಈಚೆ ಜೀವಗಳು ಏಕೆ ಶವವಾದವು?
2. ಸಂಕಟಕೆ ಗಡಿ ಇಲ್ಲ, ಏಕೆ?

**ಸಂದರ್ಭ ಸಹಿತ ವಿವರಿಸಿ:**

1. "ಗೆರೆ ಎಳೆದು ಗಡಿ ಎಂದ"
2. "ಜೀವಗಳು ಶವವಾದವು"
3. "ಗಡಿಯ 'ಮ್ಯಾಜಿಕ್'ನಿಂದ ಜೀವ ತೆತ್ತವರು"
4. 'ಗಡಿಯೂ ಇಲ್ಲ, ಆಚೆ ಈಚೆಯೂ ಇಲ್ಲ"

**ಈ ಪದ್ಯವನ್ನು ಪೂರ್ಣಗೊಳಿಸಿ :**

ಹಮ್ಮಿನಲಿ ---------- --------- ------------ ----- --------- ------ ----- ವೀರ ಯೋಧರಾದರು.

**ಒಂದು ಅಂಕದ ಪ್ರಶ್ನೆಗಳಿಗೆ ಉತ್ತರಗಳು**

1. ಮಾನವ ಮಣ್ಣಿಗೆ ಮಾಲೀಕ
2. ಮಣ್ಣಿಗೆ ಮಾಲೀಕನಾದನೆಂಬ ಮತ್ತಿನಲ್ಲಿ ಗೆರೆ ಎಳೆದು ಗಡಿ ನಿರ್ಮಿಸಿಕೊಂಡ.
3. ಅಹಂಕಾರದಿಂದ ಬೀಗಿದುದೇ ಕಾದಾಟಕ್ಕೆ ಕಾರಣವಾಯಿತು.
4. ಗಡಿಯ ಆಚೆ ಈಚೆ ಎರಡೂ ಕಡೆ ನೆತ್ತರು ಹರಿಯಿತು.
5. ಜೀವ ತೆತ್ತವರು ವೀರ ಮರಣ ಹೊಂದಿದರು.
6. ಜೀವ ತೆಗೆದವರಿಗೆ ವೀರ ಯೋಧರೆಂಬ ಖ್ಯಾತಿ ಸಿಕ್ಕಿತು.
7. ಒಡಲು ಅನುಭವಿಸುವ ಸಂಕಟಕೆ ಗಡಿ ಇಲ್ಲ.
8. ಯೋಧರು ಗಡಿಯ 'ಮ್ಯಾಜಿಕ್' ನಿಂದಾಗಿ ಜೀವ ತೆರಬೇಕಾಯಿತು.

**ಎರಡು ಅಂಕದ ಪ್ರಶ್ನೆಗಳಿಗೆ ಉತ್ತರಗಳು:**

1. ಈ ಮಣ್ಣಿಗೆ ನಾನೇ ಮಾಲೀಕನಾದೆನೆಂಬ ಅಮಲಿನಲ್ಲಿ ಗೆರೆ ಎಳೆದು ಗಡಿ ನಿರ್ಮಿಸಿಕೊಂಡ ಮಾನವ, ನಾನೇ ಸರ್ವಾಧಿಕಾರಿ ಎಂಬ ಗರ್ವದಿಂದ ಬೀಗಿದುದರ ಪರಿಣಾಮ ಕಾದಾಟ ಆಡಲು ಆರಂಭಿಸಿದ. ಹೀಗಾಗಿ ಗಡಿಯ ಎರಡೂ ಕಡೆ ಅಮಾಯಕ ಜೀವಗಳು ಶವವಾದವು.
2. ಸಂಕಟ ಇದೊಂದು ಅಂತರಂಗದ ನೋವು. ಈ ನೋವಿಗೆ ದೇಶ, ಭಾಷೆ, ಲಿಂಗ ವರ್ಣ ಈ ಯಾವುದರ ಗಡಿಯೂ ಇಲ್ಲ. ಏಕೆಂದರೆ ಶವವಾಗಿದ್ದು ಮಾನವ ಜೀವಗಳು, ಒಡಲು ಅನುಭವಿಸುವ ಸಂಕಟಕೆ ಗಡಿ ಮತ್ತು ಆಚೆ ಈಚೆ ಇಲ್ಲ.

**ಸಂದರ್ಭಕ್ಕೆ ಉತ್ತರ :** **( ಸೂಚನೆ : ಒಂದಕ್ಕೆ ಮಾದರಿಯಾಗಿ ಉತ್ತರ ನೀಡಿದ್ದು ಉಳಿದವಕ್ಕೆ ಮಾದರಿಯಂತೆ ಉತ್ತರಿಸಿ)**

1. ಈ ಸಾಲನ್ನು ದು.ಸರಸ್ವತಿ ಅವರು ಬರೆದಿರುವ 'ಹೆಣೆದರೆ ಜೇಡನಂತೆ' ಎಂಬ ಕವನ ಸಂಕಲನದಿಂದ ತೆಗೆದುಕೊಂಡಿರುವ 'ಸಂಕಟಕೆ ಗಡಿ ಇಲ್ಲ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಸಕಲ ಜೀವರಾಶಿಗೂ ಸೇರಿದ ಈ ಭೂಮಿಯನ್ನು ಮಾನವ ನಾನೇ ಮಾಲೀಕನಾದೆನೆಂಬ ಮತ್ತಿನಲ್ಲಿ ಗೆರೆ ಎಳೆದು ಗಡಿ ನಿರ್ಮಿಸಿಕೊಂಡ ಪರಿಣಾಮ ಹಲವು ದೇಶಗಳ ಹುಟ್ಟಿಗೆ ಕಾರಣನಾದ. ವಿಶ್ವಮಾನವತ್ವದ ಅವಕಾಶವನ್ನು ತನ್ನ ಕೈಯಾರೆ ಕಳೆದುಕೊಂಡ ಎಂಬ ವಿಷಾದಭಾವ ಇಲ್ಲಿದೆ.

## ಭಾಗ – ಬಿ

**ಕೆಳಗೆ ಕೊಟ್ಟಿರುವ ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆ:**

1. 'ಕಾದಾಟದಾಟ' ಇದು ಈ ಸಂಧಿಗೆ ಉದಾಹರಣೆ :
   ಎ) ಆಗಮಸಂಧಿ ಬಿ) ಲೋಪಸಂಧಿ ಸಿ) ಆದೇಶಸಂಧಿ ಡಿ) ಸವರ್ಣದೀರ್ಘ ಸಂಧಿ
2. ' ಶವ+ಆದವು ' ಇಲ್ಲಿ ಉಂಟಾಗುವ ಸಂಧಿ :
   ಎ) ಗುಣಸಂಧಿ ಬಿ) ಆಗಮಸಂಧಿ ಸಿ) ಲೋಪಸಂಧಿ ಡಿ) ವೃದ್ಧಿಸಂಧಿ
3. ' ಆದನೆಂಬ' ಈ ಪದದಲ್ಲಿರುವ ಸಂಧಿ
   ಎ) ಲೋಪ ಸಂಧಿ ಬಿ) ಜಶ್ತ್ವ ಸಂಧಿ ಸಿ) ಯಣ್ ಸಂಧಿ ಡಿ) ಆದೇಶ ಸಂಧಿ
4. 'ನೆತ್ತರೊಂದೆ' ಪದವನ್ನು ಬಿಡಿಸಿ ಬರೆದಾಗ
   ಎ) ನೆತ್ತ+ಒಂದೆ ಬಿ) ನೆತ್ತರು+ಒಂದೆ ಸಿ) ನೆತ್ತರೊ + ಒಂದೆ ಡಿ) ನೆತ್ತರೂ+ಒಂದೆ
5. 'ಮಣ್ಣಿಗೆ' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ
   ಎ) ಪ್ರಥಮಾ ಬಿ) ಪಂಚಮಿ ಸಿ) ಚತುರ್ಥಿ ಡಿ) ಷಷ್ಠಿ
6. 'ಮ್ಯಾಜಿಕ್ ನಿಂದ' ಎಂಬಲ್ಲಿ ಈ ಪ್ರತ್ಯಯವಿದೆ
   ಎ) ಪ್ರಥಮ ಬಿ) ತೃತೀಯ ಸಿ) ಸಪ್ತಮಿ ಡಿ) ದ್ವಿತೀಯ
7. ಪ್ರಥಮ ವಿಭಕ್ತಿಯ ಕಾರಕಾರ್ಥ
   ಎ) ಕರ್ಮಾರ್ಥ ಬಿ) ಸಂಪ್ರದಾನಾರ್ಥ ಸಿ) ಸಂಬಂಧಾರ್ಥ ಡಿ) ಕರ್ತ್ರರ್ಥ
8. 'ವೀರ' ಪದದ ತದ್ಭವ ರೂಪ
   ಎ) ಬೀರ ಬಿ) ಶೂರ ಸಿ) ಧೀರ ಡಿ) ಯೋಧ
9. 'ಯೋಧ' ಪದದ ತದ್ಭವ ಇದು
   ಎ) ಸೇನಾನಿ ಬಿ) ಭಟ ಸಿ) ಜೋದ ಡಿ) ವೀರ

**ಉತ್ತರಗಳು : 1. ಲೋಪಸಂಧಿ 2. ಬಿ) ಆಗಮ ಸಂಧಿ 3. ಎ) ಲೋಪ ಸಂಧಿ 4. ಬಿ) ನೆತ್ತರು + ಒಂದೆ 5. ಸಿ) ಚತುರ್ಥಿ 6. ಬಿ) ತೃತೀಯ 7. ಡಿ) ಕರ್ತ್ರರ್ಥ 8. ಎ) ಬೀರ 9. ಸಿ) ಜೋದ**

**1. ಈ ಕೆಳಗಿನ ಪ್ರಶ್ನೆಗಳನ್ನು ಓದಿಕೊಂಡು ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ**

ಮಾರಿಗೌತಣವಾಯ್ತು ನಾಳಿನ
ಭಾರತವು ಚದುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟ ಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ.

**ಪ್ರಶ್ನೆಗಳು :**

1. ಈ ಪದ್ಯಭಾಗದಲ್ಲಿ ನೀವು ಯಾವ ಸಾಲುಗಳನ್ನು ಮೆಚ್ಚುತ್ತೀರಾ ?
2. ನೀವು ಈ ಸಾಲುಗಳನ್ನು ಏಕೆ ಮೆಚ್ಚುತ್ತೀರಾ ?
3. ಕರ್ಣನ ಸ್ಥಾನದಲ್ಲಿ ನೀವಿದ್ದರೆ ಏನು ನಿರ್ಧಾರ ಕೈಗೊಳ್ಳುತ್ತಿದ್ದಿರಿ ?
4. ಕರ್ಣನು 'ಪತಿಯವಸರಕ್ಕೆ' ಶರೀರವನು ನೂಕುವೆನು ಎಂಬ ನಿರ್ಧಾರಕ್ಕೆ ಬರಲು ಕಾರಣವೇನು ?

2.

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ.
ಭಯ–ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**ಪ್ರಶ್ನೆಗಳು :**

1. ಈ ಪದ್ಯಭಾಗದಲ್ಲಿ ನೀವು ಮೆಚ್ಚುವ ಸಾಲುಗಳಾವುವು ?
2. ಈ ಸಾಲುಗಳನ್ನು ಏಕೆ ಮೆಚ್ಚುವಿರಿ ?
3. ನಾಳಿನ ಕನಸನ್ನು ಎಲ್ಲಿ ಬಿತ್ತಬೇಕೆಂದು ಕವಿ ಆಶಿಸುತ್ತಾರೆ ?
4. ' ಮತಗಳೆಲ್ಲವು ಪಥಗಳು' ಎಂಬ ಮಾತನ್ನು ನೀವು ಹೇಗೆ ಸಮರ್ಥಿಸುವಿರಿ.

3.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಖೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯ ?

**ಪ್ರಶ್ನೆಗಳು**

1. ಈ ವಚನದಲ್ಲಿ ನೀವು ಮೆಚ್ಚುವ ಸಾಲುಗಳು ಯಾವುವು ?
2. ನೀವು ಈ ಸಾಲುಗಳನ್ನು ಮೆಚ್ಚಲು ಕಾರಣವೇನು ?
3. ಕೂಡಲಸಂಗಮದೇವ ಯಾವಾಗ ಒಲಿಯುವನೆಂದು ಬಸವಣ್ಣನವರು ಆಶಿಸುತ್ತಾರೆ ?
4. ಈ ವಚನದಲ್ಲಿ ಬಸವಣ್ಣನವರು ಹೇಳ ಬಯಸುವ ಸಂದೇಶವೇನು ?

( **ಸೂಚನೆ :** ಈ ಮೇಲಿನ ಪ್ರಶ್ನೆಗಳಿಗೆ ಒಬ್ಬೊಬ್ಬರ ಆಲೋಚನೆ ಹಾಗೂ ಚಿಂತನೆಗಳು ಬಿನ್ನ ಬಿನ್ನವಾಗಿದ್ದು ನೀಡುವ ಉತ್ತರಗಳು ಬಿನ್ನ ಬಿನ್ನವಾಗಿರಬಹುದು. ಆದ್ದರಿಂದ ಸ್ವತಂತ್ರ ಆಲೋಚನೆ ಉತ್ತರಗಳನ್ನು ಬಿಟ್ಟಿದ್ದು ಶಿಕ್ಷಕರು ಸಮರ್ಪಕ ಮಾರ್ಗದರ್ಶನ ನೀಡುಬೇಕಿದೆ. )

## ಪಠ್ಯಪೋಷಕ ಅಧ್ಯಯನ:

## 1. ವಿಜ್ಞಾನ ಮತ್ತು ಸಮಾಜ

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

1. ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಯಾವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು?
2. ವಿಜ್ಞಾನಿಯಾದವನ ಪ್ರಮುಖ ಕರ್ತವ್ಯವೇನು ?
3. ವಿಜ್ಞಾನಿಗಳಲ್ಲಿನ ದುರದೃಷ್ಟಕರವೆನಿಸಬಹುದಾದ ಮನೋಭಾವ ಯಾವುದು?
4. ಹಸ್ತಸಾಮುದ್ರಿಕೆ ಎಂದರೇನು?
5. ತಮ್ಮ ನಿಜಜೀವದಲ್ಲಿ ರಜೆ ತೆಗೆದುಕೊಂಡಿದೆಯೋ ಎಂಬಂತೆ ಭಾಸವಾಗುವ ವಿಜ್ಞಾನಿಗಳ ಮನೋಭಾವ ಯಾವುದು?
6. ಲೇಖಕರು ಉಲ್ಲೇಖಿಸಿರುವಂತೆ ಮೂರ್ಖತನದ ಪರಮಾವಧಿ ಯಾವುದು?
7. ಮೂಢನಂಬಿಕೆ ಹೊಂದಿರುವ ವಿದ್ಯಾವಂತ ಮತ್ತು ಅವಿದ್ಯಾವಂತರಲ್ಲಿ ಯಾರು ಹೆಚ್ಚು ಅಪಾಯಕಾರಿ?
8. ಲೇಖಕರ ಪ್ರಕಾರ ಮೂಢನಂಬಿಕೆಯ ನಿರಾಕರಣೆ ಯಾವಾಗ ಸಾಧ್ಯವಾಗುತ್ತದೆ?
9. ಮೂಢನಂಬಿಕೆಗಳು ಸಾಮಾನ್ಯವಾಗಿ ಯಾವ ಎರಡು ಅಂಶಗಳಿಂದ ರೂಪಿತವಾಗುತ್ತವೆ?
10. ಮೂಢನಂಬಿಕೆಯಿಂದ ಮನಸ್ಸಿನ ಯಾವ ಗುಣಗಳು ಮೊಟಕುಗೊಳ್ಳುತ್ತವೆ?
11. ಪಠ್ಯವಸ್ತುವಿನಲ್ಲಿ ಸೇರ್ಪಡೆಯಾಗಬೇಕಾದ ವೈಜ್ಞಾನಿಕ ಅಂಶಗಳಾವುವು?
12. ಮೂಢನಂಬಿಕೆಯ ಬಗೆಗಿನ ಯಾವ ಧೋರಣೆಗಳು ಸಾಮಾಜಿಕ ಹಾನಿಯುಂಟು ಮಾಡುತ್ತವೆ?

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

1. ಜನಸಾಮಾನ್ಯರ ಯೋಚನಾ ಶಕ್ತಿಯನ್ನು ಬೆಳೆಸುವುದು ವಿಜ್ಞಾನಿಯ ಕರ್ತವ್ಯವೇ ಹೊರತು ಉಪಕಾರವಲ್ಲ, ಎಂಬುದಕ್ಕೆ ಲೇಖಕರು ಕೊಡುವ ಸಮರ್ಥನೆಗಳೇನು?
2. ವಿಜ್ಞಾನಿಗಳ ವೈರುಧ್ಯ ಭಾವನೆಗಳನ್ನು ವಿವರಿಸಿ.
3. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?
4. ಲೇಖಕರ ಪ್ರಕಾರ ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲದು?
5. ಸಾಮಾಜಿಕ ಸುಧಾರಣೆ ಯಾವಾಗ ಸಾಧ್ಯವೆಂದು ಎಚ್.ನರಸಿಂಹಯ್ಯನವರು ವಿವರಿಸಿದ್ದಾರೆ?
6. ಮೂಢನಂಬಿಕೆಗಳ ಬಗೆಗಿನ ಉದಾಸೀನತೆಯಿಂದ ಉಂಟಾಗಬಹುದಾದ ಅನಾಹುತಗಳಾವುವು?

ಉತ್ತರಗಳು:

1. ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಸಾಮಾನ್ಯ ಜನರ ಮನೋಭಾವವನ್ನು ತಿದ್ದುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು.
2. ಜನಸಾಮಾನ್ಯರ ಯೋಚನಾ ಶಕ್ತಿಯನ್ನು ಬೆಳೆಸುವಲ್ಲಿ ಶ್ರಮಿಸುವುದೇ ವಿಜ್ಞಾನಿಯಾದವನ ಪ್ರಮುಖ ಕರ್ತವ್ಯವಾಗಿದೆ.
3. ಹಲವಾರು ಸಂದರ್ಭಗಳಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಿರುವುದು.
4. ಹಸ್ತಗಳಲ್ಲಿ ಮೂಡಿರುವ ರೇಖೆಗಳನ್ನು ನೋಡಿ ವ್ಯಕ್ತಿಯ ಭವಿಷ್ಯ ನಿರ್ಧರಿಸುವ ಒಂದು ಬಗೆಯ ಜ್ಯೋತಿಷ್ಯಶಾಸ್ತ್ರ
5. ಅವೈಜ್ಞಾನಿಕ ರೀತಿಯಲ್ಲಿ ಯೋಚಿಸುವ ಮನೋಭಾವ ಈ ರೀತಿ ಭಾಸವಾಗುತ್ತದೆ.
6. ವಿದ್ಯಾವಂತರೂ ಕೂಡ 'ಕೈಗಡಿಯಾರವೊಂದು ಶೂನ್ಯದಲ್ಲಿ ಸೃಷ್ಟಿಯಾಗುತ್ತದೆ ಎಂಬುದನ್ನು ನಂಬುವುದು ಮೂರ್ಖತನದ ಪರಮಾವಧಿ
7. ಮೂಢನಂಬಿಕೆ ಹೊಂದಿರುವ ವಿದ್ಯಾವಂತ ಹೆಚ್ಚು ಅಪಾಯಕಾರಿ.
8. ಮೂಢನಂಬಿಕೆ ವೈಜ್ಞಾನಿಕ ಪರಿಶೀಲನೆಯ ಮೂಲಕ ನಿರಾಕರಣೆಯಾಗಬೇಕು.
9: ಭಯ ಮತ್ತು ಅಜ್ಞಾನದಿಂದ ಮೂಢನಂಬಿಕೆಗಳು ರೂಪಿತವಾಗುತ್ತವೆ.
10. ಮೂಢನಂಬಿಕೆಯಿಂದ ಮನಸ್ಸಿನ ಆತ್ಮ ವಿಶ್ವಾಸ ಮತ್ತು ಸ್ವತಂತ್ರ ಆಲೋಚನಾ ಗುಣಗಳು ಮೊಟಕುಗೊಳ್ಳುತ್ತವೆ.
11. ವೈಜ್ಞಾನಿಕ ಮನೋಧರ್ಮ ಮತ್ತು ವಿಚಾರವಂತಿಕೆ ಬೆಳೆಸುವ ಅಂಶಗಳು ಪಠ್ಯವಸ್ತುವಿನಲ್ಲಿ ಸೇರ್ಪಡೆಯಾಗಬೇಕು.
12. ಮೂಢನಂಬಿಕೆಗಳ ಬಗ್ಗೆ ತಳೆಯುವ ತಟಸ್ಥ ಮನೋಭಾವ, ನಿಷ್ಕ್ರಿಯತೆಗಳು ಉದಾಸೀನತೆಗಳು ಸಾಮಾಜಿಕ ಹಾನಿ ಉಂಟು ಮಾಡುತ್ತವೆ.

ಉತ್ತರಗಳು

1. ವಿಜ್ಞಾನಿಯಾದವನು ಕೂಡ ಸಮಾಜದ ದುಡಿಮೆಯಲ್ಲಿ ಶಿಕ್ಷಣ ಪಡೆದಿರುತ್ತಾನೆ. ಹೀಗಾಗಿ ಸಾಮಾಜಿಕ ಋಣವನ್ನು ತೀರಿಸುವುದು ಆತನ ಕರ್ತವ್ಯ ಹಾಗಾಗಿ ಉಪನ್ಯಾಸಗಳು, ವೈಜ್ಞಾನಿಕ ಪ್ರದರ್ಶನಗಳ ಮೂಲಕ ವಿಜ್ಞಾನದ ಬಗ್ಗೆ ವಿದ್ಯಾರ್ಥಿ ಹಾಗೂ ಸಾರ್ವಜನಿಕರಲ್ಲಿ ಆಸಕ್ತಿ ಮೂಡಿಸಬೇಕೆಂದಿದ್ದಾರೆ.
2. ವಿಜ್ಞಾನಿಗಳು ಪ್ರಯೋಗಶಾಲೆಯಲ್ಲಿ ಹೆಚ್ಚಿನ ವೈಜ್ಞಾನಿಕ ಮನೋಭಾವ ವ್ಯಕ್ತಪಡಿಸಿದರೆ ನಿಜ ಜೀವನದಲ್ಲಿ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಹೇಗೆಂದರೆ ಪ್ರಕೃತಿಯಲ್ಲಿ ಸಹಜವಾಗಿ ಘಟಿಸುವ ಗ್ರಹಣಗಳ ಬಗ್ಗೆ ತರಗತಿಯಲ್ಲಿ ಒಂದು ವಿಧದ ಬೋಧನೆ ಮಾಡಿದರೆ, ತಮ್ಮ ಮನೆಗಳಲ್ಲಿ ಬೇರೊಂದು ರೀತಿಯ ಆಚರಣೆ ಅನುಸರಿಸುತ್ತಾರೆ.
3. ವೈಜ್ಞಾನಿಕ ಸಂಶೋಧನೆಗಳೂ ನಾಲ್ಕು ಗೋಡೆಗಳ ಮಧ್ಯಕ್ಕೆ ಸೀಮಿತವಾಗಿರದೇ ನಿತ್ಯ ಜೀವನದ ಸಮಸ್ಯೆಗಳೂ ವಿಜ್ಞಾನಿಯ ಸಂಶೋಧನಾ ಕ್ಷೇತ್ರವಾಗಬೇಕು. ಹಲವಾರು ಅತಾರ್ಕಿಕ ನಡವಳಿಕೆಗಳಿಂದ ಸಮಾಜ ಅನ್ಯಾಯಕ್ಕೆ ಒಳಪಟ್ಟಿದ್ದು ಇಂದಿನ ಉಸಿರುಗಟ್ಟಿಸುವ ವಾತಾವರಣವನ್ನು ಶುದ್ಧಗೊಳಿಸಲು ವಿಜ್ಞಾನಿಗಳು ಪ್ರಯತ್ನಿಸದಿದ್ದಲ್ಲಿ ವೈಜ್ಞಾನಿಕ ಸಂಶೋಧನೆಗಳು ಅರ್ಥರಹಿತವಾಗುತ್ತವೆ.
4. ವಿಜ್ಞಾನದ ನೆಲೆ ಕೇವಲ ವಿಷಯಸಂಗ್ರಹಕ್ಕಷ್ಟೇ ಸೀಮತವಾಗಿರದೇ ವೈಜ್ಞಾನಿಕ ಮನೋಧರ್ಮದ ತಳಹದಿಯ ಮೇಲೆ ನಿಲ್ಲಬೇಕು. ಜಟಿಲಾತಿಜಟಿಲ ಸಮಸ್ಯೆಗಳನ್ನು ಅಂದರೆ ಜಾತೀಯತೆಯಂತಹ ಸಾಮಾಜಿಕ ಪಿಡುಗುಗಳನ್ನೂ ವೈಜ್ಞಾನಿಕ ಮನೋಧರ್ಮದಿಂದ ಪರಿಹರಿಸಲು ಸಾಧ್ಯವಿಲ್ಲ, ಮಾನವೀಯ ಮೌಲ್ಯ ಮತ್ತು ನೀತಿಯಾಧಾರಿತ 'ವಿಶ್ವಧರ್ಮ' ರೂಪಿತವಾಗಬಲ್ಲದೆಂದು ಅಭಿಪ್ರಾಯಪಟ್ಟಿದ್ದಾರೆ.
5. ಪ್ರತಿಯೊಬ್ಬರೂ ವೈಜ್ಞಾನಿಕ ಮನೋಭಾವನೆಯಿಂದ ಕಾರ್ಯಪ್ರವೃತ್ತರಾದಾಗ ಮಾತ್ರ ಬಡತನ ಹಾಗೂ ಶೋಷಣೆಯಂತಹ ಸಾಮಾಜಿಕ ಪಿಡುಗುಗಳ ಪರಿಹಾರ ಸಾಧ್ಯ. ಈ ದೃಷ್ಟಿಕೋನವು ಸ್ವಹಿತಾಸಕ್ತಿ ಹಾಗೂ ಪ್ರಗತಿ ವಿರೋಧಿ ಸಿದ್ಧಾಂತವನ್ನು ದೂರಮಾಡಬಲ್ಲದು. ವಿಜ್ಞಾನಿಗೆ ವಿಜ್ಞಾನ ಕೇವಲ ಜೀವನೋಪಾಯ ಮಾರ್ಗವಾಗಿರದೇ ಅದರಲ್ಲಿಯೇ ಜೀವಂತ ನಂಬಿಕೆ ಹೊಂದಿರಬೇಕು. ತರ್ಕಬದ್ಧವಾಗಿ, ಧೈರ್ಯದಿಂದ ವರ್ತಿಸಿದಾಗ ಮಾತ್ರ ಸಾಮಾಜಿಕ ಸುಧಾರಣೆ ಸಾಧ್ಯವೆಂದಿದ್ದಾರೆ.
6. ಮೂಢನಂಬಿಕೆಗಳ ಬೆಗೆಗಿನ ಉದಾಸೀನ ಮನೋಭಾವದಿಂದಾಗಿ ಆ ಬಗ್ಗೆ ವ್ಯಕ್ತಿಯಲ್ಲಿ ನಿಷ್ಕ್ರಿಯತೆ ಉಂಟಾಗುತ್ತದೆ. ಈ ರೀತಿಯ ತಟಸ್ಥ ಮನೋಭಾವವು ಅರ್ಥಹೀನ ಹಾಗೂ ಅವೈಜ್ಞಾನಿಕ ವಿಚಾರಗಳೀಗೆ ಪರೋಕ್ಷವಾಗಿ ಸಮರ್ಥನೆ ಕೊಟ್ಟಂತಾಗುತ್ತದೆ. ಅಲ್ಲದೆ ಇಂತಹ 'ಮೌನ' ಸಮ್ಮತಿಯ ಲಕ್ಷಣವೂ ಆಗುವ ಸಂಭವವಿರುತ್ತದೆ.

## ಪಠ್ಯ ಪೋಷಕ ಅಧ್ಯಯನ

### 2. ನಾಮಫಲಕ

**ಒಂದು ವಾಕ್ಯದಲ್ಲಿ ಉತ್ತರಿಸಿ.**

1. ನಾಮಫಲಕ ಎಲ್ಲಿದೆ?
2. ಬಿಳಿಯ ಕೊಳ ಎಲ್ಲಿದೆ?
3. ಭರತ ಚಕ್ರವರ್ತಿಯು ತನ್ನ ಗೆಲುವಿನ ಶಾಸನವನ್ನು ಎಲ್ಲಿ ಬರೆಸಲು ಹೋಗುತ್ತಾನೆ?
4. ಕವಿ ರನ್ನನು ಶ್ರವನಬೆಳಗೊಳದ ಚಿಕ್ಕ ಬೆಟ್ಟದಲ್ಲಿ ಯಾವ ಹೆಸರನ್ನು ಕೊರೆಯಿಸಿ ಕೊಂಡನು?
5. ಹಿಂದಿನವರು ಮಕ್ಕಳಿಗೆ ಯಾರ ಹೆಸರನ್ನಿಡುತ್ತಿದ್ದರು?

**ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ?
2. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?

**ಒಂದು ಅಂಕದ ಪ್ರಶ್ನೆಯ ಉತ್ತರಗಳು :**

1. ಮನೆಯ ಮುಂಗೋಡೆಯ ಮೇಲೆ ನಾಮಫಲಕ ಇದೆ.
2. ಶ್ರವಣಬೆಳಗೊಳದ ಚಿಕ್ಕಬೆಟ್ಟ ಹಾಗೂ ದೊಡ್ಡ ಬೆಟ್ಟಗಳ ನಡುವೆ ಬಿಳಿಯ ಕೊಳ ಇದೆ.
3. ಭರತ ಚಕ್ರವರ್ತಿಯು ತನ್ನ ಗೆಲುವಿನ ಶಾಸನವನ್ನು ವೃಷಭಾಚಲದಲ್ಲಿ ಬರೆಸಲು ಹೋಗುತ್ತಾನೆ.
4. ಕವಿ ರನ್ನನು ಶ್ರವಣಬೆಳಗೋಳದ ಚಿಕ್ಕಬೆಟ್ಟದಲ್ಲಿ 'ಶ್ರೀಕವಿರತ್ನಂ' ಎಂದು ಕೊರೆಯಿಸಿ ಕೊಂಡನು.
5. ಹಿಂದಿನವರು ಮಕ್ಕಳಿಗೆ ಅಜ್ಜ ಅಜ್ಜಿಯರ ಹೆಸರನ್ನಿಡುತ್ತಿದ್ದರು.

**ಎರಡು ಅಂಕದ ಪ್ರಶ್ನೆಯ ಉತ್ತರಗಳು :**

**1.** ಪಂಪನಿಗೆ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸಿಕೊಳ್ಳದಿದ್ದರೂ ತನ್ನ ಹೆಸರು ಶತಮಾನಗಳ ಕಾಲ ಉಳಿಯುತ್ತದೆ ಎಂದು ತಿಳಿದಿರಬಹುದು ಅಥವಾ ಭರತ ಚಕ್ರವರ್ತಿಯು ದಿಗ್ವಿಜಯ ಶಾಸನವನ್ನು  ಕೆತ್ತಿಸುವ ಪ್ರಸಂಗವನ್ನು ಅದ್ಭುತವಾಗಿ ಆದಿಪುರಾಣದಲ್ಲಿ ನಿರೂಪಿಸಿದ ಮೇಲೆ ಬಂಡೆಯ ಮೇಲೆ ಹೆಸರು ಕೊರೆಯಿಸುವುದು ವ್ಯರ್ಥ ಎಂಬ ಭಾವನೆ ಅವನಲ್ಲಿ ಗಟ್ಟಿಗೊಂಡಿರಬಹುದು.ಆದ್ದರಿಂದ ಪಂಪನು ತನ್ನ ಹೆಸರನ್ನು ಕೆತ್ತಿಸಲಿಲ್ಲ.

**2.** " ಹಿಂದಿನ ಅನೇಕ ಚಕ್ರವರ್ತಿಗಳು ಬರೆಯಿಸಿದ ಆತ್ಮ ಪ್ರಸಂಗಗಳು ತುಂಬಿ ಹೋಗಿದ್ದು ಭರತೇಶನಿಗೆ ತನ್ನ ಹೆಸರು ಬರೆಸಲು ಸೂಕ್ತವಾದ ಸ್ಥಳವೇ ದೊರಕುವುದಿಲ್ಲ. ಆಗ ಆತನಲ್ಲಿದ್ದ ಗರ್ವವೆಂಬ ರಸ ತಾನಾಗಿಯೆ ಸೋರಿ ಹೋಗುತ್ತದೆ" ಇದರಿಂದ ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಸಾಧ್ಯವಾಗಲಿಲ್ಲ.

**ಪೋಷಕ ಅಧ್ಯಯನ :**

## 3. ಉದಾತ್ತ ಚಿಂತನೆಗಳು

**ಒಂದುವಾಕ್ಯದಲ್ಲಿ ಉತ್ತರಿಸಿ.**

1. ಸ್ವಾತಂತ್ರ್ಯದ ಎರಡು ಬಗೆಗಳು ಯಾವುವು ?
2. ಚಲನವಲನ ಸ್ವಾತಂತ್ರ್ಯ ಎಂದರೇನು?
3. ವಾಕ್ ಸ್ವಾತಂತ್ರ್ಯ ಎಂದರೇನು?
4. ಮೂಲಭೂತವಾದ ಸ್ವಾತಂತ್ರ್ಯ ಯಾವುದು?
5. ಯಾವ ಸ್ವಾತಂತ್ರ್ಯ ಇಲ್ಲದಿದ್ದಾಗ ಎಲ್ಲ ಬಗೆಯ ಚಲನಶೀಲತೆಗೆ ಕುಂದುಂಟಾಗುತ್ತದೆ?
6. ಕ್ರಿಯಾ ಸ್ವಾತಂತ್ರ್ಯ ಎಂದರೇನು?
7. ಯಾವ ಸ್ವಾತಂತ್ರ್ಯದಿಂದ ವ್ಯಕ್ತಿಗೆ ನಿರುದ್ಯೋಗದ ಭೀತಿ ಇರುವುದಿಲ್ಲ?
8. ವ್ಯಕ್ತಿಗೆ ಶಾಸನಗಳನ್ನು ರಚಿಸುವ ಹಕ್ಕನ್ನು ನೀಡಿರುವ ಸ್ವಾತಂತ್ರ್ಯ ಯಾವುದು?
9. ಸರ್ಕಾರದ ರಚನೆಯ ಮುಖ್ಯ ಉದ್ದೇಶಗಳೇನು?
10. ವ್ಯಕ್ತಿಗೆ ರಾಜಕೀಯವಾದ ಸಮಸ್ತ ಅಧಿಕಾರವನ್ನು ನೀಡುವವರು ಯಾರು?
11. ಗಾಂಧೀಜಿಯವರ ಅಭಿಪ್ರಾಯದಲ್ಲಿ ಶಿಕ್ಷಣದ ಅವಶ್ಯಕ ಅಂಶಗಳು ಯಾವುವು?
12. ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಯಾವುದು?
13. ಗಾಂಧೀಜಿಯವರ ಮನಸ್ಸಿನ ಮೇಲೆ ಪರಿಣಾಮ ಬೀರಿದ ಕೃತಿ ಯಾವುದು?
14. ಗಾಂಧೀಜಿಯವರ ಪ್ರಕಾರ ಯಾರ ಜೀವನ ಯೋಗ್ಯವಾದದ್ದು ?
15. ಜನತೆ ಯಾವಾಗ ವಿಷಯಗ್ರಹಣ ಮಾಡಿಕೊಳ್ಳುತ್ತಾರೆ?
16. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
17. ವಿವೇಕಾನಂದರ ದೃಷ್ಟಿಯಲ್ಲಿ ಪ್ರಯೋಜನವಿಲ್ಲದ್ದು ಯಾವುದು?
18. ವಿವೇಕಾನಂದರ ದೃಷ್ಟಿಯಲ್ಲಿ ಆಧ್ಯಾತ್ಮಿಕ ರತ್ನಗಳು ಎಲ್ಲಿ ಹುದುಗಿವೆ?
19. ವಿವೇಕಾನಂದರ ಪ್ರಕಾರ ಶ್ರದ್ಧೆಯು ನಾಶವಾಗುವುದನ್ನು ಪರಿಹರಿಸುವುದಕ್ಕೆ ಯಾವುದರಿಂದ ಸಾಧ್ಯವಾಗುತ್ತದೆ?
20. ವ್ಯಕ್ತಿಯಲ್ಲಿ ಎಲ್ಲ ಕಲ್ಯಾಣ ಗುಣಗಳು ಬರುವುದು ಯಾವಾಗ?

**ಉತ್ತರಗಳು**

1. ಪೌರ ಸ್ವಾತಂತ್ರ್ಯ ಹಾಗೂ ರಾಜಕೀಯಸ್ವಾತಂತ್ರ್ಯ ಸ್ವಾತಂತ್ರದ ಎರಡು ಬಗೆಗಳು.
2. ಸೂಕ್ತ ನ್ಯಾಯಾಂಗ ಕ್ರಮವಿಲ್ಲದೆ ವ್ಯಕ್ತಿಯನ್ನು ಬಂಧಿಸದಿರುವದೇ ಚಲನವಲನ ಸ್ವಾತಂತ್ರ್ಯ.
3. ಆಲೋಚಿಸುವ, ಓದುವ, ಬರೆಯುವ, ಚರ್ಚಿಸುವ ಸ್ವಾತಂತ್ರ್ಯವೇ ವಾಕ್ ಸ್ವಾತಂತ್ರ್ಯ.
4. ಮೂಲಭೂತವಾದ ಸ್ವತಂತ್ರ್ಯ 'ಚಲನವಲನ ಸ್ವಾತಂತ್ರ್ಯ'.
5. ಅಭಿಪ್ರಾಯ ಸ್ವಾತಂತ್ರ್ಯ ಇಲ್ಲದಿದ್ದಾಗ ಎಲ್ಲಾ ಬಗೆಯ ಚಲನಶೀಲತೆಗೆ ಕುಂದುಂಟಾಗುತ್ತದೆ..
6. ಕ್ರಿಯಾ ಸ್ವಾತಂತ್ರ್ಯ ವೆಂದರೆ ತಮಗೆ ಇಷ್ಟ ಬಂದ ಕೆಲಸವನ್ನು ಮಾಡಲು ವ್ಯಕ್ಕಿಗೆ ಅವಕಾಶವಿರುವುದು.
7. ಕ್ರಿಯಾ ಸ್ವಾತಂತ್ರ್ಯದಿಂದ ವ್ಯಕ್ತಿಗೆ ನಿರುದ್ಯೋಗದ ಭೀತಿ ಇರುವುದಿಲ್ಲ.
8. ವ್ಯಕ್ತಿಗೆ ಶಾಸನಗಳನ್ನು ರಚಿಸುವ ಹಕ್ಕನ್ನು ನೀಡುವ ಸ್ವಾತಂತ್ರ್ಯ 'ರಾಜಕೀಯ ಸ್ವಾತಂತ್ರ್ಯ'.
9. ಜನರಿಗೆ ಜೀವನಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವುದೇ ಸರ್ಕಾರ ರಚನೆಯ ಮುಖ್ಯ ಉದ್ದೇಶ.
10. ವ್ಯಕ್ತಿಗೆ ರಾಜಕೀಯವಾದ ಸಮಸ್ತ ಅಧಿಕಾರವನ್ನು ನೀಡುವವರು ' ಸಮಸ್ತ ಜನತೆ '.
11. ಗಾಂಧಿಜಿಯವರ ಅಭಿಪ್ರಾಯದಲ್ಲಿ ಶಿಕ್ಷಣದ ಅವಶ್ಯಕ ಅಂಶಗಳೆಂದರೆ 'ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ.'
12. ಕೆಟ್ಟ ಅಕ್ಷರದ ಬರವಣಿಗೆಯೇ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ.
13. ಗಾಂಧೀಜಿಯವರ ಮನಸ್ಸಿನ ಮೇಲೆ ಪರಿಣಾಮ ಬೀರಿದ ಕೃತಿ ' ರಸ್ಕಿನ್ನನ ಅನ್ ಟುದಿಸ್‌ಲಾಸ್ಟ್ 'ಎಂಬುದು.
14. ಗಾಂಧೀಜಿಯವರ ಪ್ರಕಾರ 'ಶ್ರಮಜೀವಿ, ಉಳುವವನು ಅಥವಾ ಕೈ ಕಸುಬುಗಾರ.' ಜೀವನ ಯೋಗ್ಯವಾದದ್ದು.
15. ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿದಾಗ ಜನತೆ ವಿಷಯಗ್ರಹಣ ಮಾಡಿಕೊಳ್ಳುತ್ತಾರೆ.
16. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಜನತೆಗೆ ಸಂಸ್ಕೃತಿಯನ್ನು ನೀಡಿದಾಗ ಮಾತ್ರ ಸ್ಥಿರವಾಗುವುದು.
17. ವಿವೇಕನಂದರ ದೃಷ್ಟಿಯಲ್ಲಿ ಸಂಸ್ಕೃತಿಯಿಲ್ಲದ ಜ್ಞಾನಸಂಪತ್ತು ಪ್ರಯೋಜನವಿಲ್ಲದ್ದಾಗಿದೆ.
18. ವಿವೇಕನಂದರ ದೃಷ್ಟಿಯಲ್ಲಿ ಆಧ್ಯಾತ್ಮಿಕ ರತ್ನಗಳು (ಧರ್ಮಶಾಸ್ತ್ರಗಳಲ್ಲಿ) ಶಾಸ್ತ್ರಗಳಲ್ಲಿ ಹುದುಗಿವೆ.
19. ವಿವೇಕಾನಂದರ ಪ್ರಕಾರ ಶ್ರದ್ಧೆಯು ನಾಶವಾಗುವುದನ್ನು ಪರಿಹರಿಸುವುದಕ್ಕೆ 'ಆತ್ಮಜ್ಞಾನದ ಪ್ರಚಾರದಿಂದ' ಮಾತ್ರ ಸಾದ್ಯವಾಗುತ್ತದೆ.
20. ನಿದ್ರಿಸುತ್ತಿರುವ ಜೀವ ಜಾಗೃತವಾಗಿ ಕಾರ್ಯೋನ್ಮುಖವಾದಾಗ ವ್ಯಕ್ತಿಯಲ್ಲಿ ಎಲ್ಲಾ ಕಲ್ಯಾಣ ಗುಣಗಳು ಬರುವುದು.

# ಪೋಷಕ ಅಧ್ಯಯನ :

## 4. ಪಾರಿವಾಳಗಳು

**ಒಂದು –ಎರಡು ವಾಕ್ಯದಲ್ಲಿ ಈ ಪ್ರಶ್ನೆಗಳಿಗೆ ಉತ್ತರಿಸಿ :**

1. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?
2. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?
3. ಪಾರಿವಾಳಗಳ ಆನಂದಕ್ಕೆ ಕಾರಣವೇನು ?
4. ಪಾರಿವಾಳಗಳ ಬಣ್ಣ ಯಾವುದು ?
5. ಮರದ ಹತ್ತಿರ ಬಲೆಯನ್ನು ಬೀಸಿದವನು ಯಾರು ?
6. ಪುಟ್ಟಮರಿಗಳು ಚೀತ್ಕರಿಸಲು ಕಾರಣವೇನು ?
7. ಆತುರದಿಂದ ತಾಯಿ ಪಾರಿವಾಳ ಏನು ಮಾಡಿತು ?
8. ಗಂಡು ಪಾರಿವಾಳ ಬಲೆಗೆ ಏಕೆ ಬಿದ್ದಿತು ?
9. ಪಾರಿವಾಳಗಳು ಕುರುಡು ವಾತ್ಸಲ್ಯದಿಂದ ಕಳೆದುಕೊಂಡದ್ದೇನು ?
10. 'ಮೋಹ ಮುಸುಕಿದ ಬುದ್ಧಿಯಿಂದ ಏನಾಯಿತು ?
11. ಮೋಹ ಮುಸುಕಿದ ಬುದ್ಧಿ – ಸರ್ವನಾಶದ ಸಿದ್ಧಿ ಮಾತಿನ ಸ್ವಾರಸ್ಯವೇನು ?
12. ಜೋಡಿ ಪಾರಿವಾಳ ದುಡಿಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

**ಉತ್ತರಗಳು :**

1. ಮುದ್ದು ಪಾರಿವಾಳ ಜೋಡಿಯು ದಟ್ಟಕಾಡಿನ ಹೆಮ್ಮರದ ಹೊದರಿನಲ್ಲಿ ಸಂಸಾರ ಹೂಡಿದ್ದವು.
2. ಪಾರಿವಾಳಗಳು ಪ್ರೀತಿಯಿಂದ ಒಂದನೊಂದು ಅಗಲಿರದೆ ಜೊತೆಯಾಗಿ ಬಾಳುತ್ತಿದ್ದವು.
3. ಇಟ್ಟ ಮೊಟ್ಟೆಗಳು ಒಡೆದು ಹೊರಬಂದ ಮುದ್ದು ಮರಿಗಳ ಮಧುರ ಸದ್ದನ್ನು ಕೇಳಿ ಆನಂದಪಟ್ಟವು.
4. ಪಾರಿವಾಳಗಳ ಬಣ್ಣ ಬಿಳಿಯದು.
5. ಬೇಡನೊಬ್ಬ ಬಂದು ಮರದ ಹತ್ತಿರ ಬಲೆಯನ್ನು ಬೀಸಿದವನು.
6. ಪುಟ್ಟ ಮರಿಗಳು ಮರದ ಕೆಳಗೆ ಬೀಸಿದ್ದ ಬಲೆಯೊಳಗೆ ಸಿಲುಕಿ ಚೀತ್ಕರಿಸತೊಡಗಿದವು.
7. ಆತುರದಿಂದ ತಾಯಿ ಪಾರಿವಾಳ ತಾನೂ ಸಹ ಬಲೆಯೊಳಗೆ ಬಿದ್ದಿತು.
8. ಗಂಡು ಪಾರಿವಾಳವು ತನ್ನ ಹೆಂಡತಿ ಮಕ್ಕಳ ಮೇಲಿದ್ದ ವ್ಯಾಮೋಹದಿಂದ ತಾನೂ ಸಹ ಬಲೆಗೆ ಬಿದ್ದಿತು.
9. ಪಾರಿವಾಳಗಳು ಕುರುಡು ವಾತ್ಸಲ್ಯದಿಂದ ತಮ್ಮ ವಿವೇಕವನ್ನು ಕಳೆದುಕೊಂಡವು.
10. ಮೋಹ ಮುಸುಕಿದ ಬುದ್ಧಿ ಸರ್ವನಾಶಕ್ಕೆ ಕಾರಣವಾಯಿತು.
11. ಕುರುಡು ವಾತ್ಸಲ್ಯಕ್ಕೆ ಸಿಲುಕಿ ತಮ್ಮ ವಿವೇಕವನ್ನು ಕಳೆದುಕೊಂಡರೆ ಸರ್ವನಾಶವಾಗುವುದು ಖಂಡಿತ ಎಂಬುದು ಈ ಮಾತಿನ ಸ್ವಾರಸ್ಯ.
12. ಪ್ರೀತಿ ವಾತ್ಸಲ್ಯ ಇರಬೇಕಾದುದ್ದೇ ಆದರೆ ಅದು ವಿನಾಶಕ್ಕೆ ಕಾರಣವಾಗಬಾರದು ಈ ಕುರುಡು ವಾತ್ಸಲ್ಯವೇ ಪಾರಿವಾಳಗಳ ಸರ್ವನಾಶಕ್ಕೆ ಕಾರಣವಾಯಿತು.

## ಪಠ್ಯಪೋಷಕ ಅಧ್ಯಯನ

### 5 : ಒಗಟುಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ:**

1. ಅಂಗೈಯ ಕೊಟ್ಟರೆ ಮುಂಗೈಯ ನುಂಗುವುದು ಸಿಂಗಳುಕನಲ್ಲ ಶಿವಬಲ್ಲ- ಈ ಒಗಟಿನ ಅರ್ಥವೇನು?
2. ನೀರಲ್ಲೆ ಹುಟ್ಟೋದು ನೀರಲ್ಲೇ ಬೆಳೆಯೋದು ನೀರು ಹಾಕಿದರೆ ಮಟಮಾಯ- ಇದು ಏನು?
3. ಕೆಲಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು- ಇದಕ್ಕೆ ಜನಪದ ಒಗಟಿನ ಉತ್ತರವೇನು?
4. ಕಲ್ಲಲ್ ಕುಕ್ಕೋದಲ್ಲ, ನೀರಲ್ ಸೆಳೆವುದಲ್ಲ ಎಲ್ಲೆಲ್ಲೂ ಕಂಡ್ರೂ ಮಡಿವಸ್ತ್ರ - ಇದು ಏನು?
5. ಬಗಲಲ್ಲಿ ಕುಕ್ಕುವುದು ಬಾಯಲ್ಲಿ ತಿಂಬೂದು - ಇದು ಏನು?

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ:**

1. 'ಅಂಗಿ' ಎಂಬುದನ್ನು ಕುರಿತ ಜನಪದ ಒಗಟನ್ನು ಸಮರ್ಥಿಸಿ.
2. ಕೊಕ್ಕರೆಯನ್ನು ಕುರಿತ ಜನಪದ ಒಗಟನ್ನು ತಿಳಿಸಿ.
3. ಗರಿಕೆಯನ್ನು ಕುರಿತ ಜನಪದ ಒಗಟು ತಿಳಿಸಿ.
4. ನೀರಲ್ಲೆ ಹುಟ್ಟೋದು, ನೀರಲ್ಲೆ ಬೆಳೆಯೋದು ನೀರು ತಾಕಿದರೆ ಮಟಮಾಯ- ಈ ಒಗಟನ್ನು ಸಮರ್ಥಿಸಿ.
5. ' ಕುಪ್ಪಸ' ಅಂಗೈ ಕೊಟ್ಟರೆ ಮುಂಗೈ ನುಂಗುವುದು ಹೇಗೆ? ಸಮರ್ಥಿಸಿ.

### : ಉತ್ತರಗಳು :

**ಒಂದು ಅಂಕದ ಪ್ರಶ್ನೆಗಳು :**

1. ಈ ಒಗಟಿನ ಅರ್ಥ ಕುಪ್ಪಸ.
2. ಇದರ ಅರ್ಥ ಉಪ್ಪು.
3. ಈ ಜನಪದ ಒಗಟಿನ ಉತ್ತರ ತಾವರೆ.
4. ಇದು ಕೊಕ್ಕಕ್ಕಿ ಅಥವಾ ಕೊಕ್ಕರೆ.
5. ಬಗಲಲ್ಲಿ ಕುಕ್ಕುವುದು ಬಾಯಲ್ಲಿ ತಿಂಬೂದು ಬೀಸುವಕಲ್ಲು.

**ಎರಡು ಅಂಕದ ಪ್ರಶ್ನೆಗಳು**

1. ಅಂಗಿಗೆ ಎರಡು ತೋಳುಗಳಿವೆ. ಶಿರ ಇಲ್ಲ, ಅಂಗಿಯ ಒಳಗೆ ಅನೇಕ ಹೊಲಿಗೆಗಳಿರುತ್ತವೆ. ಅದೇ ನವ ಗಾಯ. ನವ ತುಂಡ, ಹಾಕಿಕೊಂಡ ಕೂಡಲೇ ಹೆಗಲೇರುವ ಅಂಗಿ ರಾಜಾಧಿರಾಜರಿಗೂ ಬೇಕೇ ಬೇಕು.
2. ಕೊಕ್ಕರೆ ಕುರಿತ ಒಗಟು ಹೀಗಿದೆ. ಕಲ್ಲಲ್ ಕುಕ್ಕೋದಲ್ಲ, ನೀರಲ್ ಸೆಳೆವುದಲ್ಲ, ಎಲ್ಲಲ್ಲೂ ಕಂಡ್ರು ಮಡಿವಸ್ತ್ರ
3. ಗರಿಕೆ ಕುರಿತ ಒಗಟು- "ಹೊಲದಲ್ಲಿ ಹುಟ್ಟೋದು, ಹೊಲದಲ್ಲಿ ಬೆಳೆಯೋದು, ಉಳುವಾನ ಕಂಡು ನಗುವುದು"
4. ಉಪ್ಪನ್ನು ನೀರಿನಲ್ಲಿಯೇ ತಯಾರಿಸುತ್ತಾರೆ. ಆದರೆ ನೀರು ತಾಕಿದರೆ ಕರಗಿ ಹೋಗುತ್ತದೆ. ಆದ್ದರಿಂದ 'ನೀರಲ್ಲೆ ಹುಟ್ಟೋದು, ನೀರಲ್ಲೇ ಬೆಳೆಯೋದು, ನೀರು ತಾಕಿದರೆ ಮಟಮಾಯ ಎಂಬ ಒಗಟಿಗೆ ಉಪ್ಪು ಸರಿಯಾದ ಉತ್ತರವಾಗಿದೆ.
5. ಅಂಗೈ ಕೊಟ್ಟರೆ ಮುಂಗೈ ನುಂಗುವುದು- ಕುಪ್ಪಸ. ಹೇಗೆಂದರೆ ಕುಪ್ಪಸದ ತೋಳಿಗೆ ಕೈತೂರಿಸಿ ಅದನ್ನು ಧರಿಸಿದಾಗ ಅದು ಮುಂಗೈಯನ್ನೆಲ್ಲಾ ಆವರಿಸಿಕೊಳ್ಳುತ್ತದೆ.

# ನಾಮಪದಗಳು

ನಾಮಪ್ರಕೃತಿಗೆ ನಾಮ ವಿಭಕ್ತಿಗಳು ಸೇರಿ ಆಗುವ ಪದವೇ ನಾಮಪದಗಳು. ನಾಮ ಎಂದರೆ 'ಹೆಸರು' ಎಂದರ್ಥ. ನಾಮಪದವೆಂದರೆ ಹೆಸರನ್ನು ಹೇಳುವ ಪದ ಎಂದು. ಆ ಹೆಸರು ವ್ಯಕ್ತಿಯದ್ದಾಗಿರಬಹುದು, ವಸ್ತುವಿನದಾಗಿರಬಹುದು, ಜೀವಿ- ನಿರ್ಜೀವಿಗಳದ್ದಾಗಿರಬಹುದು ಈ ಎಲ್ಲಾ ಹೆಸರುಗಳನ್ನೂ ಒಟ್ಟಾರೆಯಾಗಿ 'ನಾಮಪದ' ಎನ್ನುತ್ತೇವೆ.

**ನಾಮಪದದ ಮೂಲಪದವನ್ನು 'ನಾಮಪ್ರಕೃತಿ' ಎನ್ನುತ್ತೇವೆ. ನಾಮಪ್ರಕೃತಿ ಪುನಃ ವಿಭಜಿಸಲಾಗದ ಮೂಲಶಬ್ದವಾಗಿದೆ.**

**ಈ ನಾಮಪ್ರಕೃತಿಗಳನ್ನು** – ವಸ್ತುವಾಚಕ, ಗುಣವಾಚಕ, ಸಂಖ್ಯಾವಾಚಕ, ಸಂಖ್ಯೇಯವಾಚಕ, ಭಾವನಾಮ, ಪರಿಮಾಣವಾಚಕ, ಪ್ರಕಾರವಾಚಕ, ದಿಗ್ವಾಚಕ, ಸರ್ವನಾಮಗಳೆಂದು ಅನೇಕ ಬಗೆಗಳಿವೆ.

## ➢ ವಸ್ತುವಾಚಕಗಳು :

ವಸ್ತುವಾಚಕವು ಎಲ್ಲಾ ರೀತಿಯ ಹೆಸರುಗಳನ್ನು ಹೇಳುವುದಾಗಿದ್ದು, ವಸ್ತುವಾಚಕಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ – **1**. ರೂಢನಾಮ **2**. ಅಂಕಿತನಾಮ **3**. ಅನ್ವರ್ಥನಾಮ

❖ **ರೂಢನಾಮ** : ಅನಿರ್ದಿಷ್ಟ ರೂಪದಲ್ಲಿ ರೂಢಿಯಲ್ಲಿ ಬಂದಿರುವ ಎಲ್ಲಾ ಹೆಸರುಗಳನ್ನು ರೂಢನಾಮಗಳು ಎನ್ನಬಹುದು.

**ಉದಾಹರಣೆ** : ಮನುಷ್ಯ, ಮಂದಿ, ನದಿ, ಪರ್ವತ, ದೇಶ, ಗುಂಪು, ಪುಸ್ತಕ, ಹುಡುಗ, ಹುಡುಗಿ, ಹಸು, ಕಣಿವೆ, ತಂದೆ, ತಾಯಿ, – ಇತ್ಯಾದಿ.

❖ **ಅಂಕಿತನಾಮ** : ನಿರ್ದಿಷ್ಟ ರೂಪದ ಹೆಸರು, ನಾವೇ ಇಟ್ಟಿರುವ ಹೆಸರು ಅಂದರೆ ವಸ್ತು, ವ್ಯಕ್ತಿ, ಸ್ಥಳಗಳ ಅರ್ಥಾನು ಕೂಲಕ್ಕಾಗಿ ನಿರ್ದಿಷ್ಟ, ಗೊತ್ತಾದ ಹೆಸರುಗಳನ್ನು ಇಟ್ಟಿರುತ್ತೇವೆ. ಇಂಥಹ ಹೆಸರುಗಳೇ ಅಂಕಿತನಾಮ ಎನ್ನಲಾಗುವುದು. 'ಅಂಕಿತ' ಎಂದರೆ "ನಾವೇ ಇಟ್ಟಿರುವ ಹೆಸರು" ಎಂದರ್ಥ.

**ಉದಾ** : ರಾಮ, ಮೋತಿ, ಹಿಮಾಲಯ, ಕಾವೇರಿನದಿ, ಸೂಯಜ್‌ಕಾಲುವೆ, ಅರಬ್ಬಿಸಮುದ್ರ, ರಾಮಾಯಣ, ಬೌದ್ಧಮತ, ಸಹದೇವ, ಧರ್ಮರಾಯ, ಕಮಲಾಕ್ಷ, ಹಾಸನ, ಬೆಂಗಳೂರು – ಇತ್ಯಾದಿ.

❖ **ಅನ್ವರ್ಥನಾಮ** : ಅರ್ಥಕ್ಕೆ ಅನುಗುಣವಾಗಿ ಗುಣ ಸ್ವಭಾವಾಧಿ ವಿಶೇಷವಾದ ಅರ್ಥಗಳನ್ನು ತಿಳಿಸುವ ಹೆಸರುಗಳು ಅನ್ವರ್ಥನಾಮಗಳು.

**ಉದಾ** : ವ್ಯಾಪಾರಿ, ವಿದ್ವಾಂಸ, ವಿಜ್ಞಾನಿ, ಪೂಜಾರಿ, ವಿದ್ಯಾರ್ಥಿ, ಸಂಸಾರಿ, ಬ್ರಹ್ಮಚಾರಿ, ಒರಟ, ರೋಗಿ, ಚೆಲುವ, ಕುಂಟ, ಕುರುಡ, ಬೆಪ್ಪ, ಎಳವ, ಒಕ್ಕಲಿಗ, – ಇತ್ಯಾದಿ.

## ❖ ಗುಣವಾಚಕಗಳು :

ಗುಣವಾಚಕಗಳೆಂದರೆ ವಸ್ತುವಿನ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ, ಸಾಮಾನ್ಯವಾಗಿ ವಿಶೇಷಣಗಳಾಗಿ ಬರುವ ಪದಗಳೇ ಗುಣವಾಚಕಗಳು.

**ಉದಾ** : ಒಳ್ಳೆಯ, ಕೆಟ್ಟ, ದೊಡ್ಡದು, ಸಣ್ಣದು, ಹಳತು, ಹೊಸತು, ಚಿಕ್ಕ, ಬಿಳಿಯ, ಕರಿಯ, ಹಿರಿದು, – **ಇತ್ಯಾದಿ**

## ❖ ಸಂಖ್ಯಾವಾಚಕಗಳು :

ಭಾಷೆಯಲ್ಲಿ ಸಂಖ್ಯೆಗಳನ್ನು ಹೇಳುವ ಪದಗಳು ಸಂಖ್ಯಾವಾಚಕಗಳಾಗಿರುತ್ತವೆ.

**ಉದಾ** : ಒಂದು, ಆರು, ಹನ್ನೆರಡು, ಐವತ್ತು, ಎಂಬತ್ತು, ಸಾವಿರ, ನೂರು, ಲಕ್ಷ, ಕೋಟಿ – ಇತ್ಯಾದಿ.

## ❖ ಸಂಖ್ಯೇಯವಾಚಕ :

ಸಂಖ್ಯೇಯವಾಚಕಗಳೆಂದರೆ ಬರಿಯ ಎಣಿಕೆಯನ್ನು ತಿಳಿಸದೇ ಎಣಿಕೆಯಲ್ಲಿ ಒಂದುವಸ್ತು ಯಾವ ಸ್ಥಾನದಲ್ಲಿ ಅಥವಾ ಕ್ರಮದಲ್ಲಿ ಬಂದಿದೆ ಎಂಬುದನ್ನು ತಿಳಿಸುವ ಪದಗಳೇ ಸಂಖ್ಯೇಯವಾಚಕಗಳು.

**ಉದಾ** : ಒಂದನೇಯ, ಎಂಟನೇಯ, ನೂರನೇಯ, ಮೂರನೇಯ, ಹನ್ನೆರಡನೇಯ, ಎಂಬತ್ತನೇಯ, – ಇತ್ಯಾದಿ.

## ❖ ಭಾವನಾಮಗಳು :

ನಮ್ಮ ಮನಸ್ಸಿನಲ್ಲಾಗುವ 'ಅನಿಸಿಕೆ'ಗೆ "ಭಾವ" ಎನ್ನಲಾಗುವುದು. ಆ ರೀತಿಯ ಭಾವನೆಗಳನ್ನು ವ್ಯಕ್ತಪಡಿಸುವ ನಾಮಪದಗಳಿಗೆ 'ಭಾವನಾಮ' ಎನ್ನಲಾಗುವುದು. ಇವುಗಳನ್ನು ಕೈಯಿಂದ ಮುಟ್ಟಲಾಗುವುದಿಲ್ಲ ಹಾಗೂ ಕಣ್ಣಿನಿಂದ ನೋಡಲಾಗುವುದಿಲ್ಲ. ಮನಸ್ಸಿಗೆ ಮಾತ್ರ ಅರ್ಥವಾಗುವುದು. ಇಂತಹ ನಾಮಪದಗಳು ಭಾವನಾಮಗಳು.

**ಉದಾ** : ಹುಡುಗತನ, ಲೇಖನ, ನಡಿಗೆ, ಓದುವಿಕೆ, ಓಟ, ನೋಟ, ಸೌಂದರ್ಯ, ಕೆಡುಕು, ಬಿಸಿಲು, ತಂಪು, ಕೆಂಪು, ಹಿರಿಮೆ, ಆಟ, ಮಾಟ, ಶೌರ್ಯ, ಮೃದುತ್ವ – ಇತ್ಯಾದಿ.

❖ **ಪರಿಮಾಣವಾಚಕ :**

**ನಾವು ಹೆಸರು ಹೇಳುವ ವಸ್ತುವಿನ ಪರಿಮಾಣವನ್ನು ( ಅಳತೆಯನ್ನು ) ಮುಖ್ಯವಾಗಿ ಹೇಳುವ ಪದಗಳೇ ಪರಿಮಾಣವಾಚಕಗಳು.**

**ಉದಾ** : ಅಷ್ಟು, ಇಷ್ಟು, ಎಷ್ಟು, ಹಲವು, ಕೆಲವು, ಅನಿತು, ಇನಿತು, ಎಲ್ಲವು – ಇತ್ಯಾದಿ.

❖ **ಪ್ರಕಾರವಾಚಕಗಳು :**

**ವಸ್ತುವಿನ ಗುಣ ಯಾವುದೇ ಇರಲಿ ಅದರ ಪ್ರಕಾರವನ್ನು ಅಂದರೆ ರೀತಿಯನ್ನು ಹೇಳುವ ಪದಗಳೇ ಪ್ರಕಾರವಾಚಕಗಳು.**

**ಉದಾ** : ಎಂತಹ, ಇಂತಹ, ಅಂತಹ, ಎಂಥ, ಇಂಥ, ಅಂಥ – ಇತ್ಯಾದಿ

❖ **ದಿಗ್ವಾಚಕಗಳು :**

ದಿಕ್ಕುಗಳನ್ನು ಸೂಚಿಸುವ ಪದಗಳೇ ದಿಗ್ವಾಚಕಗಳು.

**ಉದಾ** : ಮೂಡಣ, ಪಡುವಣ, ತೆಂಕಣ, ಬಡಗಣ, ಈಶಾನ್ಯ, ನೈರುತ್ಯ, ವಾಯುವ್ಯ, ಆಗ್ನೇಯ, ಮೇಲೆ, ಕೆಳಗೆ, ಅಕ್ಕ, ಪಕ್ಕ, ಅಲ್ಲಿ, ಇಲ್ಲಿ – ಇತ್ಯಾದಿ.

## : ಸರ್ವನಾಮಗಳು :

ವಾಕ್ಯದಲ್ಲಿ ಒಂದೇ ನಾಮಪದದ ಪದಗಳನ್ನು ಪದೇ ಪದೇ ಬಳಸಿದರೆ ಮಾತನಾಡುವಾಗ, ಓದುವಾಗ ಬೇಸರವೆನಿಸುತ್ತದೆ. ಅಂತಹ ಸಂದರ್ಭದಲ್ಲಿ ಬೇಸರವಾಗದ ರೀತಿಯಲ್ಲಿ ನಾಮಪದಗಳ ಬದಲಾಗಿ ಅರ್ಥಕೆಡದಂತೆ ಬೇರೊಂದು ಪದವನ್ನು ಬಳಸುತ್ತೇವೆ, ಅಂದರೆ ' **ನಾಮಪದಗಳಿಗೆ ಬದಲಾಗಿ ಬಳಸುವ ಪದಗಳೇ ಸರ್ವನಾಮಗಳು** ಸರ್ವನಾಮಗಳಲ್ಲಿ ಪುರುಷಾರ್ಥಕ, ಪ್ರಶ್ನಾರ್ಥಕ, ಆತ್ಮಾರ್ಥಕ ಸರ್ವನಾಮಗಳೆಂಬ ವಿಭಾಗಗಳಿವೆ.

❖ **ಪುರುಪಾರ್ಥಕ ಸರ್ವನಾಮಗಳಲ್ಲಿ ಮೂರು ವಿಧಗಳಿವೆ :**

1. **ಉತ್ತಮ ಪುರುಷ** : ________ ನಾನು – ನಾವು.
2. **ಮಧ್ಯಮ ಪುರುಷ** : ________ ನೀನು – ನೀವು
3. **ಪ್ರಥಮ ಪುರುಷ** : ________ ಅವನು – ಅವರು
   ಅವಳು – ಅವರು
   ಇವನು – ಇವರು
   ಇವಳು – ಇವರು
   ಅದು – ಅವು
   ಇದು – ಇವು

❖ **ಪ್ರಶ್ನಾರ್ಥಕ ಸರ್ವನಾಮಗಳು – ಯಾರು?** ಏನು? ಏಕೆ? **ಯಾವುದು? ಯಾರಿಗೆ? ಹೇಗೆ ?** ಎಲ್ಲಿ ? **ಯಾವಾಗ?– ಇತ್ಯಾದಿ.**

❖ **ಆತ್ಮಾರ್ಥಕ ಸರ್ವನಾಮಗಳು** _ ತಾನು, ತಾವು, ತನ್ನ, ತಮ್ಮ,

## : ಸಾಧಿತ ನಾಮಪದಗಳು :

ಇವರಗೆ ನಾಮಪದ ಸ್ವರೂಪ ಬಗೆಗೆಗಳು ಬಗೆಗಳು ಮತ್ತು ರಚನೆಯ ಬಗ್ಗೆ ತಿಳಿದು ಕೊಳ್ಳಲಾಗಿದೆ. ನಾಮಪದಗಳು ಸ್ವತಂತ್ರವಾಗಿ ಬಳಸಲಾಗುವಂತೆ, ಪ್ರತ್ಯಯಗಳ ಹಾಗೂ ಹೆಚ್ಚಿನ ಪ್ರಕೃತಿಗಳ ಸೇರ್ಪಡೆಯಿಂದ ಸಾದಿತವಾಗಿ ಬಳಸಿಕೊಳ್ಳು ಸಾಧ್ಯವಿದೆ. ಅಂದರೆ ಧಾತುವಿಗೆ, ನಾಮಪ್ರಕೃತಿಗೆ ಪ್ರತ್ಯಯಗಳು ಸೇರಿ ಮತ್ತು ಅನೇಕ ನಾಪದಗಳೇ ಸೇರಿ ಸಾಧಿತವಾಗು ವಂತಹ ನಾಮಪದಗಳೇ ಸಾಧಿತನಾಮಪದಗಳು.

**ಸಾಧಿತ ನಾಮಪದಗಳಲ್ಲಿ ಮೂರು ವಿಧಗಳಿವೆ. ಅವುಗಳೆಂದರೆ :**

1. **ಕೃದಂತಗಳು**
2. **ತದ್ಧಿತಾಂತಗಳು**
3. **ಸಮಾಸಗಳು.**

## 1. ಕೃದಂತಗಳು :

ಧಾತುಗಳಿಗೆ 'ಕೃತ್'ಪ್ರತ್ಯಯಗಳು ಸೇರಿ 'ಕೃದಂತ'ಗಳಾಗುತ್ತವೆ. ಇದಕ್ಕೆ ಕೃನ್ನಾಮಗಳೆಂಬ ಹೆಸರು ಸಹ ಇದೆ.
**ಉದಾ :** ಮಾಡಿದ, ಹೋಗುವ – ಮೊದಲಾದ ಪದಗಳು. ಈ ಪದಗಳನ್ನು ಬಿಡಿಸಿದಾಗ ಮಾಡು+ದ+ಅ ಮತ್ತು ಮಾಡು+ದ+ಅ ಎಂದಾಗುತ್ತದೆ. 'ಮಾಡು' 'ಹೋಗು' ಎಂಬ ಪದಗಳು ಧಾತುಗಳು ಇವಕ್ಕೆ 'ದ' ಎಂಬ ಕಾಲಪ್ರತ್ಯಯ ಹಾಗೂ 'ಅ' ಎಂಬ 'ಕೃತ್' ಪ್ರತ್ಯಯಗಳು ಸೇರಿ ನಾಮಪ್ರಕೃತಿಗಳಾಗುತ್ತವೆ. ಈ ನಾಮಪ್ರಕೃತಿಗಳನ್ನೇ ಕೃದಾಂತಗಳೆನ್ನುತ್ತಾರೆ.

ಈ ಕೃದಾಂತಗಳಲ್ಲಿ **ಕೃದಂತನಾಮಗಳು, ಕೃದಂತಭಾವನಾಮಗಳು, ಕೃದಂತಾವ್ಯಯವೆಂಬ** ಮೂರು ಬಗೆಗಳಿವೆ.

### ❖ ಕೃದಂತನಾಮಗಳು :

ಧಾತುವಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್‌ಪ್ರತ್ಯಯ ಬರುವುದು. ಧಾತುವಿಗೆ ಕೃತ್ ಪ್ರತ್ಯಯಕ್ಕೂ ಮಧ್ಯದಲ್ಲಿ ಕಾಲಸೂಚಕ ಪ್ರತ್ಯಯಗಳು ಸೇರಿಕೊಂಡು ಕೃದಂತನಾಮಗಳಾಗುತ್ತವೆ.
ಧಾತುವಿಗೆ 'ಉವ' (ವ) ಪ್ರತ್ಯಯ ಸೇರಿದರೆ ವರ್ತಮಾನ-ಭವಿಷತ್ ಕಾಲದ ಕೃದಾಂತದ ರೂಪವು, ಧಾತುವಿಗೆ 'ದ' ಪ್ರತ್ಯಯ ಸೇರಿದರೆ ಭೂತಕಾಲದ ಕೃದಾಂತ ರೂಪವು ಮತ್ತು ಧಾತುವಿಗೆ 'ಅದ' ಪ್ರತ್ಯಯವು ಸೇರಿ ನಿಷೇಧಕೃದಾಂತ ರೂಪಗಳಾಗುತ್ತವೆ.

**ಉದಾ :**

❖ **ವರ್ತಮಾನ – ಭವಿಷತ್ ಕೃದಾಂತಕ್ಕೆ** – ಓಡುವ – ಓಡು + ವ + ಅ
ಮಾಡುವ – ಮಾಡು + ವ + ಅ
ಬಾಳುವ – ಬಾಳು + ವ + ಅ
ಬರೆಯುವ – ಬರೆ + ಉವ + ಅ

❖ **ಭೂತಕಾಲ ಕೃದಾಂತಕ್ಕೆ** – ಓಡಿದ – ಓಡು + ದ + ಅ
ಮಾಡಿದ – ಮಾಡು + ದ + ಅ
ಬಾಳಿದ – ಬಾಳು + ದ + ಅ
ಬರೆದ – ಬರೆ + ದ + ಅ

❖ **ನಿಷೇಧ ಕೃದಾಂತಕ್ಕೆ** – ಓಡದ – ಓಡು + ಅದ + ಅ
ಮಾಡದ – ಮಾಡು + ಅದ + ಅ
ಬಾಳದ – ಬಾಳು + ಅದ + ಅ
ಬರೆಯದ – ಬರೆ + ಅದ + ಅ

### ❖ ಕೃದಂತ ಭಾವನಾಮಗಳು :

ಧಾತುಗಳ ಮೇಲೆ ಭಾವಾರ್ಥದಲ್ಲಿ 'ಕೃತ್'ಪ್ರತ್ಯಗಳು ಸೇರಿದಾಗ ಕೃದಾಂತ ಭಾವನಾಮಗಳಾಗುತ್ತವೆ. ಸಾಮಾನ್ಯವಾಗಿ ಧಾತುವಿಗೆ ಉದು, ವಿಕೆ, ಇಗೆ, ಅವು, ವು, ತ, ಟ, ವಳಿ, ಪು, ಅವು, ಅಲು, ಎ, ಅಕೆ, ವಳಿಕೆ, ವಣಿಗೆ ಎಂಬ ಕೃತ್ ಪ್ರತ್ಯಗಳು ಭಾವಾರ್ಥದಲ್ಲಿ ಸೇರುವ ಮೂಲಕ ಕೃದಾಂತಭಾವನಾಮಗಳಾಗುತ್ತವೆ.

**ಉದಾಹರಣೆಗೆ :** 'ಓಡು'ವುದರ ಭಾವ **'ಓಟ'**
'ಬಾಳು'ವುದರ ಭಾವ **'ಬಾಳುವಿಕೆ'**.
'ಅಂಜು'ವುದರ ಭಾವ **'ಅಂಜಿಕೆ'**
'ಉಡು'ವುದರ ಭಾವ **'ಉಡುಗೆ'**
'ನಗು'ವುದರ ಭಾವ **'ನಗುವುದು'** – ಇತ್ಯಾದಿ

**ನೋಟ, ಬರೆಯುವಿಕೆ, ನಂಬಿಕೆ, ತೊಡುಗೆ, ತಿನ್ನುವುದು, ಕೂಟ** – ಇತ್ಯಾದಿ.

### ❖ ಕೃದಂತಾವ್ಯಯಗಳು :

ಧಾತುಗಳಿಂದ ಹುಟ್ಟಿ ಅವ್ಯಯದ ಗುಣಗಳನ್ನು ಪಡೆದಂತಹ ಪದಗಳನ್ನು 'ಕೃದಂತಾವ್ಯಯ'ಗಳು ಅಥವಾ ಅವ್ಯಯ ಕೃದಂತಗಳೆಂದು ಕರೆಯಲಾಗುತ್ತದೆ. ಧಾತುಗಳ ಮೇಲೆ ಉತ್ತ, ಅದೆ, ದರೆ, ಅಲು, ಅಲಿಕೆ, ಅ, ಇ, ದು ಇತ್ಯಾದಿ ಪ್ರತ್ಯಯಗಳು ಸೇರಿ ಕೃದಾಂತವ್ಯಯಗಳಾಗುತ್ತವೆ.

**ಉದಾಹರಣೆ :** **ಮಾಡುತ್ತಾ** – ಮಾಡು + ಉತ್ತ
**ಮಾಡದೆ** – ಮಾಡು + ಅದೆ
**ಮಾಡಲು** – ಮಾಡು + ಅಲು
**ಮಾಡಲಿಕ್ಕೆ** – ಮಾಡು + ಅಲಿಕೆ
**ಮಾಡ** – ಮಾಡು + ಅ
**ಮಾಡಿ** – ಮಾಡಿ + ಇ
**ಬರೆದು** – ಬರೆ + ದು

## 2. ತದ್ಧಿತಾಂತಗಳು :

ನಾಮಪದಗಳ ಮೇಲೆ ಹಲವಾರು ಅರ್ಥಗಳಲ್ಲಿ ಗಾರ, ಕಾರ, ವಂತ, ಅರ, ಇಗ, ಅಡಿಗ, ಅನೆಯ, ಆಳಿ, ಕೋರ, ವಾಳ – ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತಗಳಾಗುತ್ತವೆ.

ತದ್ಧಿತಾಂತಗಳಲ್ಲಿ ಮೂರು ವಿಭಾಗಗಳಿವೆ. ಅವುಗಳೆಂದರೆ : –

- **ತದ್ಧಿತಾಂತನಾಮ,**
- **ತದ್ಧಿತಾಂತಭಾವನಾಮ**
- **ತದ್ಧಿತಾಂತ ಅವ್ಯಯ**

**❖ ತದ್ಧಿತಾಂತನಾಮಗಳು :**

ನಾಮಪದಗಳಿಗೆ ತದ್ಧಿತ ಪ್ರತ್ಯಯಗಳು ಸೇರಿ ಆಗುವ ಪದಗಳೇ ತದ್ಧಿತಾಂತ ನಾಮಗಳು.

**ಉದಾಹರಣೆ : ಗಾರ** :– ಸಾಲಗಾರ, ಮೋಸಗಾರ, ಬಳೆಗಾರ, ಛಲಗಾರ, ಸೊಗಸುಗಾರ, ಜೂಜುಗಾರ. ಕಥೆಗಾರ.

**ಕಾರ** :– ಕೋಲುಕಾರ, ಓಲೆಕಾರ, ಗುರಿಕಾರ, ಕಾದಂಬರಿಕಾರ,

**ವಂತ** :– ಸಿರಿವಂತ, ಬುದ್ಧಿವಂತ, ಸತ್ಯವಂತ, ಗುಣವಂತ, ಪುಣ್ಯವಂತ, ಧನವಂತ.

**ಅರ** :– ಕುಂಬಾರ, ಚಮ್ಮಾರ, ಕಮ್ಮಾರ

**ಇಗ** :– ಕನ್ನಡಿಗ, ಕೇಡಿಗ, ಗಾಣಿಗ, ಲೆಕ್ಕಿಗ.

**ಅಡಿಗ** :– ಹೂವಾಡಿಗ, ಹಾವಾಡಿಗ.

**ಅನೆಯ** :– ಒಂದನೆಯ, ನಾಲ್ಕನೆಯ, ಐವತ್ತನೆಯ, ಹತ್ತನೆಯ, ನೂರನೆಯ.

**ಕೋರ** :– ಚಾಡಿಕೋರ, ಲಂಚಕೋರ, ದಗಾಕೋರ.

**ವಾಳ** :– ಮಡಿವಾಳ. ಹಡಪವಳ – ಇತ್ಯಾದಿ.

**ಸ್ತ್ರೀಲಿಂಗಕ್ಕೆ – ಗಾರ್ತಿ** :– ಸಾಲಗಾರ್ತಿ, ಮೋಸಗಾರ್ತಿ, ಬಳೆಗಾರ್ತಿ, ಸೊಗಸುಗಾರ್ತಿ

**ವಂತೆ** :– ಹಣವಂತೆ, ಗುಣವಂತೆ, ಸತ್ಯವಂತೆ, ಧನವಂತೆ, ಪುಣ್ಯವಂತೆ.

**( ಈ ಮಾದರಿಯಂತೆ ಉಳಿದ ಸ್ತ್ರೀಲಿಂಗ ತದ್ಧಿತಾಂತ ನಾಮಗಳು ಬರುತ್ತವೆ. )**

**❖ ತದ್ಧಿತಾಂತ ಭಾವನಾಮಗಳು :**

ನಾಮಪದಗಳ ಮುಂದೆ ಭಾವಾರ್ಥದಲ್ಲಿ ತನ, ಇಕೆ, ಉ, ಪು, ವು, ಮೆ, ಪೆ ಮೊದಲಾದ ಪ್ರತ್ಯಯಗಳು ಸೇರಿದಾಗ ತದ್ಧಿತಾಂತ ಭಾವನಾಮಗಳಾಗುತ್ತವೆ.

**ಉದಾಹರಣೆ : ತನ** :– ಜಾಣತನ, ದೊಡ್ಡತನ, ಮನೆತನ, ಹಗೆತನ, ಹುಚ್ಚುತನ, ಮನೆತನ.

**ಇಕೆ** :– ನಾಚಿಕೆ, ಗೌಡಿಕೆ, ಉನ್ನತಿಕೆ, ಮಡಿವಂತಿಕೆ.

**ಉ** :– ಕಿವುಡು, ಹುಚ್ಚು,

**ಪು** :– ಬಿಳುಪು, ಹೊಳಪು, ನುಣುಪು, ಕಪ್ಪು, ಕೆಂಪು.

**ಮೆ** : ಪೆರ್ಮೆ, ಜಾಣ್ಮೆ, ನಲ್ಮೆ, ಒಲುಮೆ, – ಇತ್ಯಾದಿ.

**❖ ತದ್ಧಿತಾಂತ ಅವ್ಯಯಗಳು :**

ನಾಮಪದಗಳ ಮುಂದೆ ಅಂತೆ, ವೊಲ್, ವೋಲು, ತನಕ, ವರಗೆ, ಇಂತ, ಆಗಿ, ಓಸುಗ – ಮುಂತಾದ ಪ್ರತ್ಯಯಗಳು ಸೇರಿ ತದ್ಧಿತಾಂತಾವ್ಯಯಗಳಾಗುತ್ತವೆ.

**ಉದಾಹರಣೆ : ಅಂತೆ** : ಚಂದ್ರನಂತೆ, ಅವನಂತೆ, ನನ್ನಂತೆ, ರಾಣಿಯಂತೆ.

**ವೊಲ್** : ಚಂದ್ರನವೊಲ್, ಅವನವೊಲ್, ನನ್ನವೊಲ್, ರಾಣಿಯವೊಲ್.

**ವೊಲು** : ನನ್ನವೊಲು, ಇದರವೊಲು, ರಾಜನವೊಲು,

**( ಈ ಮಾದರಿಯಲ್ಲಿ ಉಳಿದ ಎಲ್ಲಾ ತದ್ಧಿತಾಂತ ಅವ್ಯಯ ಪ್ರತ್ಯಯಗಳು ಸೇರಿ ತದ್ಧಿತಾಂತ ಅವ್ಯಯಗಳಾಗುತ್ತವೆ.)**

# 3. ಸಮಾಸಗಳು :

೧) ಸಮ್+ ಆಸ = ಸಮಾಸ
ಸಮ್ – ಸಂಕ್ಷೇಪ ಆಸ = ಇರುವುದು
**ಸಮಾಸ ಎಂದರೆ ಸಂಕ್ಷೇಪವಾಗಿರುವುದು ಎಂದರ್ಥ**
2) ಎರಡು ಅಥವ ಅನೇಕ ನಾಮಪದಗಳು ಸೇರಿ ಸಮಾಸವಾಗುವಾಗ ಮಧ್ಯದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಲೋಪಮಾಡಿಕೊಂಡು ಒಂದೇ ಪದವಾಗಿರುವುದಕ್ಕೆ ಸಮಾಸ ಎನ್ನುವರು.
3) ಪೂರ್ವೋತ್ತರಗಳಲ್ಲಿ **ಪದ–ಪದಗಳು** ಸೇರಿ ಆಗುವುದಕ್ಕೆ **ಸಮಾಸ** ಎನ್ನುವರು.
ಉದಾ– ಬೆಟ್ಟದ+ತಾವರೆ – **ಬೆಟ್ಟದಾವರೆ.**

ತಲೆಯಲ್ಲಿ+ನೋವು–**ತಲೆನೋವು.** ಗಿರಿಯೂ+ವನವೂ+ದುರ್ಗವೂ –**ಗಿರಿವನದುರ್ಗಗಳು.**

ಸಮಾಸದಲ್ಲಿ **ಎಡಭಾಗ ಪೂರ್ವಪದ** (ಬೆಟ್ಟ ,ತಲೆ)ವಾಗಿದ್ದು **ಬಲಭಾಗದ ಪದ ಉತ್ತರಪದ/ಪರ ಪದವಾಗಿರುತ್ತದೆ.**(ತಾವರೆ,ನೋವು)
ಗಿರಿ, ವನ, ದುರ್ಗ ಎಂಬುದು ಎರಡಕ್ಕಿಂತ ಹೆಚ್ಚು ನಾಮಪದಗಳು ಸೇರಿ ಸಮಸವಾಗಿರುವುದಕ್ಕೆ ಉದಾಹರಣೆಯಾಗಿದೆ.
**ವಿಗ್ರಹವಾಕ್ಯ :**– ಸಮಸ್ತಪದವು ಯಾವ ಅರ್ಥದಿಂದ ಕೂಡಿದೆ ಎಂದು ವಿಭಜಿಸಿ ಹೇಳುವುದಕ್ಕೆ **'ವಿಗ್ರಹವಾಕ್ಯ'** ಎನ್ನುವರು.
ಉದಾ :– ಮುಕ್ಕಣ್ಣು –ಮೂರು + ಕಣ್ಣು ಮುಕ್ಕಣ್ಣ –ಮೂರು +ಕಣ್ಣುಳ್ಳವ ಆವನೋ ಅವನು (ಬ.ಸ )

**ಸಮಾಸಗಳ ವಿಧಗಳು (8) :**

1. **ತತ್ಪುರುಷಸಮಾಸ** : (ನಾಮಪದ(ಸ್ವತಂತ್ರ ) + ನಾಮಪದ (ಸ್ವತಂತ್ರ))
2. **ಕರ್ಮಧಾರಯಸಮಾಸ :** ವಿಶೇಷಣ + ವಿಶೇಷ್ಯ ( ಗುಣವಾಚಕ + ನಾಮಪದ)
3. **ದ್ವಿಗುಸಮಾಸ** : (ಸಂಖ್ಯೆ + ನಾಮಪದ)
4. **ಬಹುವ್ರೀಹಿಸಮಾಸ** : (ಅನ್ಯಪದದ ಅರ್ಥ ಪ್ರಧಾನ)
5. **ಅಂಶಿ ಸಮಾಸ** : (ಅಂಶ + ಅಂಶಿ)
6. **ದ್ವಂದ್ವಸಮಾಸ** : (ಉಭಯ / ಎಲ್ಲಾ ಪದಗಳ ಆರ್ಥ ಪ್ರಧಾನ)
7. **ಕ್ರಿಯಾಸಮಾಸ** : (ನಾಮಪದ(ಅನ್ನು) + ಕ್ರಿಯಾಪದ)
8. **ಗಮಕಸಮಾಸ** :1) ಸಂಖ್ಯೆ, ಸರ್ವನಾಮ, ಗುಣವಾಚಕ + ನಾಮಪದ 2) ಕ್ರಿಯಾಪದ + ನಾಮಪದ (ಕೃದಂತ)

❖ **ತತ್ಪುರುಷ ಸಮಾಸ :**

**ಸೂತ್ರ: ನಾಮಪದ + ನಾಮಪದ = ತತ್ಪುರುಷಸಮಾಸ**

**ಉದಾ : ಬೆಟ್ಟದಾವರೆ** = ಬೆಟ್ಟದ+ತಾವರೆ **ತಲೆನೋವು** = ತಲೆಯಲ್ಲಿ+ನೋವು
**ಪೂದೋಟ** = ಪೂವಿನ+ತೋಟ

ಇಲ್ಲಿ **ಉತ್ರರಪದದ ಅರ್ಥವೇ ಪ್ರಧಾನವಾಗಿರುತ್ತದೆ** (ತಾವರೆ, ನೋವು, ತೋಟ) ಎಡ ಮತ್ತು ಬಲಭಾಗದಲ್ಲಿ ಇರುವ ಎರಡು ನಾಮಪದಗಳು ಸ್ವತಂತ್ರವಾಗಿರುವುದೇ ಈ ಸಮಾಸದ ವೈಶಿಷ್ಟ್ಯವಾಗಿದೆ.

❖ **ಕರ್ಮಧಾರೆಯ ಸಮಾಸ :**

ಗುಣವಾಚಕ + ನಾಮಪದ = ಕರ್ಮಧಾರೆಯ ಸಮಾಸ ಈ ಸಮಾಸದಲ್ಲಿ ಎರಡೂ ಕಡೆಯಲ್ಲಿ (ಪೂರ್ವ ಮತ್ತು ಉತ್ತರಪದ) ನಾಮಪದಗಳಿದ್ದು ಎಡಭಾಗ ಗುಣವಾಚಕ (ವಿಶೇಷಣ) ವಾಗಿರುವುದು ವಿಶೇಷ.

ಉದಾ : **ಪೆರ್ಮಗ** = ಪಿರಿದು+ಮಗ. **ಪೆರ್ಮರ** = ಪಿರಿದು+ಮರ
**ಕಟ್ಟೇಕಾಂತ** = ಕಡಿದಾದ+ಏಕಾಂತ(**ಕಡಿದು+ಏಕಾಂತ**). **ಹೊಸಗನ್ನಡ** = ಹೊಸದು+ಕನ್ನಡ
ಇತರೆ ಉದಾ : **ಕಿರುಗೆಜ್ಜೆ** = ಕಿರಿದಾದ + ಗೆಜ್ಜೆ **ಕೆಂದಾವರೆ** = ಕೆಂಪಾದ+ತಾವರೆ
**ಹೆಬ್ಬಂಡೆ** = ಹಿರಿದಾದ+ಬಂಡೆ

ಈ ರೀತಿ **ಎಡಭಾಗದ ಪದ ಗುಣವಾಚಕವಾಗಿರುತ್ತದೆ.**ಅದು ಮುಂದಿದರುವ **ನಾಮಪದದ ತೂಕ, ಎತ್ತರ, ಬಣ್ಣ, ಗಾತ್ರ** – ಇತ್ಯಾದಿ. ಈ ರೀತಿ ಇರುವ ಸಮಾಸವೇ **ಕರ್ಮಧಾರಯಸಮಾಸ** ಆಗಿರುತ್ತದೆ. ಇಲ್ಲಿಯೂ ಉತ್ತರ ಪದದ ಅರ್ಥ ವೇ ಮುಖ್ಯವಾಗಿರುತ್ತದೆ.

❖ **ದ್ವಿಗು ಸಮಾಸ:-**

**ಪೂರ್ವಪದವು ಸಂಖ್ಯಾವಾಚಕವಾಗಿದ್ದು ಉತ್ತರ ಪದದಲ್ಲಿರುವ ನಾಮಪದದೊಂದಿಗೆ ಸೇರಿ ಆಗುವ ಸಮಾಸವೇ 'ದ್ವಿಗು'ಸಮಾಸ'**

**ಸೂತ್ರ :** ಸಂಖ್ಯೆ + ನಾಮಪದ = **ದ್ವಿಗುಸಮಾಸ .**

**ಉದಾ : ಮುಕ್ಕಣ್ಣು**– ಮೂರು + ಕಣ್ಣು . **ಮೂಗಾವುದ** – ಮೂರು + ಗಾವುದ.

ಈ ರೀತಿ ಎಡಭಾಗದ ಪದ ಸಂಖ್ಯೆಯಾಗಿದ್ದು, ಬಲಭಾಗದ ಪದ (ಉತ್ತರಪದ) ನಾಮಪದವಾಗಿರುತ್ತದೆ.

❖ **ಬಹುವ್ರೀಹಿ ಸಮಾಸ :**

**'ಅನ್ಯಪದದ ಅರ್ಥ' ಪ್ರಧಾನವಾಗಿವುಳ್ಳ ಸಮಾಸವೇ ಬಹುವ್ರೀಹಿ ಸಮಾಸ.**

**ಉದಾ :– ಚಕ್ರಪಾಣಿ** = ಚಕ್ರವು ಪಾಣಿಯಲ್ಲಿ ಹೊಂದಿರುವವನು ಯಾರೋ ಅವನು (ವಿಷ್ಣು).

**ಹಣೆಗಣ್ಣ** = ಹಣೆಯಲ್ಲಿ ಕಣ್ಣು ಉಳ್ಳವನು ಆವನೋ ಅವನು. (ಶಿವ)

**ಪವನನಂದನ** = ಪವನನ(ಗಾಳಿ) ನಂದನ (ಮಗ)ನು ಆವನೋ ಅವನು( ಭೀಮ).

**ಗಾಂಡೀವಿ** = ಗಾಂಡೀವಿ ಎಂಬ ಬಿಲ್ಲನ್ನು ಹೊಂದಿದವನು ಆವನೋ ಅವನು ( **ಅರ್ಜುನ**).

**ಇನತನೂಜ** = ಇನ (ಸೂರ್ಯ)ನ ತನುಜ (ಮಗ)ನು ಆವನೋ ಅವನು (**ಕರ್ಣ**).

ಈ ಮೇಲಿನ ಎಲ್ಲಾ ಉದಾಹರಣೆಗಳಲ್ಲೂ ಮೂರನೇ ಪದದ ಅರ್ಥ (ಅನ್ಯಪದ) (ವಿಷ್ಣು, ಶಿವ, ಭೀಮ, ಅರ್ಜುನ, ಕರ್ಣ ) ಪ್ರಧಾನವಾಗಿದೆ. **ಇವು ಅನ್ವರ್ಥ(ಕ) ನಾಮಪದಗಳಾಗಿರುತ್ತವೆ.**

❖ **ಅಂಶಿ ಸಮಾಸ :**

ಪೂರ್ವೋತ್ತರಗಳಲ್ಲಿ ಅಂಶಾಂಶಿಭಾವ ಏರ್ಪಡುವ ಸಮಾಸವೇ ಅಂಶಿ ಸಮಾಸ,

**ನಿಯಮ** : ಅಂಶ+ಅಂಶಿ = ಅಂಶಿಸಮಾಸ. (**ಅಂಶ :** ವಸ್ತುವಿನ ಒಂದು ಭಾಗ **ಅಂಶಿ :** ವಸ್ತುವಿನ ಸಮಗ್ರಭಾಗ)

**(ವಿಗ್ರಹವಾಕ್ಯ ಮಾಡುವಾಗ ಅಂಶಿಯನ್ನು ಮೊದಲು ನಂತರ ಅಂಶವನ್ನು ಬರೆಯಬೇಕು.)**

**ಉದಾ :– ಅಂಗೈ** = ಕೈಯ+ಅಡಿ. **ಹಿಂದಲೆ** = ತಲೆಯ+ಹಿಂದು.

**ಕಡೆಗಣ್ಣು** = ಕಣ್ಣ+ಕಡೆ. **ಮುಂಗೈ** = ಕೈಯ+ಮುಂದು.

**ನಡುರಾತ್ರಿ** = ರಾತ್ರಿಯ+ನಡು.

❖ **ದ್ವಂದ್ವ ಸಮಾಸ :** ಉಭಯ ಪದಗಳ ಅರ್ಥ ಪ್ರಧಾನವಾಗಿರುವ ಸಮಾಸವೇ ದ್ವಂದ್ವ ಸಮಾಸ

**ಉದಾ : – ಗಿರಿವನದುರ್ಗಗಳು** – ಗಿರಿಯೂ+ವನವೂ+ದುರ್ಗವೂ.

**ಕರಿತುರಗರಥ**–ಕರಿಯು+ತುರಗವು+ರಥವು

ಇಲ್ಲಿ ಗಿರಿ, ವನ, ದುರ್ಗ ಎಲ್ಲಾ ಪದಗಳು ಮುಖ್ಯ ಯಾವುದನ್ನು ಬಿಡಲು ಸಾಧ್ಯವಿಲ್ಲ. ಅದ್ದರಿಂದ ಇದು ದ್ವಂದ್ವಸಮಾಸವಾಗಿದೆ.

**ವಿಶೇಷತೆ :**– ಏಕವಚನ ಮತ್ತು ಬಹುವಚನಗಳೆಂದು ಎರಡು ವಿಧದ ಉದಾಹರಣೆಗಳಿವೆ.

❖ **ಏಕವಚನಕ್ಕೆ ಉದಾ – ಕಸಕಡ್ಡಿ** = ಕಸ+ಕಡ್ಡಿ, ಕಸವು+ಕಡ್ಡಿಯು, **ಕಸ ಮತ್ತು ಕಡ್ಡಿ ಎಂದು ಮೂರು** ರೀತಿಯಲ್ಲಿ **ಬಿಡಿಸಬಹುದು.**

❖ **ಬಹುವಚನಕ್ಕೆ ಉದಾಹರಣೆ–ಗಿರವನದುರ್ಗಗಳು**–ಗಿರಿಯೂ+ವನವೂ+ದುರ್ಗವೂ, ಇಲ್ಲ ಪ್ರತಿ ನಾಮಪದದ ಮುಂದೆಯೂ **'ಊ'** ದೀರ್ಘಸ್ವರ ಬರುವಂತೆ ಬಿಡಿಸಬೇಕು.

**( ಈ ಮೇಲಿನ ಉದಾಹರಣೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇಂತಹ ಉದಾಹರಣೆಗಳನ್ನು ಕೇಳಲಾಗಿದೆ).**

7. **ಕ್ರಿಯಾ ಸಮಾಸ :**–

ಪೂರ್ವಪದವು ದ್ವಿತೀಯ ವಿಭಕ್ತಿ ಅಂತ್ಯ ನಾಮಪದವಾಗಿದ್ದು, ಉತ್ತರಪದದಲ್ಲಿರುವ ಕ್ರಿಯಾಪದದೊಂದಿಗೆ ಸೇರಿ ಆಗುವ ಸಮಾಸವೇ **ಕ್ರಿಯಾ ಸಮಾಸ. ಸೂತ್ರ :** ನಾಮಪದ + ಕ್ರಿಯಾಪದ = ಕ್ರಿಯಾಸಮಾಸ.

**ಉದಾ : ಕೈಮುಗಿ** = ಕೈಯನ್ನು + ಮುಗಿ

**ಸುಳ್ಳಾಡು** = ಸುಳ್ಳನ್ನು+ಅಡು

**ವಿಷಕಾರು** = ವಿಷವನ್ನು +ಕಾರು

**ಕಣ್ದೆರೆ** = ಕಣ್ಣಂ+ತೆರೆ ( ಕಣ್ಣನ್ನು+ತೆರೆ)

ಇಲ್ಲಿ **ಕೈ,ಸುಳ್ಳು, ವಿಷ, ಕಣ್ಣು** ಇವುಗಳು ನಾಮಪದಗಳಾಗಿವೆ. **ಮುಗಿ, ಅಡು ಕಾರು, ತೆರೆ,** ಇವುಗಳುಕ್ರಿಯಾವಾಚಕಗಳಾಗಿವೆ.

➢ **8. ಗಮಕ ಸಮಾಸ :**

ಪೂರ್ವಪದವು **ಕೃದಂತ, ಸಂಖ್ಯೆ, ಸರ್ವನಾಮ, ಗುಣವಾಚಕ**ಗಳಲ್ಲಿ ಒಂದಾಗಿರುವ ಸಮಾಸವೇ **ಗಮಕಸಮಾಸ.**

❖ **ಕೃದಂತಕ್ಕೆ ಸೂತ್ರ ಮತ್ತು ಉದಾಹರಣೆ. ಸೂತ್ರ :** ಕ್ರಿಯಾಪದ + ನಾಮಪದ.

**ಉದಾ : ಸಿಡಿಗುಂಡು** = ಸಿಡಿಯುವುದು + ಗುಂಡು **ಬೆಂದಬೇಳೆ** = ಬೆಂದುದು + ಬೇಳೆ

**ನೆಯ್ದವಸ್ತ್ರ** = ನೆಯ್ದುದು + ವಸ್ತ್ರ – ಇಲ್ಲಿ ಸಿಡಿ, ಬೆಂದು, ನೆಯ್ದ, ಇವುಗಳು ಕ್ರಿಯಾಪದದ ಮೂಲಪದ ಧಾತು/ಕ್ರಿಯಾಪ್ರಕೃತಿಯಾಗಿದ್ದು, ಉತ್ತರಪದದಲ್ಲಿ **ಗುಂಡು, ಬೇಳೆ, ವಸ್ತ್ರ** ಎಂಬ ಪದಗಳು ಹೆಸರನ್ನು ಹೇಳದ ನಾಮಪದಗಳಾಗಿವೆ. ( ಕ್ರಿಯೆಗೆ ಸಂಬಂಧಪಟ್ಟವರ ಹೆಸರು ಇಲ್ಲಿ ಪರೋಕ್ಷವಾಗಿದೆ )

❖ **ಸಂಖ್ಯೆಗೆ ಸೂತ್ರ ಮತ್ತು ಉದಾಹರಣೆ** : – **ಸೂತ್ರ :**– ಸಂಖ್ಯೆ + ಸಂಖ್ಯೆ ( ನಿರ್ದಿಷ್ಟ)

**ಉದಾ : ಮೂವತ್ತೈದು** – ಮೂವತ್ತರ + ಐದು **ಐವತ್ತಾರು** = ಐವತ್ತರ + ಆರು

ಈ ರೀತಿ ಸಂಖ್ಯೆ ಎರಡೂ ಕಡೆಯಲ್ಲಿ ನಿರ್ದಿಷ್ಟವಾಗಿದ್ದು ಖಚಿತವಾಗಿರಬೇಕು.

❖ **ಸರ್ವನಾಮಕ್ಕೆ ಸೂತ್ರ ಮತ್ತು ಉದಾಹರಣೆ** ;– ಸೂತ್ರ;– ಸರ್ವನಾಮ+ನಾಮಪದ.

**ಉದಾ : ಆ ಕಲ್ಲು** = ಅದು +ಕಲ್ಲು. **ಈ ಬೆಕ್ಕು** = ಇದು+ಬೆಕ್ಕು.

**ಈ ಹುಡುಗ** = ಇವನು + ಹುಡುಗ **ಆ ಹೆಂಗಸು** = ಅವಳು + ಹೆಂಗಸು

ಇಲ್ಲಿ **ಅದು, ಇದು, ಇವನು, ಅವಳು** – ಇವುಗಳು **ಸರ್ವನಾಮ** ಗಳಾಗಿವೆ.

## : ಪಠ್ಯದಲ್ಲಿರುವ ಉದಾಹರಣೆಗಳು :

1) **ತತ್ಪುರುಷ ಸಮಾಸ** :– ಬೆಟ್ಟದಾವರೆ , ತಲೆನೋವು, ಸ್ವಾಮಿದ್ರೋಹ, ಪರಧನ, ಮದಾಂಧ ಪೂದೋಟ

2) **ಕರ್ಮಧಾರೆಯಸಮಾಸ** : – ಇಮ್ಮಾವು, ಮೆಲ್ವಾತು, ಹೊಸಗನ್ನಡ, ಅತಿಕುಟಿಲ ಕಟ್ಟೇಕಾಂತ ಪೆರ್ಮಗ

3) **ದ್ವಿಗುಸಮಾಸ** :– ಮುಕ್ಕಣ್ಣು. ಸಪ್ತಸ್ವರಗಳು

4)**ಬಹುವ್ರೀಹಿ ಸಮಾಸ** :– ಹಣೆಗಣ್ಣ, ಮುಕ್ಕಣ್ಣ, ಚಕ್ರಪಾಣಿ, ಘಟಸಂಭೂತ, ಗಾಂಡೀವಿ, ಪವನಂದನ, ಇನತನೂಜ, ದನುಜರಿಪು, ಮುರಾರಿ, ಮೇದಿನಿಪತಿ, ರಾಜೀವಸಖ.

5) **ಅಂಶಿ ಸಮಾಸ** :– ಅಂಗೈ, ಹಿಂದಲೆ, ಕಡೆಗಣ್ಣು, ಮುಂಗೈ, ನಡುರಾತ್ರಿ.

6) **ದ್ವಂದ್ವ ಸಮಾಸ** :– ಗಿರಿವನದುರ್ಗಗಳು, ಕರಿತುರಗರಥ, ಹನುಮಭೀಮರಾಮ, ಮಾದ್ರಮಾಗಧಯಾದವರು

7) **ಕ್ರಿಯಾ ಸಮಾಸ** :– ಮೈಮುಚ್ಚು, ಕಣ್ದೆರೆ, ಕಂಗೆಡು, ಕೈಕೊಳ್ವುದು, ಧನಹರಣ, ಸಾಕ್ಷಿಮಾಡಿ, ಬಲವಂದು, ಕೈಯಾನು, ಹೊಗೆದೋರು, ಸೂಳ್ಗೇಳಿ, ಬಿಲ್ಗೊಂಡು, ಬಿಲ್ದಿರುವನೇರಿಸಿ,

8) **ಗಮಕಸಮಾಸ** :– ಆ ಕಲ್ಲು, ಆ ಬೆಕ್ಕು, ನೆಯ್ದ ವಸ್ತ್ರ

## : ವಿಭಕ್ತಿ ಪ್ರತ್ಯಯಗಳು :

ಕ್ರಿಯಾಪದದೊಂದಿಗೆ ನಾಮಪದದ ಸಂಬಂಧವನ್ನು ತಿಳಿಸುವ ಕರ್ತೃ, ಕರ್ಮ, ಕರಣ ಮುಂತಾದ ಕಾರಕಾರ್ಥಗಳನ್ನು ವಿಭಕ್ತಿಗಳೆಂದು ಕರೆಯುತ್ತಾರೆ. ಕಾರಕಾರ್ಥಗಳನ್ನು ವಿಭಜಿಸಿ ಹೇಳುವ ಪ್ರತ್ಯಯಗಳೇ ವಿಭಕ್ತಿ ಪ್ರತ್ಯಯಗಳು.

| ವಿಭಕ್ತಿಗಳು | ಕಾರಕಾರ್ಥ | ಹೊಸಗನ್ನಡಪ್ರತ್ಯಯ | ರೂಪ | ಹಳಗನ್ನಡ ಪ್ರತ್ಯಯ | ರೂಪ |
|---|---|---|---|---|---|
| ಪ್ರಥಮವಿಭಕ್ತಿ | ಕರ್ತೃಕಾರಕ | ಉ | ರಾಮನು | ಮ್ | ರಾಮಮ್ |
| ದ್ವಿತೀಯವಿಭಕ್ತಿ | ಕರ್ಮಕಾರಕ | ಅನ್ನು | ರಾಮನನ್ನು | ಅಂ | ರಾಮನಂ |
| ತೃತೀಯವಿಭಕ್ತಿ | ಕರಣಕಾರಕ | ಇಂದ | ರಾಮನಿಂದ | ಇಂ | ರಾಮನಿಂ |
| ಚತುರ್ಥಿವಿಭಕ್ತಿ | ಸಂಪ್ರದಾನಕಾರಕ | ಗೆ, ಇಗೆ, ಕ್ಕೆ | ರಾಮನಿಗೆ | ಗೆ, ಇಗೆ, ಕ್ಕೆ | ರಾಮಂಗೆ |
| ಪಂಚಮಿವಿಭಕ್ತಿ | ಅಪಾದಾನಕಾರಕ | ದೆಸೆಯಿಂದ | ರಾಮನ ದೆಸೆಯಿಂದ | ಅತ್ತಣಿಂ \ ಅತ್ತಣಿಂದಂ | ರಾಮನತ್ತಣಿಂ |
| ಷಷ್ಠೀವಿಭಕ್ತಿ | ಸಂಬಂಧಕಾರಕ | ಅ | ರಾಮನ | ಅ | ರಾಮನ |
| ಸಪ್ತಮಿವಿಭಕ್ತಿ | ಅಧಿಕರಣಕಾರಕ | ಅಲ್ಲಿ | ರಾಮನಲ್ಲಿ | ಒಳ್ | ರಾಮನೊಳ್ |

# ಅವ್ಯಯಗಳು

"ನಾಮಪದ ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ, ಏಕರೂಪವಾಗಿರುವ ಶಬ್ದಗಳು ಅವ್ಯಯಗಳೆನಿಸುವುವು." ' ಅವ್ಯಯ' ಎಂದರೆ ಯಾವುದೇ ರೂಪ ಭೇದ( ವ್ಯತ್ಯಾಸ) ಹೊಂದದಿರುವುದು ಎಂದರ್ಥ.

ಅವ್ಯಯಗಳ ವಿಧಗಳು

1. ಸಾಮಾನ್ಯಾವ್ಯಯ
2. ಅನುಕರಣಾವ್ಯಯ
3. ಭಾವಸೂಚಕಾವ್ಯಯ (ನಿಪಾತಾವ್ಯಯ)
4. ಕ್ರಿಯಾರ್ಥಕಾವ್ಯಯ
5. ಸಂಬಂಧಾರ್ಥಕಾವ್ಯಯ
6. ಅವಧಾರಣಾರ್ಥಕಾವ್ಯಯ

- **ಸಾಮಾನ್ಯಾವ್ಯಯಗಳು:-** ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳು ಸಾಮಾನ್ಯಾವ್ಯಯಗಳು. ಇವು ಕ್ರಿಯಾ ವಿಶೇಷಣಗಳಾಗಿರುತ್ತವೆ.

  **ಉದಾ :** ಚೆನ್ನಾಗಿ, ನೆಟ್ಟಗೆ, ತಟ್ಟನೆ, ಬಿಮ್ಮನೆ, ಬಿಮ್ಮಗೆ, ಸುಮ್ಮನೆ, ಸುಮ್ಮಗೆ, ಕಮ್ಮನೆ, ಕಮ್ಮಗೆ, ಬೇಗನೆ, ಮೆಲ್ಲಗೆ, ಮೆಲ್ಲನೆ, ಸೊಗಸಾಗಿ, ಸಲೆ, ಕರಂ, ಹಾಗೆ, ಹೀಗೆ, ಅಂತು, ಇಂತು, ಬೇರೆ, ಬಳಿಕ, ತರುವಾಯ, ಇನ್ನು, ಒಡನೆ, ಕೂಡಲೆ, ಬೇಗ, ಸುತ್ತಲು-ಇತ್ಯಾದಿಗಳು.

- **ಅನುಕರಣಾವ್ಯಯಗಳು:-** ಅರ್ಥವಿಲ್ಲದ ಧ್ವನಿವಿಶೇಷಣಗಳನ್ನು ತಾನು ಕೇಳಿದಂತೆ ಪುನಃ ಅನುಕರಣ ಮಾಡಿ ಹೇಳುವ ಶಬ್ದಗಳೆಲ್ಲ ಅನುಕರಣಾವ್ಯಯಗಳೆನಿಸುವುವು.

  **ಉದಾ : ನೀರು ದಬದಬ ಬಿದ್ದಿತು. ಪಟಪಟ ಮಳೆ ಸುರಿಯಿತು.** - ಇಲ್ಲಿ 'ದಬದಬ, ಪಟಪಟ' ಇವು ಅನುಕರಣಾವ್ಯಯಗಳು. ಇದರಂತೆ - ಚಟಚಟ, ಕರಕರ, ಚುರುಚುರು, ಸಿಮಿಸಿಮಿ, ಧಗಧಗ, ತಟತಟ, ರೊಯ್ಯನೆ, ಸುಯ್ಯನೆ, ಧಿಗಿಲನೆ, ಭೋರನೆ, ಘುಳುಘುಳು, ಗುಡುಗುಡು, ದಡದಡ- ಇತ್ಯಾದಿ.

- **ಭಾವಸೂಚಕಾವ್ಯಯಗಳು (ನಿಪಾತಾವ್ಯಯಗಳು)** :- ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ - ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಕೆಲವು ಅರ್ಥವಿಲ್ಲದ ಶಬ್ದಗಳನ್ನು ಬಳಸುತ್ತೇವೆ. ಇವನ್ನು ಭಾವಸೂಚಕಾ ವ್ಯಯಗಳೆನ್ನುವರು. ಇವಕ್ಕೆ ನಿಪಾತಾವ್ಯಯಗಳೆಂದೂ ಹೆಸರು.

  ಉದಾ : ಎಲಾ! ಅಯ್ಯೋ! ಅಕ್ಕಟಾ! ಅಕಟಕಟಾ! ಆಹಾ! ಭಲೇ! ಭಲಾ! ಭಳಿರೇ! ಛೇ! ಥೂ! ಅಬ್ಬಾ! ಅಹಹಾ! ಆಹಾ! ಓಹೋ! ಹೋ! ಹೋಹೋ! ಅಃ! ಎಲೆಲಾ! ಓ! ಏ! ಆಃ! ಹಹಹ! ಇತ್ಯಾದಿ.

- **ಕ್ರಿಯಾರ್ಥಕಾವ್ಯಯಗಳು:-** ಕ್ರಿಯಾಪದದ ಸ್ಥಾನದಲ್ಲಿ ನಿಂತು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಕೆಲವು ಅವ್ಯಯಗಳು ಕ್ರಿಯಾರ್ಥಕಾವ್ಯಯಗಳೆನಿಸುವುವ. **ಉದಾ :** ಉಂಟು, ಬೇಕು, ಬೇಡ, ಅಲ್ಲ, ಅಹುದು, ಹೌದು, ಸಾಕು, ಇಲ್ಲ-ಇತ್ಯಾದಿಗಳು.

- **ಸಂಬಂಧಾರ್ಥಕಾವ್ಯಯಗಳು** :- ಎರಡು ಪದಗಳನ್ನಾಗಲಿ, ಅಥವಾ ಹಲವು ಪದ ಸಮುಚ್ಚಯಗಳನ್ನಾಗಲಿ, ವಾಕ್ಯಗಳನ್ನಾಗಲಿ, ಜೋಡಿಸುವಂಥ ಮತ್ತು ಸಂಬಂಧಗೊಳಿಸುವಂಥ ಶಬ್ದಗಳು ಸಂಬಂಧಾರ್ಥಕಾವ್ಯಯಗಳು.

  **ಉದಾ :** ಊ, ಉಂ, ಮತ್ತು, ಅಥವಾ, ಆದ್ದರಿಂದ, ಆದುದರಿಂದ, ಅಲ್ಲದೆ.

- **ಅವಧಾರಣಾರ್ಥಕಾವ್ಯಯ:-** ಒಂದು ನಿಶ್ಚಯಾರ್ಥದಲ್ಲಿ ಬರುವ ಅವ್ಯಯವೇ ಅವಧಾರಣಾರ್ಥಕಾವ್ಯಯ. ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯಿಸುವುದೇ ಅವಧಾರಣೆಯೆನಿಸುವುದು.

  **ಉದಾ : (i) ಅದೇ ನನ್ನ ಪುಸ್ತಕ.** ಈ ವಾಕ್ಯದಲ್ಲಿ (ಅದು+ಏ) ದಕಾರದ ಮುಂದಿರುವ 'ಏ' ಕಾರವೇ ವಧಾರಣಾರ್ಥಕಾವ್ಯಯವೆನಿಸುವುದು. **(ii) ನಾನೇ ಅದನ್ನು ಬರೆದೆನು.** ಇಲ್ಲಿ (ನಾನು+ಏ) ನಾನೇ ಎಂದು ಬರವಣಿಗೆಯನ್ನು ಮಾಡಿದ ವಿಷಯದಲ್ಲಿ ನಿಶ್ಚಯಿಸಿ ಹೇಳುವುದರಿಂದ 'ಏ' ಎಂಬುದು ಅವಧಾರಣಾರ್ಥಕಾವ್ಯಯವೆನಿಸಿತು.

# ವಾಕ್ಯಗಳು

ಅನೇಕ ಪದಗಳು ಸೇರಿ ಒಂದು ಪರಿಪೂರ್ಣ ಅರ್ಥವನ್ನು ಉಂಟು ಮಾಡುವುದಕ್ಕೆ 'ವಾಕ್ಯ' ಎನ್ನುವರು.

**"ಕರ್ತೃಪದ, ಕರ್ಮಪದ, ಕ್ರಿಯಾಪದಗಳಿಂದ ಅವುಗಳ ವಿಶೇಷಣಗಳಿಂದ ಕ್ರಮವಾಗಿ ಬರೆದ ಪದಸಮೂಹವೇ ವಾಕ್ಯವೆನಿಸುವುದು."**

**ವಾಕ್ಯಗಳ ಪ್ರಕಾರಗಳು**

**ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ, ಮಿಶ್ರವಾಕ್ಯಗಳು**

ವಾಕ್ಯಗಳಲ್ಲಿ ಮೂರು ರೀತಿಯ ಪ್ರಧಾನವಾದ ವಿಧಗಳಿವೆ.

➢ **ಸಾಮಾನ್ಯ ವಾಕ್ಯ**

ಈ ಕೆಳಗಿನ ವಾಕ್ಯಗಳನ್ನು ನೋಡಿರಿ.

- ಖಾನ ದೇಶವು ಮಲೇರಿಯಾದ ತವರೂರಾಗಿತ್ತು.
- ಖಾನದೇಶದಲ್ಲಿ ವಿಶ್ವೇಶ್ವರಯ್ಯನವರು ಮಲೇರಿಯಾ ಬೇನೆಯಿಂದ ಬಳಲಿದರು.
- ವಿಶ್ವೇಶ್ವರಯ್ಯನವರು ದೇಹಾರೋಗ್ಯವನ್ನು ಕಾಪಾಡಿಕೊಳ್ಳಲು ವರ್ಗಕ್ಕೆ ಅರ್ಜಿ ಹಾಕಿದರು.
- ವಿಶ್ವೇಶ್ವರಯ್ಯನವರನ್ನು ರಸ್ತೆ ಮತ್ತು ಕಟ್ಟಡಗಳ ಮೇಲ್ವಿಚಾರಣೆಯ ವಿಭಾಗಕ್ಕೆ ವರ್ಗ ಮಾಡಿದರು.

ಈ ನಾಲ್ಕೂ ವಾಕ್ಯಗಳೂ ಒಂದೊಂದು ಪೂರ್ಣಕ್ರಿಯಾಪದದೊಡನೆ ಸ್ವತಂತ್ರ ವಾಕ್ಯಗಳಾಗಿವೆ.

**"ಒಂದು ಪೂರ್ಣಕ್ರಿಯಾಪದದೊಡನೆ ಸ್ವತಂತ್ರವಾಗಿರುವ ವಾಕ್ಯಗಳೇ ಸಾಮಾನ್ಯ ವಾಕ್ಯಗಳೆನಿಸುವುವು." ಸಾಮಾನ್ಯ ವಾಕ್ಯದಲ್ಲಿ ಕ್ರಿಯಾಪದವು ಒಂದು ಮಾತ್ರ ಇರಬೇಕು. ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು. ಈ ಕೆಳಗೆ ಸಾಪೇಕ್ಷ ಕ್ರಿಯಾರೂಪಗಳಿಂದ ಕೂಡಿ, ಒಂದೇ ಕ್ರಿಯಾಪದದಿಂದ ಪೂರ್ಣಗೊಂಡ ಸಾಮಾನ್ಯ ವಾಕ್ಯ ನೋಡಿರಿ.**

"ಖಾನ ದೇಶವು ಮಲೇರಿಯಾದಿಂದ ಕೂಡಿ, ವಿಶ್ವೇಶ್ವರಯ್ಯನವರ ಆರೋಗ್ಯದ ಮೇಲೆ ದುಷ್ಪರಿಣಾಮ ಮಾಡಿ, ಅವರು ಅಲ್ಲಿಂದ ವರ್ಗವಾಗುವಂತೆ ಮಾಡಿತು."

ಇಲ್ಲಿ '**ಮಾಡಿತು**' ಎಂಬ ಒಂದೇ ಕ್ರಿಯಾಪದವಿದ್ದು '**ಕೂಡಿ, ಮಾಡಿ**' ಎಂಬ ಸಾಪೇಕ್ಷ ಕ್ರಿಯೆಗಳು ಮಧ್ಯದಲ್ಲಿ ಬಂದಿವೆ.

➢ **ಸಂಯೋಜಿತ ವಾಕ್ಯ**

'ಖಾನದೇಶವು ಮಲೇರಿಯಾದ ತವರೂರೆನಿಸಿತ್ತು; ಆದ್ದರಿಂದ ವಿಶ್ವೇಶ್ವರಯ್ಯನವರೂ ಅಲ್ಲಿ ಮಲೇರಿಯಾದಿಂದ ಬಳಲಬೇಕಾಯಿತು; ಈ ಕಾರಣದಿಂದಲೇ ಅವರು ಅಲ್ಲಿಂದ ವರ್ಗ ಮಾಡಿಸಿಕೊಂಡರು.' - ಈ ವಾಕ್ಯ ಸಮೂಹದಲ್ಲಿ ಬೇರೆ ಬೇರೆ ಮೂರು ವಾಕ್ಯಗಳಿವೆ. ಆದರೆ ಆ ವಾಕ್ಯಗಳು ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣಾರ್ಥದ ವಾಕ್ಯವಾಗಿದೆ. ಹೀಗೆ- **"ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ, ಅದು ಸಂಯೋಜಿತ ವಾಕ್ಯವೆನಿಸಿಕೊಳ್ಳುವುದು."**

**ಉದಾ :** ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ವಾಲ್ಮೀಕಿಗಳ ಪುಣ್ಯಾಶ್ರಮದ ಉಪವನವನ್ನು ಹೊಕ್ಕಿತು; ಆಗ ಆ ತೋಟದ ಕಾವಲು ಮಾಡುತ್ತಿದ್ದ ಲವನು ಅದನ್ನು ಕಟ್ಟಿಹಾಕಿದನು; ಆದ್ದರಿಂದ ಲವನನ್ನು ಕುದುರೆಯ ಕಾವಲಿನ ಭಟರು ಹಿಡಿದುಕೊಂಡು ಹೋದರು. ಇಲ್ಲಿ -

- ಶ್ರೀರಾಮನ ಅಶ್ವಮೇಧಯಾಗದ ಕುದುರೆಯು ವಾಲ್ಮೀಕಿಗಳ ಪುಣ್ಯಾಶ್ರಮದ ಉಪವನವನ್ನು ಹೊಕ್ಕಿತು.
- ಆಗ ಆ ತೋಟದ ಕಾವಲು ಮಾಡುತ್ತಿದ್ದ ಲವನು ಅದನ್ನು ಕಟ್ಟಿಹಾಕಿದನು.
- ಆದ್ದರಿಂದ ಲವನನ್ನು ಕುದುರೆಯ ಕಾವಲಿನ ಭಟರು ಹಿಡಿದುಕೊಂಡು ಹೋದರು. --- ಈ ಮೂರು ಸ್ವತಂತ್ರ ಕ್ರಿಯಾಪದವುಳ್ಳ ವಾಕ್ಯಗಳು ಒಂದಕ್ಕೊಂದು '**ಆಗ**' '**ಆದ್ದರಿಂದ**'- ಎಂಬ ಶಬ್ದಗಳ ಸಂಬಂಧದಿಂದ ಒಂದು ಅಭಿಪ್ರಾಯವನ್ನು ಪೂರ್ಣ ಹೇಳುವ **ಸಂಯೋಜಿತ ವಾಕ್ಯವೆನಿಸಿದೆ.**

➢ ಮಿಶ್ರವಾಕ್ಯ

❖ ನಮ್ಮ ಪರೀಕ್ಷೆ ಮುಗಿಯಿತೆಂದು, ತಂದೆಗೆ ಮಗನು ತಿಳಿಸಿದನು. - ಇಲ್ಲಿ ಪ್ರಧಾನ ಕ್ರಿಯಾಪದ 'ತಿಳಿಸಿದನು' ಎಂಬುದು, 'ನಮ್ಮ ಪರೀಕ್ಷೆ ಮುಗಿಯಿತು ಎಂದು' ಎಂಬ ಈ ಉಪವಾಕ್ಯವೇ 'ತಿಳಿಸಿದನು' ಎಂಬ ಕ್ರಿಯಾಪದದ ಕರ್ಮವಾಯಿತು.

❖ ಶಂಕರನಿಗೆ ವಿದ್ಯಾರ್ಥಿವೇತನ ಸಿಕ್ಕಿತೆಂಬುದನ್ನು ಅವನಿಂದಲೇ ಕೇಳಿದೆನು. - ಇಲ್ಲಿ 'ಕೇಳಿದೆನು' ಎಂಬ ಕ್ರಿಯಾಪದವು ಪ್ರಧಾನ ಕ್ರಿಯಾಪದ. ಈ ಕ್ರಿಯಾಪದ ಕ್ಕೆ ಮೊದಲನೆಯ ವಾಕ್ಯವಾದ ಶಂಕರನಿಗೆ ವಿದ್ಯಾರ್ಥಿವೇತನ ಸಿಕ್ಕಿತು ಎಂಬುದನ್ನು ಎಂಬುದು ಕರ್ಮವಾಗಿ ಅಧೀನ ವಾಕ್ಯವೆನಿಸಿದೆ. ಕೇಳಿದೆನು ಎಂಬ ಕ್ರಿಯಾ ಪದದ ಕರ್ತೃವು ಇಲ್ಲಿ ಹೇಳಲ್ಪಟ್ಟಿಲ್ಲ. ನಾನು ಎಂದು ಆಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಇಂಥ - **"ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಮಿಶ್ರವಾಕ್ಯವೆನ್ನುತ್ತೇವೆ."**

ಉದಾ : ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ, ಅವರ ನಿರ್ಧಾರಕ್ಕೆ ಬ್ರಿಟೀಷ್ ಸರಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಬಹುವಾಗಿ ಮರುಗಿದರು. - ಇಲ್ಲಿ 'ಬಹುವಾಗಿ ಮರುಗಿದರು' ಎಂಬ ಪ್ರಧಾನ ವಾಕ್ಯಕ್ಕೆ

(೧) ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯ ನವರು ನಿರ್ಧರಿಸಿದರು.

(೨) ಅವರ ನಿರ್ಧಾರಕ್ಕೆ ಬ್ರಿಟೀಷ್ ಸರಕಾರದ ಅಪ್ಪಣೆ ದೊರೆಯಲಿಲ್ಲ. ಈ ವಾಕ್ಯಗಳು ಉಪವಾಕ್ಯವೆನಿಸಿ ಇದು ಮಿಶ್ರವಾಕ್ಯವಾಗಿದೆ.

## ತತ್ಸಮ-ತದ್ಭವಗಳು

ತತ್ಸಮ :-**'ತತ್'** ಎಂದರೆ **'ಮೂಲ'** ಸಮ ಎಂದರೆ 'ಸಮನಾದುದು. 'ಎಂದರ್ಥ. **'ಮೂಲಪದಕ್ಕೆ (ಸಂಸ್ಕೃತಕ್ಕೆ) ಸಮನಾದುದು'** ಎಂದರ್ಥ. ತದ್ಭವ:-**'ತತ್'** ಎಂದರೆ ಮೂಲ. **'ಭವ'** ಎಂದರೆ **ಹುಟ್ಟಿದುದು/ಬದಲಾದುದು.** 'ಎಂದರ್ಥ. **'ಮೂಲಪದದಿಂದ ಹುಟ್ಟಿ ಬದಲಾದುದು 'ಎಂದರ್ಥ.** 'ತತ್ಸಮ' ಪದಗಳು **ಬೇರೆ ಭಾಷೆಯಿಂದ** (ಸಂಸ್ಕೃತ ) ಬಂದ ಪದಗಳಾಗಿದ್ದು, **ಕನ್ನಡಕ್ಕೆ ಬಂದಾಗ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಪ್ರಯೋಗವಾಗುತ್ತವೆ.**

**: ತತ್ಸಮ-ತದ್ಭವಗಳನ್ನು ಗುರುತಿಸುವ ವಿಧಾನ :**

❖ ಋ – ರಿ. ಉದಾ : ಋಷಿ(ತ್ಸ)–ರಿಸಿ(ದ್ಭ). ಋಣ–ರಿಣ.

❖ ಕ,ಖ – ಗ, ಉದಾ : ಕಾಕ–ಕಾಗೆ, ಆಕಾಶ–ಆಗಸ.

❖ ಟ – ಡ, ಉದಾ : ಅಟವಿ–ಅಡವಿ,

❖ ತ – ದ, ಉದಾ : ತಟ–ದಡ,

❖ ಪ – ಹ, ಉದಾ : ಪರ್ವ–ಹಬ್ಬ, ಫಲಕ–ಹಲಗೆ,

❖ ಮ – ವ, ಉದಾ : ಕುಮಾರ–ಕುವರ, ಸಾಮಂತ–ಸಾವಂತ.

❖ ಯ – ಜ, ಉದಾ : ಯಮ–ಜವ,

❖ ಲ – ಳ, ಉದಾ : ಜಲ–ಜಳ,

❖ ವ – ಬ, ಉದಾ : ವಿದ್ಯೆ–ಬಿಜ್ಜೆ, ವಿಜ್ಞಾನ–ಬಿನ್ನಾಣ, ವಸತಿ–ಬಸದಿ

❖ ಶ,ಷ – ಸ, ಉದಾ : ಶಶಿ–ಸಸಿ, ದಿಶಾ–ದೆಸೆ,

❖ ಕ್ಷ – ಚ, ಉದಾ : ಕ್ಷಣ–ಚಣ,

❖ ಇಳಿ–ಏತ್ವ, ಉದಾ : ಮಾಲಾ–ಮಾಲೆ

❖ ಮಹಾಪ್ರಾಣ – ಅಲ್ಪಪ್ರಾಣ. ಉದಾ : ಗಂಧ–ಗಂದ, ಕಥೆ–ಕತೆ.

❖ ವಿಜಾತಿದ್ವಿತ್ವ – ಸಜಾತಿದಿತ್ವ, ಉದಾ : ದಿವ್ಯ–ದಿಬ್ಬ, ಕಾವ್ಯ –ಕಬ್ಬ,

❖ ಸಂಯುಕ್ತಾಕ್ಷರ – ಬಿಡಿಬಿಡಿ ಅಕ್ಷರ, ಉದಾ : ಕೀರ್ತಿ–ಕೀರುತಿ, ಮೂರ್ತಿ– ಮೂರುತಿ,

❖ ಸಹಜ ವ್ಯಂಜನಾಕ್ಷರ – ವ್ಯಂಜನಾಕ್ಷರ ಪೂರ್ಣ (ಸಜಾತಿ), ಉದಾ : ಬೆರಳ್–ಬೆರಳು

❖ ಸಹಜ ವ್ಯಂಜನಾಕ್ಷರ – ಸಹಜ ವ್ಯಂಜನಾಕ್ಷರ ಲೋಪ, ಉದಾ : ರಾಜನ್ – ರಾಜ,

❖ ಸಹಜ ವ್ಯಂಜನಾಕ್ಷರ – ವ್ಯಂಜನಾಕ್ಷರ ಸಜಾತಿ ದ್ವಿತ್ವಾಕ್ಷರ ಪೂರ್ಣ, ಉದಾ: ಕಣ್–ಕಣ್ಣು, ಕಲ್–ಕಲ್ಲು,

# ಕ್ರಿಯಾಪದ

ಪೂರ್ಣಗೊಂಡ ಒಂದು ಕ್ರಿಯೆಯ ಅರ್ಥಕೊಡುವ-ಪದಗಳನ್ನು ಸಾಮಾನ್ಯವಾಗಿ ಕ್ರಿಯಾಪದ ಎನ್ನುತ್ತೇವೆ.

ಕ್ರಿಯಾಪದದ ಮೂಲ ರೂಪಕ್ಕೆ **ಧಾತು** ಎನ್ನುತ್ತಾರೆ.

**"ಕ್ರಿಯಾರ್ಥವನ್ನು ಕೊಡುವುದಾಗಿಯೂ, ಪ್ರತ್ಯಯವನ್ನು ಹೊಂದದೆಯೂ ಇರುವ ಶಬ್ದಕ್ಕೆ ಕ್ರಿಯಾಪ್ರಕೃತಿ ಅಥವಾ ಧಾತು ಎನ್ನುವರು"**

ಇಂಥ ಧಾತುಗಳು ಎರಡು ವಿಧ.

(೧) **ಮೂಲಧಾತುಗಳು**- ಉದಾಹರಣೆಗೆ:- ಸ್ವಾಭಾವಿಕವಾಗಿ ಭಾಷೆಯ ಉಗಮಕಾಲದಿಂದ ರೂಢಿಯಲ್ಲಿರುವ, ಬಿಡಿಸಲಾರದ ಧಾತುಗಳು.

ಉದಾ:- ಮಾಡು, ತಿನ್ನು, ಹೋಗು, ಬರು, ಮಲಗು, ಏಳು, ನಡೆ, -ಇತ್ಯಾದಿ.

(೨) **ಸಾಧಿತ ಧಾತು (ಪ್ರತ್ಯಯಾಂತ ಧಾತು)** - ನಾಮಪ್ರಕೃತಿಗಳನ್ನೇ ಧಾತುಗಳನ್ನಾಗಿ ಮಾಡಿಕೊಂಡು ಕ್ರಿಯಾಪ್ರಕೃತಿಗಳಿಗೆ ಹತ್ತುವ ಪ್ರತ್ಯಯ ಹಚ್ಚಿ ಕ್ರಿಯಾಪದಗಳನ್ನಾಗಿ ಮಾಡಿ ಹೇಳುತ್ತೇವೆ.

ಉದಾಹರಣೆಗೆ:- ಅವನು ಆ ಗ್ರಂಥವನ್ನು **ಕನ್ನಡಿಸಿದನು.** ಕನ್ನಡ ಎಂಬುದು ನಾಮಪ್ರಕೃತಿಯಾಗಿದೆ. ಇದರ ಮೇಲೆ ಇಸು ಪ್ರತ್ಯಯ ಹಚ್ಚಿ ಕನ್ನಡಿಸು ಎಂಬ ಧಾತುವಾಗುತ್ತದೆ. ಇದರ ಮೇಲೆ ಧಾತುಗಳ ಮೇಲೆ ಸೇರಬೇಕಾದ ಎಲ್ಲ ಪ್ರತ್ಯಯಗಳು ಸೇರಿ-ಕನ್ನಡಿಸುತ್ತಾನೆ, ಕನ್ನಡಿಸಿದನು, ಕನ್ನಡಿಸುವನು -ಇತ್ಯಾದಿ ಕ್ರಿಯಾಪದಗಳಾಗಿ ಬಳಸಲ್ಪಡುತ್ತವೆ. ಇಂಥ ಧಾತುಗಳನ್ನೇ ನಾವು ಸಾಧಿತಧಾತು ಗಳೆಂದು ಕರೆಯುತ್ತೇವೆ.

ಉದಾಹರಣೆಗೆ:-

| ನಾಮ ಪ್ರಕೃತಿ | + | ಇಸು | = | ಧಾತು | - | ಕ್ರಿಯಾಪದ |
|---|---|---|---|---|---|---|
| ಓಲಗ | + | ಇಸು | = | ಓಲಗಿಸು | - | ಓಲಗಿಸುತ್ತಾನೆ |
| ಅಬ್ಬರ | + | ಇಸು | = | ಅಬ್ಬರಿಸು | - | ಅಬ್ಬರಿಸುವನು |
| ಧಗ ಧಗ | + | ಇಸು | = | ಧಗಧಗಿಸು | - | ಧಗಧಗಿಸುತ್ತಾನೆ |

## ಸಕರ್ಮಕ, ಅಕರ್ಮಕ ಧಾತುಗಳು

**(೧) ಸಕರ್ಮಕ ಧಾತುಗಳು** – "ಕರ್ಮಪದವನ್ನು ಅಪೇಕ್ಷಿಸುವ ಧಾತುಗಳೆಲ್ಲ ಸಕರ್ಮಕ ಧಾತುಗಳು."

ಉದಾ:- **ರಾಮನು ಮರವನ್ನು ಕಡಿದನು.** ಈ ವಾಕ್ಯದಲ್ಲಿ ಏನನ್ನು ಕಡಿದನು? ಎಂದು ಪ್ರಶ್ನಿಸಿದರೆ, ಮರವನ್ನು ಎಂಬ ಉತ್ತರ ಬರುತ್ತದೆ. ಇಲ್ಲಿ ಮರವನ್ನು ಎಂಬುದು ಕರ್ಮಪದ. ಕಡಿದನು ಎಂಬುದು ಕ್ರಿಯಾಪದ. ಕಡಿದನು – ಎಂಬ ಕ್ರಿಯೆಗೆ ಏನನ್ನು? ಎಂಬ ಪ್ರಶ್ನೆ ಮಾಡಿದಾಗ ಬರುವ ಉತ್ತರವೇ ಕರ್ಮ. ಈ ವಾಕ್ಯವು ಕರ್ಮಪದವನ್ನುಳ್ಳ ವಾಕ್ಯವೆಂದಹಾಗಾಯಿತು.

| ಕರ್ತೃಪದ | ಕರ್ಮಪದ | ಕ್ರಿಯಾಪದ | ಧಾತು |
|---|---|---|---|
| ದೇವರು | ಲೋಕವನ್ನು | ರಕ್ಷಿಸುವನು | ರಕ್ಷಿಸು |
| ಶಿಲ್ಪಿಗಳು | ಗುಡಿಯನ್ನು | ಕಟ್ಟಿದರು | ಕಟ್ಟು |

ಉದಾಹರಣೆಗೆ:- ಮಾಡು, ಕೊಡು, ಬಿಡು, ಉಣ್ಣು, ತೊಡು, ಇಕ್ಕು, ಉಜ್ಜು, ದಾಟು, ಮೆಟ್ಟು, ತಿದ್ದು, ತುಂಬು, ನಂಬು, ಹೊಡೆ, ತಡೆ, ಹೀರು, ಸೇರು, ಹೊಯ್, ಸೆಯ್, ಕೆತ್ತು, ಕಡಿ, ತರ್ (ತರು), ಕೊಯ್, ಮುಚ್ಚು, ತೆರೆ, ಕತ್ತರಿಸು-ಇತ್ಯಾದಿ.

**(೨) ಅಕರ್ಮಕ ಧಾತುಗಳು**

ಕೆಲವು ಧಾತುಗಳಿಗೆ ಕರ್ಮಪದದ ಅವಶ್ಯಕತೆ ಇರುವುದಿಲ್ಲ. ಕೆಳಗಿನ ಈ ವಾಕ್ಯಗಳನ್ನು ಗಮನಿಸಿರಿ:-

| ಕರ್ತೃಪದ | ಕ್ರಿಯಾಪದ | ಧಾತು |
|---|---|---|
| ಕೂಸು | ಮಲಗಿತು | ಮಲಗು |
| ರಾಮನು | ಓಡಿದನು | ಓಡು |

ಮೇಲಿನ ವಾಕ್ಯಗಳಲ್ಲಿ ಕರ್ಮಪದಗಳಿಲ್ಲ. ಮಲಗಿತು ಎಂಬ ಕ್ರಿಯಾಪದಕ್ಕೆ ಏನನ್ನು? ಎಂಬ ಪ್ರಶ್ನೆ ಮಾಡಲು ಉತ್ತರ ಬರುವುದಿಲ್ಲ. ಏನನ್ನು ಮಲಗಿತು? ಎಂದು ಯಾರೂ ಕೇಳುವುದಿಲ್ಲ. ಅದರಂತೆ ಏನನ್ನು ಓಡಿತು? ಎಂದು ಯಾರೂ ಕೇಳುವುದಿಲ್ಲ. ಅಂದರೆ ಈ ಕ್ರಿಯೆಗಳಿಗೆ ಕರ್ಮಪದಗಳು ಬೇಕಾಗಿಲ್ಲ. ಆದ್ದರಿಂದ **"ಕರ್ಮಪದದ ಅಪೇಕ್ಷೆಯಿಲ್ಲದ ಧಾತುಗಳನ್ನು ಅಕರ್ಮಕ ಧಾತುಗಳೆನ್ನುವರು"**

ಉದಾಹರಣೆಗೆ:- ಮಲಗು, ಓಡು, ಇರು, ಬದುಕು, ಬಾಳು, ಹೋಗು, ಬರು, ನಾಚು, ಹೆದರು, ಬೀಳು, ಏಳು, ಸೋರು, ಇಳಿ, ಉರುಳು-

## ಪೂರ್ಣ ಕ್ರಿಯಾಪದ

ಧಾತುವಿಗೆ ಕಾಲಸೂಚಕ ಪ್ರತ್ಯಯ ಮತ್ತು ಆಖ್ಯಾತ ಪ್ರತ್ಯಯಗಳು ಸೇರಿದಾಗ ಕ್ರಿಯಾಪದವಾಗುತ್ತದೆ.

ಸೂತ್ರ: **ಧಾತು + ಕಾಲ ಸೂಚಕ ಪ್ರತ್ಯಯ + ಆಖ್ಯಾತ ಪ್ರತ್ಯಯ = ಕ್ರಿಯಾಪದ**

**ಉದಾಹರಣೆಗೆ:**

| - | ಕ್ರಿಯಾಪದ | | ಧಾತು | | ಕಾಲಸೂಚಕ ಪ್ರತ್ಯಯ | | ಆಖ್ಯಾತ ಪ್ರತ್ಯಯ (ಬಹುವಚನ) |
|---|---|---|---|---|---|---|---|
| (೧) | ಮಾಡುತ್ತಾನೆ | - | ಮಾಡು | + | ಉತ್ತ | + | ಆನೆ-(ಮಾಡುತ್ತಾರೆ) |
| (೨) | ಮಾಡುತ್ತಾಳೆ | - | ಮಾಡು | + | ಉತ್ತ | + | ಆಳೆ-(ಮಾಡುತ್ತಾರೆ) |
| (೩) | ಮಾಡುತ್ತದೆ | - | ಮಾಡು | + | ಉತ್ತ | + | ಅದೆ-(ಮಾಡುತ್ತವೆ) |
| (೪) | ಮಾಡುತ್ತೀಯೆ | - | ಮಾಡು | + | ಉತ್ತ | + | ಈಯೆ-(ಮಾಡುತ್ತೀರಿ) |
| (೫) | ಮಾಡುತ್ತೇನೆ | - | ಮಾಡು | + | ಉತ್ತ | + | ಏನೆ-(ಮಾಡುತ್ತೇವೆ) |

ಮಧ್ಯದಲ್ಲಿ ಬಂದಿರುವ ಉತ್ತ, ದ, ವ – ಎಂಬುವು ಕಾಲಸೂಚಕ ಪ್ರತ್ಯಯಗಳು.

ಅಂದರೆ **ಉತ್ತ** ಎಂಬುದು ವರ್ತಮಾನಕಾಲವನ್ನೂ, ದ ಎಂಬುದು ಭೂತಕಾಲ ವನ್ನೂ, ವ ಎಂಬುದು ಭವಿಷ್ಯತ್ ಕಾಲವನ್ನೂ ಸೂಚಿಸುತ್ತವೆ ಎಂದು ತಿಳಿಯಬೇಕು. ಕೊನೆಯಲ್ಲಿ ಬಂದಿರುವ **ಆನೆ, ಆಳೆ, ಆರೆ, ಆರೆ, ಅದೆ, ಅವೆ, ಈಯೆ, ಈರಿ, ಏನೆ** ಇತ್ಯಾದಿ ಪ್ರತ್ಯಯಗಳೆಲ್ಲ ಆಖ್ಯಾತಪ್ರತ್ಯಯಗಳು.

## ಕ್ರಿಯಾಪದದ ರೂಪಗಳು

ಎಲ್ಲ ಧಾತುಗಳಿಗೂ ಆಖ್ಯಾತ ಪ್ರತ್ಯಯಗಳು (೧) ವರ್ತಮಾನ, (೨) ಭೂತ, (೩) ಭವಿಷ್ಯತ್‌ಕಾಲಗಳಲ್ಲೂ, (೧) ವಿಧ್ಯರ್ಥ, (೨) ನಿಷೇಧಾರ್ಥ, (೩) ಸಂಭಾವನಾರ್ಥ ಗಳೆಂಬ ಮೂರು ಅರ್ಥಗಳಲ್ಲೂ ಸೇರಿ ಆರು ಪ್ರಕಾರದ ಕ್ರಿಯಾಪದರೂಪಗಳು ಉಂಟಾಗು ತ್ತವೆ. ಈಗ ಒಂದೊಂದರ ವಿಚಾರವನ್ನೂ ಕ್ರಮವಾಗಿ ತಿಳಿಯೋಣ.

(೧) ವರ್ತಮಾನ ಕಾಲದ ಕ್ರಿಯಾಪದಗಳು

**ಧಾತುಗಳಿಗೆ ವರ್ತಮಾನ ಕಾಲದಲ್ಲಿ "ಉತ್ತ" ಎಂಬ ಆಖ್ಯಾತ ಪ್ರತ್ಯಯ ಸೇರಿ ವರ್ತಮಾನಕಾಲ ಕ್ರಿಯಾಪದಗಳೆನಿಸುವುವು.**

ಉದಾಹರಣೆಗೆ:- **ಧಾತು: ಹೋಗು**

| ಧಾತು | | ಕಾಲಸೂಚಕ ಪ್ರತ್ಯಯ | ಆಖ್ಯಾತ ಪ್ರತ್ಯಯ | | ಏಕವಚನ | ಬಹುವಚನ |
|---|---|---|---|---|---|---|
| ಹೋಗು | + | ಉತ್ತ + | ಆನೆ/ಆರೆ | = | ಹೋಗುತ್ತಾನೆ | ಹೋಗುತ್ತಾರೆ |
| ಹೋಗು | + | ಉತ್ತ + | ಆಳೆ/ಆರೆ | = | ಹೋಗುತ್ತಾಳೆ | ಹೋಗುತ್ತಾರೆ |
| ಹೋಗು | + | ಉತ್ತ + | ಅದೆ/ಅವೆ | = | ಹೋಗುತ್ತದೆ | ಹೋಗುತ್ತವೆ |

**(೨) ಭೂತಕಾಲದ ಕ್ರಿಯಾಪದಗಳು :**

**ಧಾತುಗಳಿಗೆ ಭೂತ ಕಾಲದಲ್ಲಿ 'ದ' ಎಂಬ ಆಖ್ಯಾತ ಪ್ರತ್ಯಯ ಸೇರಿ ಭೂತಕಾಲದ ಕ್ರಿಯಾಪದಗಳೆನಿಸುವುವು.**

ಉದಾಹರಣೆಗೆ:- **ಧಾತು:** ತಿಳಿ

| ಧಾತು | | ಕಾಲಸೂಚಕ ಪ್ರತ್ಯಯ | ಆಖ್ಯಾತ ಪ್ರತ್ಯಯ | | ಏಕವಚನ | ಬಹುವಚನ |
|---|---|---|---|---|---|---|
| ತಿಳಿ | + | ದ | ಅನು/ಅರು | = | ತಿಳಿದನು | ತಿಳಿದರು |
| ತಿಳಿ | + | ದ | ಅಳು/ಅರು | = | ತಿಳಿದಳು | ತಿಳಿದರು |
| ತಿಳಿ | + | ದ | ಇತು/ಅವು | = | ತಿಳಿಯಿತು | ತಿಳಿದವು |
| ತಿಳಿ | + | ದ | ಎ/ಇರಿ | = | ತಿಳಿದೆ | ತಿಳಿದಿರಿ |
| ತಿಳಿ | + | ದ | ಎನು/ಎವು | = | ತಿಳಿದೆನು | ತಿಳಿದೆವು |

ಇದರ ಹಾಗೆಯೇ ಎಲ್ಲ ಧಾತುಗಳ ಮೇಲೂ ಅನು-ಅರು, ಅಳು-ಅರು, ಇತು-ಅವು, ಎ-ಇರಿ, ಎನು-ಎವು ಎಂಬ ಆಖ್ಯಾತ ಪ್ರತ್ಯಯಗಳನ್ನು ಸೇರಿಸಿ ಹೇಳಬೇಕು.

**(೩) ಭವಿಷ್ಯತ್ಕಾಲದ ಕ್ರಿಯಾಪದಗಳು**

ಧಾತುಗಳಿಗೆ ಭವಿಷ್ಯತ್ಕಾಲದಲ್ಲಿ 'ವ' ಎಂಬ ಆಖ್ಯಾತ ಪ್ರತ್ಯಯ ಸೇರಿ ಭವಿಷ್ಯತ್ ಕಾಲದ ಕ್ರಿಯಾಪದಗಳೆನಿಸುವುವು.
ಕೆಲವು ಕಡೆ ಉವ ಎಂಬುದೂ ಬರುವುದುಂಟು.

| ಧಾತು | | ಕಾಲ ಸೂಚಕ ಪ್ರತ್ಯಯ | | ಆಖ್ಯಾತ ಪ್ರತ್ಯಯ | | ಏಕವಚನ | ಬಹುವಚನ |
|---|---|---|---|---|---|---|---|
| ಕೊಡು | + | ವ | + | ಅನು | = | ಕೊಡುವನು | ಕೊಡುವರು |
| ಕೊಡು | + | ವ | + | ಅಳು | = | ಕೊಡುವಳು | ಕೊಡುವರು |
| ಕೊಡು | + | ವ | + | ಅದು | = | ಕೊಡುವದು | ಕೊಡುವುವು |
| *(ಕೊಡು | + | ವ | + | ಉದು | = | ಕೊಡುವುದು | ಕೊಡುವುವು) |
| ಕೊಡು | + | ವ | + | ಎ | = | ಕೊಡುವೆ | ಕೊಡುವಿರಿ |
| ಕೊಡು | + | ವ | + | ಎನು | = | ಕೊಡುವೆನು | ಕೊಡುವೆವು |

**(೧) ವಿಧ್ಯರ್ಥಕ (ವಿಧಿ+ಅರ್ಥ) ರೂಪ: ಆಶೀರ್ವಾದ, ಅಪ್ಪಣೆ, ಆಜ್ಞೆ, ಹಾರೈಕೆ ಇವುಗಳು ತೋರುವಾಗ ಧಾತುಗಳಿಗೆ ಆಖ್ಯಾತಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದಗಳೆನಿಸುವುವು.**

ಉದಾ: (i) ದೇವರು ನಿನಗೆ ಒಳ್ಳೆಯದು ಮಾಡಲಿ. (ii) ಅವರು ಪಾಠವನ್ನು ಓದಲಿ. (iii) ನೀನು ಆ ಕೆಲಸವನ್ನು ಮಾಡು.
(iv) ಅವನಿಗೆ ಜಯವಾಗಲಿ. (v) ಅವನು ಹಾಳಾಗಿ ಹೋಗಲಿ.
ಉದಾಹರಣೆಗೆ:- ಮಾಡಲಿ, ಮಾಡಿರಿ, ಮಾಡೋಣ, ಕೇಳುವ, ನೋಡಲಿ, ಬರೆಯಲಿ, ಬರೆಯಿರಿ, ಬರೆಯೋಣ - ಇತ್ಯಾದಿ

**(೨) ನಿಷೇಧಾರ್ಥಕ ರೂಪಗಳು : ಕ್ರಿಯೆಯು ನಡೆಯಲಿಲ್ಲ ಅಥವಾ ನಡೆಯುವುದಿಲ್ಲ ಎಂಬರ್ಥ ತೋರುವಾಗ ಧಾತುಗಳ ಮೇಲೆ ಆಖ್ಯಾತ ಪ್ರತ್ಯಯಗಳು ಸೇರಿ, ನಿಷೇಧಾರ್ಥಕ ಕ್ರಿಯಾಪದಗಳೆನಿಸುವುವು.**

(i) ಅವನು ಅನ್ನವನ್ನು ತಿನ್ನನು, (ii) ಅವನು **ಬಾರನು.** ಇತ್ಯಾದಿ ವಾಕ್ಯಗಳಲ್ಲಿ ಬಂದಿರುವ ತಿನ್ನನು, ಬಾರನು ಎಂಬ ಕ್ರಿಯಾಪದಗಳು ತಿನ್ನುವುದಿಲ್ಲ, ಬರುವುದಿಲ್ಲ-ಎಂಬ ಅರ್ಥದವು. ಎಂದರೆ ಕ್ರಿಯೆಯು ನಡೆಯಲಿಲ್ಲ ಎಂಬರ್ಥವನ್ನು ಸೂಚಿಸುತ್ತವೆ.
ಉದಾಹರಣೆಗೆ:- ತಿನ್ನನು, ತಿನ್ನಳು, ತಿನ್ನರು, ಬಾರರು, ಕೇಳನು, ನೋಡವು, ಹೋಗಳು ಇತ್ಯಾದಿ.

**(೩) ಸಂಭಾವನಾರ್ಥಕ ರೂಪಗಳು: ಕ್ರಿಯೆಯು ನಡೆಯುವಿಕೆಯಲ್ಲಿ ಸಂಶಯ ಅಥವಾ ಊಹೆ ತೋರುವಲ್ಲಿ ಧಾತುಗಳ ಮೇಲೆ ಆಖ್ಯಾತ ಪ್ರತ್ಯಯಗಳು ಸೇರಿ ಸಂಭಾವನಾರ್ಥಕ ಕ್ರಿಯಾಪದಗಳೆನಿಸುವುವು**

(i) ಅವನು ನಾಳೆ ಬಂದಾನು. (ii) ಅನ್ನವನ್ನು ಆತ ತಿಂದಾನು. (iii) ಅದು ಮೇಲಕ್ಕೆ ಏರೀತು.
ಇತ್ಯಾದಿ ವಾಕ್ಯಗಳಲ್ಲಿ ಬಂದಿರುವ ಬಂದಾನು, ತಿಂದಾನು, ಏರೀತು-ಎಂಬ ಕ್ರಿಯಾಪದಗಳು ಕಾರ್ಯ ನಡೆಯುವಲ್ಲಿ ಸಂಶಯ ಅಥವಾ ಊಹೆಯನ್ನು ತಿಳಿಸುತ್ತವೆ.
ಉದಾಹರಣೆಗೆ:- ಹೋದಾನು, ಹೋದಾಳು, ಹೋದಾರು, ಹೋದೀರಿ, ಬಂದಾರು, ಬಂದಾವು, ತಿಂದಾರು - ಇತ್ಯಾದಿ.

**ಉದಾಹರಣೆಗೆ:- ಬರೆ ಧಾತು**

| ವಿಧ್ಯರ್ಥ | | ನಿಷೇಧಾರ್ಥ | | ಸಂಭಾವನಾರ್ಥ | |
|---|---|---|---|---|---|
| ಏಕವಚನ | ಬಹುವಚನ | ಏಕವಚನ | ಬಹುವಚನ | ಏಕವಚನ | ಬಹುವಚನ |
| ಬರೆಯಲಿ | ಬರೆಯಲಿ | ಬರೆಯನು | ಬರೆಯರು | ಬರೆದಾನು | ಬರೆದಾರು |
| ಬರೆಯಲಿ | ಬರೆಯಲಿ | ಬರೆಯಳು | ಬರೆಯರು | ಬರೆದಾಳು | ಬರೆದಾರು |
| ಬರೆಯಲಿ | ಬರೆಯಲಿ | ಬರೆಯದು | ಬರೆಯವು | ಬರೆದೀತು | ಬರೆದಾವು |
| ಬರೆ | ಬರೆಯಿರಿ | ಬರೆಯೆ | ಬರೆಯಿರಿ | ಬರೆದೀಯೆ | ಬರೆದೀರಿ |

## ಸಂಧಿಗಳು

ಎರಡು ಅಕ್ಷರಗಳು ಸ್ಥಳ , ಕಾಲ ವಿಳಂಬವಿಲ್ಲದೆ ಅರ್ಥಕ್ಕೆ ಅನುಗುಣವಾಗಿ ಒಂದನ್ನೊಂದು ಸೇರುವುದಕ್ಕೆ ಸಂಧಿ ಎನ್ನುವರು.

- **ಲೋಪ ಸಂಧಿ:**

  ಸ್ವರದ ಮುಂದೆ ಸ್ವರವು ಸೇರಿ ಸಂಧಿಯಾದಾಗ ಪೂರ್ವಪದದ ಕೊನೆಯ ಸ್ವರವು ಬಿಟ್ಟು ಹೋದರೆ ಅಥವಾ ಲೋಪವಾದರೆ ಅದನ್ನು ಲೋಪಸಂಧಿ ಎನ್ನುವರು.

  **ಉದಾ:** ಕಾಣಲು+ಆಗದು =ಕಾಣಲಾಗದು. ಊರು+ಊರು = ಊರೂರು.
  ನಾನು + ಆರ್ಗೀವೆಂ = ನಾನಾರ್ಗೀವೆಂ ಇನಿತು + ಇಲ್ಲ = ಇನಿತಿಲ್ಲ

- **ಆಗಮಸಂಧಿ :**

  ಸ್ವರದ ಮುಂದೆ ಸ್ವರ ಬಂದಾಗ ಪೂರ್ವಸ್ವರಾಕ್ಷರ ಬಿಟ್ಟು ಹೋಗದೆ ಆ ನಡುವೆ 'ಯ' ಕಾರವೋ ಅಥವಾ 'ವ' ಕಾರವೋ ಬಂದು ಸೇರುತ್ತದೆ. ಹೀಗೆ ಹೊಸದೊಂದು ಅಕ್ಷರ ಆಗಮವಾಗುವುದಕ್ಕೆ ಆಗಮಸಂಧಿ ಎನ್ನುವರು.

  - **'ಯ' ಕಾರ ಆಗಮಕ್ಕೆ ಉದಾ :** ಬಿಸಿ + ಆಯಿತು = ಬಿಸಿಯಾಯಿತು.
    ಕೈ + ಇಂದ = ಕೈಯಿಂದ ಶಾಲೆ + ಅಲ್ಲಿ = ಶಾಲೆಯಲ್ಲಿ
  - **'ವ' ಕಾರ ಆಗಮಕ್ಕೆ ಉದಾ :** ನಡು + ಇರುಳು= ನಡುವಿರುಳು
    ಹೆಣ + ಆದವು = ಹೆಣವಾದವು ಜಯ +ಆಗಲಿ = ಜಯವಾಗಲಿ

- **ಆದೇಶ ಸಂಧಿ :**

  **ಸಂಧಿ ಕಾರ್ಯ ನಡೆದಾಗ ಉತ್ತರ ಪದದ ಕ, ತ, ಪ ವ್ಯಂಜನಗಳಿಗೆ ಅನುಕ್ರಮವಾಗಿ ಗ, ದ, ಬ ವ್ಯಂಜನಗಳು ಆದೇಶವಾಗಿ ಬಂದರೆ ಅದನ್ನು ಆದೇಶ ಸಂಧಿ ಎನ್ನುವರು.**

  **ಉದಾ :** ಹೊಸ + ಕಾಲ = ಹೊಸಕಾಲ ತಲೆ + ತೂಗು = ತಲೆತೂಗು
  ಕಣ್ + ಪನಿ = ಕಂಬನಿ ಮೆಲ್ + ಮಾತು= ಮೆಲ್ವಾತು
  ಬಿಲ್ಲು + ಪಿಡಿ = ಬಿಲ್ವಿಡಿ

- **ಸವರ್ಣ ದೀರ್ಘ ಸಂಧಿ :**

  ಸವರ್ಣ ಸ್ವರಗಳು ಸೇರಿ ಸಂಧಿಯಾದಾಗ ಅದೇ ವರ್ಣವು ದೀರ್ಘವಾಗಿ ಬಂದರೆ ಅದನ್ನು ಸವರ್ಣ ದೀರ್ಘ ಸಂಧಿ ಎನ್ನುವರು.

  **ಉದಾ:** ಶ್ರಮಣಿಯ + ಆಶ್ರಮ = ಶ್ರಮಣಿಯಾಶ್ರಮ ಕಾರಣ + ಅಂತರ = ಕಾರಣಾಂತರ
  ಮಹಾ + ಆತ್ಮ = ಮಹಾತ್ಮ

- **ಗುಣ ಸಂಧಿ:**

  ಸಂಧಿ ಕಾರ್ಯ ನಡೆದಾಗ ಪೂರ್ವಪದದ ಕೊನೆಯಲ್ಲಿ ಇರುವ ಅ,ಆ ಸ್ವರಗಳಿಗೆ , ಉತ್ತರದಲ್ಲಿ ಇ.ಈ ಸ್ವರಗಳು ಪರವಾದರೆ 'ಏ' ಕಾರವು, ಉ, ಊ ಸ್ವರಗಳು ಪರವಾದರೆ 'ಓ' ಕಾರವು, ಋ ಸ್ವರವು ಪರವಾದರೆ 'ಅರ್' ಕಾರವು ಬಂದರೆ ಅದನ್ನು ಗುಣಸಂಧಿ ಎನ್ನುವರು.

  **ಉದಾ :** ಘ್ರಾಣ + ಇಂದ್ರಿಯ = ಘ್ರಾಣೇಂದ್ರಿಯ ಚತುರ + ಉಕ್ತಿ = ಚತುರೋಕ್ತಿ
  ಮಹಾ + ಋಷಿ = ಮಹರ್ಷಿ ಜ್ಞಾನ + ಈಶ್ವರ = ಜ್ಞಾನೇಶ್ವರ

- **ವೃದ್ಧಿ ಸಂಧಿ :**

  ಸಂಧಿ ಕಾರ್ಯ ನಡೆದಾಗ ಪೂರ್ವಪದದ ಕೊನೆಯಲ್ಲಿ ಇರುವ ಅ,ಆ ಸ್ವರಗಳಿಗೆ , ಉತ್ತರದಲ್ಲಿ ಏ ಅಥವಾ ಐ ಸ್ವರಗಳು ಪರವಾದರೆ ಆಗ ಐ ಕಾರವು, ಓ ಅಥವಾ ಔ ಸ್ವರಗಳು ಪರವಾದರೆ ಔ ಕಾರವು ಆದೇಶವಾಗಿ ಬರುತ್ತದೆ. ಇದನ್ನು ವೃದ್ಧಿ ಸಂಧಿ ಎನ್ನುವರು

  **ಉದಾ :** ಜನ + ಐಕ್ಯ = ಜನೈಕ್ಯ ವನ + ಓಷಧ = ವನೌಷಧ
  ಅಷ್ಟ + ಐಶ್ವರ್ಯ = ಅಷ್ಟೈಶ್ವರ್ಯ

- **ಯಣ್ ಸಂಧಿ :**

  ಸಂಧಿ ಕಾರ್ಯ ನಡೆದಾಗ ಪೂರ್ವಪದದ ಕೊನೆಯಲ್ಲಿ ಇರುವ ಇ, ಈ, ಉ, ಊ, ಋ ಸ್ವರಗಳಿಗೆ , ಉತ್ತರದಲ್ಲಿ ಸವರ್ಣವಲ್ಲದ ಸ್ವರ ಪರವಾದರೆ ಇ,ಈ ಸ್ವರಗಳಿಗೆ 'ಯ' ಕಾರವು , ಉ, ಊ ಸ್ವರಗಳಿಗೆ 'ವ' ಕಾರವು, ಋ ಸ್ವರಕ್ಕೆ 'ರ್ ' ಕಾರವು ಆದೇಶವಾಗಿ ಬಂದರೆ ಅದನ್ನು ಯಣ್ ಸಂಧಿ ಎನ್ನುವರು.

  **ಉದಾ :** ಅತಿ + ಅವಸರ = ಅತ್ಯವಸರ ಪಿತೃ + ಅರ್ಜಿತ = ಪಿತ್ರಾರ್ಜಿತ
  ಮನು + ಅಂತರ = ಮನ್ವಂತರ ಕೋಟಿ + ಅನುಕೋಟಿ = ಕೋಟ್ಯನುಕೋಟಿ

- **ಜಶ್ತ್ವ ಸಂಧಿ :**

  ಪೂರ್ವ ಪದದ ಕೊನೆಯಲ್ಲಿರುವ ಕ ,ಚ, ಟ, ತ,ಪ ವ್ಯಂಜನಗಳಿಗೆ ಯಾವ ಅಕ್ಷರ ಎದುರಾದರು ಅದೇ ವರ್ಗದ ಮೂರನೇ ವ್ಯಂಜನಾಕ್ಷರವು ಆದೇಶವಾಗಿ ಬಂದರೆ ಅದನ್ನು ಜಶ್ತ್ವ ಸಂಧಿ ಎನ್ನುವರು.

  **ಉದಾ** : ವಾಕ್ + ದೇವಿ = ವಾಗ್ದೇವಿ　　ಅಚ್ + ಅಂತ = ಅಜಂತ

  ಷಟ್ + ಆನನ = ಷಡಾನನ　　ಚಿತ್ + ಆನಂದ = ಚಿದಾನಂದ

  ಅಪ್ + ಧಿ = ಅಬ್ಧಿ

- **ಶ್ಚುತ್ವ ಸಂಧಿ :**

  ಪೂರ್ವಪದದ ಕೊನೆಯಲ್ಲಿ ಸ ಕಾರವಾಗಲೀ, ತ ವರ್ಗವಾಗಲೀ ಇದ್ದು ಉತ್ತರದ ಆದಿಯಲ್ಲಿರುವ ಶ ಕಾರ, ಚ ವರ್ಗದ ಅಕ್ಷರಗಳೊಂದಿಗೆ ಸಂಧಿಯಾದರೆ ಸ ಕಾರಕ್ಕೆ ಶ ಕಾರವು, ತ ವರ್ಗಕ್ಕೆ ಚ ವರ್ಗವು ಆದೇಶವಾಗಿ ಬರುತ್ತದೆ. ಇದನ್ನು ಶ್ಚುತ್ವ ಸಂಧಿ ಎನ್ನುವರು.

  ಉದಾ : ಶರತ್ +ಚಂದ್ರ = ಶರಚ್ಚಂದ್ರ　　ಪಯಸ್ + ಶಯನ = ಪಯಶ್ಶಯನ

  ಜಗತ್ + ಜ್ಯೋತಿ = ಜಗಜ್ಜ್ಯೋತಿ　　ಬೃಹತ್ + ಛತ್ರ = ಬೃಹಚ್ಛತ್ರ

- **ಅನುನಾಸಿಕ ಸಂಧಿ :**

  ಪೂರ್ವಪದದ ಕೊನೆಯಲ್ಲಿ ಆಯಾವರ್ಗದ ಪ್ರಥಮ ಅಕ್ಷರಗಳಿದ್ದು, ಯಾವುದೇ ಅನುನಾಸಿಕ ಪರವಾಗಿ ಸಂಧಿಯಾದರೆ ಅದೇ ವರ್ಗದ ಅನುನಾಸಿಕ ವು ಬರುತ್ತದೆ. ಅದನ್ನು ಅನುನಾಸಿಕ ಸಂಧಿ ಎನ್ನುವರು.

  **ಉದಾ :** ಷಟ್ + ಮುಖ = ಷಣ್ಮುಖ　　ಸತ್ + ಮಾನ = ಸನ್ಮಾನ

  ದಿಕ್ + ಮೂಢ = ದಿಙ್ಮೂಢ

## ಅನ್ಯದೇಶ್ಯ ಪದಗಳು

**ಸಂಸ್ಕೃತವನ್ನು ಹೊರತುಪಡಿಸಿ ಬೇರೆ ಭಾಷೆಗಳಿಂದ ಕನ್ನಡ ಭಾಷೆಗೆ ಬಂದಿರುವ ಪದಗಳನ್ನು ಅನ್ಯದೇಶ್ಯ ಪದಗಳು ಎಂದು ಕರೆಯಲಾಗಿದೆ.**

➔ **ಗ್ರೀಕ್ ಮತ್ತು ರೋಮನ್ ಭಾಷೆಗಳಿಂದ :**

ದಮ್ಮಡಿ, ದಮಡಿ, ದಮ್ಮು, ದೀನಾರ, ಗದ್ಯಾಣ. – ಇತ್ಯಾದಿ

➔ **ಅರಬ್ಬೀ ಭಾಷೆಯಿಂದ :**

ಅಮಾನತು, ಅಸಲು, ಇನಾಮು, ಕಾಯ್ದೆ, ಗಲೀಜು, ಸಾಹೇಬ, ತಕರಾರು, ತರಬೇತು, ನಕಲಿ – ಇತ್ಯಾದಿ.

➔ **ಪೋರ್ಚುಗೀಸ್ ಭಾಷೆಯಿಂದ :**

ಅನಾನಸು, ಜಂಗಾಲು, ಮೇಜು, ಸಾಬೂನು, ಚೊಂಬು, ಚಾ, ಇಸ್ತಿ, ರಸೀದಿ – ಇತ್ಯಾದಿ

➔ **ಉರ್ದು ಭಾಷೆಯಿಂದ :**

ಕಿಮ್ಮತ್ತು, ತಾರೀಕು, ತಾಲೂಕು, ಅಹವಾಲು, ಇಲಾಖೆ, ದರ್ಜೆ, ಬಂದೂಕು, ರುಜು, ಶುರು, ಶಾಮೀಲು– ಇತ್ಯಾದಿ

➔ **ಹಿಂದೂಸ್ಥಾನಿಯಿಂದ :**

ಅರ್ಜಿ, ಕಛೇರಿ, ಕಾರ್ಖಾನೆ, ಸಲಾಮು, ದರ್ಬಾರು, ಕುರ್ಚಿ, ಕಾಗದ, ಹುಕುಂ – ಇತ್ಯಾದಿ

➔ **ಫಾರ್ಸಿಯಿಂದ :**


ಅಬಕಾರಿ, ರಸ್ತೆ, ದವಾಖಾನೆ, ಚೌಕಾಶಿ, ಜಮೀನು, ಅಜಮಾಯಿಸಿ, ಆಮದು, ದಲ್ಲಾಳಿ, ಕಾರಕೂನ, ದಿವಾನ–ಇತ್ಯಾದಿ


➔ **ಇಂಗ್ಲೀಷ್ ನಿಂದ :**


ಮೋಟಾರು, ಲೈಟು, ಪೆನ್ನು, ಕಾರು, ಮ್ಯಾಜಿಕ್, ಸ್ಯಾನಿಟರಿ, ಬಸ್ಸು – ಇತ್ಯಾದಿ

## ಉಪನಿರ್ದೇಶಕರ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ.
## ಹಾಸನ ಜಿಲ್ಲೆ












# ಎಸ್.ಎಸ್.ಎಲ್.ಸಿ
# ವಿದ್ಯಾರ್ಥಿ ಜ್ಞಾನ ದೀವಿಗೆ



## ಪ್ರಥಮ ಭಾಷೆ ಕನ್ನಡ







**ಹಾಸನ ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘ (ರಿ)**